ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಬಾಪು ಪ್ರಪಂಚ


ಕನ್ನಡ - English Monthly

ಸಂಪುಟ – 2 : ಸಂಚಿಕೆ – 7 ಅಕ್ಟೋಬರ್ 2020 ಪುಟ – 32 ₹ 20/-



ಸಂಸ್ಮರಣೆ : ಲಾಲ್ ಬಹಾದ್ದೂರ್ ಶಾಸ್ತ್ರಿಜಿ : (02.10.1904 – 11.01.1966)

– ಡಾ. ವೂಡೇ ಪಿ. ಕೃಷ್ಣ



ಭಾರತದ ಅತ್ಯಂತ ಪ್ರಾಮಾಣಿಕ, ದಕ್ಷ, ಸರಳ ಶಿಸ್ತಿನ ಸಜ್ಜನ ಪ್ರಧಾನಿ ಲಾಲ್ ಬಹಾದ್ದೂರ್ ಶಾಸ್ತ್ರಿ ಅವರಾಗಿದ್ದಾರೆ. ಅವರು ಮೊಘಲ್ ಸಾರಾಯ್‌ನಲ್ಲಿ ಗಾಂಧೀಜಿ ಅವರ ಜನ್ಮದಿನದಂದೇ ಅಂದರೆ ಅಕ್ಟೋಬರ್ 2ರಂದೇ ಜನಿಸಿದವರಾಗಿದ್ದಾರೆ. ಸ್ವತಂತ್ರ ಭಾರತದ ಎರಡನೇ ಪ್ರಧಾನಿಯಾಗಿದ್ದ ಇವರು ಭಾರತದ ಸ್ವಾತಂತ್ರ್ಯಕ್ಕೆ ಹೋರಾಡಿದವರಾಗಿದ್ದಾರೆ. 1921ರಲ್ಲಿ ಮಹಾತ್ಮ ಗಾಂಧಿ ಅವರ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಲು ಇವರು ತಮ್ಮ ಶಿಕ್ಷಣವನ್ನು ಅರ್ಧದಲ್ಲೇ ತ್ಯಜಿಸಿದರು. ಕಾಶಿ ವಿದ್ಯಾ ಪೀಠದಿಂದ ಇವರಿಗೆ ಶಾಸ್ತ್ರಿ ಎಂಬ ಬಿರುದು 1926ರಲ್ಲಿ ಕೊಡಲ್ಪಟ್ಟಿತು. ಒಂಬತ್ತು ವರ್ಷಗಳ ಕಾಲ ಕಾರಾಗೃಹವಾಸ ಅನುಭವಿಸಿದ ಇವರು 1946 ರವರೆಗೂ ಜೈಲಿನಲ್ಲಿದ್ದರು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ, ಹೋರಾಟಗಾರರಿಗೆ ದಿ ಸರ್ವೆಂಟ್ ಆಫ್ ಇಂಡಿಯಾ ಸೊಸೈಟಿಯಿಂದ ಹಣಸಹಾಯ ಮಾಡುವ ರೂಢಿಯಂತೆ, ಶಾಸ್ತ್ರಿ ಅವರ ಕುಟುಂಬ ನಿರ್ವಹಣೆಗೆ 50 ರೂಪಾಯಿಗಳನ್ನು ನೀಡಲಾಗುತ್ತಿತ್ತು. ಶಾಸ್ತ್ರಿ ಅವರು ಅವರ ಪತ್ನಿಗೆ, ಒಮ್ಮೆ ಈ ಹಣದ ಬಗ್ಗೆ ವಿಚಾರಿಸಿದ್ದರು. ಲಲಿತಾ ಶಾಸ್ತ್ರಿ ಅವರು ಉತ್ತರ ಬರೆಯುತ್ತಾ, ಆ ಹಣದಲ್ಲಿ 40 ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿ ಇನ್ನು ಉಳಿದ 10 ರೂಪಾಯಿಯನ್ನು ಉಳಿಸುತ್ತಿದ್ದೇನೆ ಎಂದು ಬರೆದರು. ಶಾಸ್ತ್ರಿ ಅವರು ಆ ಉಳಿದ 10 ರೂಪಾಯಿಯನ್ನು ಕಷ್ಟದಲ್ಲಿರುವ ಸ್ವಾತಂತ್ರ್ಯ ಹೋರಾಟಗಾರರಿಗೆ ಕೊಡಬೇಕೆಂದು ಪತ್ರ ಬರೆದರು. ದಂಪತಿಗಳ ಅಪರಿಗ್ರಹನೀತಿ ಮಾದರಿಯಾಗಿದೆ.

ಇವರು ಭಾರತವನ್ನು ಸ್ವಾವಲಂಬಿ ಮತ್ತು ಸ್ವಾಭಿಮಾನಿ ದೇಶವಾಗಿ ಮಾಡುವಲ್ಲಿ ಶ್ರಮಿಸಿದ್ದಾರೆ. ಅವರು ಪ್ರಧಾನಿಯಾದ ಸಂದರ್ಭದಲ್ಲಿ ದೇಶದಲ್ಲಿ ಬರಗಾಲ ಬಂದೊದಗಿತು. ಆಗ ಹೊರದೇಶದಿಂದ ಆಹಾರವನ್ನು ಆಮದು ಮಾಡಿಕೊಳ್ಳಬೇಕಾಯಿತು. ಸಾಲ ಭಾರ ಅಧಿಕವಾಯಿತು. ಅದನ್ನರಿತ ಶಾಸ್ತ್ರಿಜಿ ಅವರು ವಾರದಲ್ಲಿ ಒಂದು ದಿನ ಊಟವನ್ನು ಬಿಟ್ಟರೆ ಎಷ್ಟೋ ಆಹಾರ ಸಂಗ್ರಹವಾಗುವುದೆಂದು, ಸೋಮವಾರ ರಾತ್ರಿ ಊಟವನ್ನು ಬಿಡಲು ಸಾರ್ವಜನಿಕರಲ್ಲಿ ಮನವಿ ಮಾಡಿದರು. ತಾವೂ ಸಹ ಸೋಮವಾರದ ಊಟವನ್ನು ತ್ಯಜಿಸಿದರು. ಇಂದಿಗೂ ಸಹ ಶಾಸ್ತ್ರಿ ಅವರ ಸೋಮವಾರದ ಉಪವಾಸ ಪ್ರಚಲಿತದಲ್ಲಿದೆ. ಅವರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಬಿಹಾರದ ಜನರು ಅವರನ್ನು ಭೇಟಿಯಾಗಲು ಬಂದಿದ್ದರು. ಅವರಿಗೆ ನಾಲ್ಕು ಗಂಟೆಯ ಸಮಯ ನಿಗದಿಯಾಗಿತ್ತು. ಸಂಸತ್ ಭವನದ ಸಭೆಯಲ್ಲಿ ಭಾಗಿಯಾದ ಪ್ರಧಾನಿಗೆ, ಸಮಯಕ್ಕೆ ಸರಿಯಾಗಿ ಬರಲಾಗದ್ದರಿಂದ, ಭೇಟಿ ಮಾಡಲು ಬಂದವರು ನಿರ್ಗಮಿಸಿದ್ದರು. ವಿಷಯ ತಿಳಿದ ಶಾಸ್ತ್ರಿ ಅವರು, ಬಸ್ ನಿಲ್ದಾಣಕ್ಕೆ ಖುದ್ದಾಗಿ ಹೋಗಿ ಅವರನ್ನು ಮತ್ತೆ ಕರೆತಂದು ಮಾತನಾಡಿದ್ದರು. ಇವರ ಸಂದೇಶ "ಜೈ ಜವಾನ್, ಜೈ ಕಿಸಾನ್" ಇಂದಿಗೂ ಕೃಷಿಕರ, ರೈತರ ಸ್ವಾಭಿಮಾನಿ ಘೋಷಣೆಯಾಗಿದೆ. ಅವರ ಆಡಳಿತಾವಧಿಯಲ್ಲಿ ಭಾರತ ಪಾಕಿಸ್ತಾನದ ಗಡಿವಿವಾದ ಪ್ರಮುಖವಾಗಿತ್ತು. ಇದರಿಂದ ಕಚ್ ಬಳಿ ನಡೆದ ಯುದ್ಧ ಯುಎನ್ ಮಧ್ಯಸ್ಥಿಕೆಯಿಂದ ನಿಲುಗಡೆಯಾಗಿತ್ತು. ಜಮ್ಮು–ಕಾಶ್ಮೀರದಲ್ಲಿ ಮತ್ತೊಮ್ಮೆ ಭುಗಿಲೆದ್ದಿತು. ಭಾರತ–ಪಾಕ್ ಪ್ರಮುಖ ಯುದ್ಧ ಪ್ರಾರಂಭವಾಗಿ ಭಾರತದ ಪಡೆ ಲಾಹೋರ್ ಆಕ್ರಮಿಸುವ ಹಂತದಲ್ಲಿರುವಾಗಲೇ ಶಾಂತಿ ಒಪ್ಪಂದಕ್ಕೆ ರಷ್ಯಾ ಕರೆನೀಡಿತು. ಜನವರಿ 1966ರಲ್ಲಿ ಶಾಸ್ತ್ರಿಜಿ ಮತ್ತು ಮಹಮ್ಮದ್ ಆಯೂಬ್ ಖಾನ್, (ಪಾಕಿಸ್ತಾನದ ಪ್ರಧಾನ ಮಂತ್ರಿ) ಅಲೆಕ್ಸೈ ನಿಕೊಲಯೆವಿಚ್ ಕೊಸಿಜಿನ್ ಅವರಿಂದ ತಾಷ್ಕೆಂಟ್‌ನಲ್ಲಿ ಆಯೋಜಿಸಲಾದ ಮಾತುಕತೆಯಲ್ಲಿ ಭಾಗವಹಿಸಿದ್ದರು. ಶಾಸ್ತ್ರಿಜಿ ಅವರು ಜನವರಿ 10 ರಂದು ತಾಷ್ಕೆಂಟ್ ಡಿಕ್ಲೆರೇಶನ್ ಒಪ್ಪಂದಕ್ಕೆ ಸಹಿ ಹಾಕಿದರು. ಮರುದಿನವೇ ಅವರು ಹೃದಯಾಘಾತದಿಂದ ನಿಧನರಾಗಿದ್ದರು. ಪಾಕಿಸ್ತಾನದವರೇ ಊಟದಲ್ಲಿ ವಿಷವನ್ನು ಹಾಕಿದ್ದರು ಎಂಬ ಸಂಶಯದ ಹೊಗೆಯಾಡುತ್ತಲೇ ಇದೆ. ಆದರೆ ಅದನ್ನು ಅಲ್ಲಿನ ವೈದ್ಯರು ದೃಢಪಡಿಸಿಲ್ಲ. ಇವರು ದೇಶದಾಚೆ ಸಾವನ್ನಪ್ಪಿದ ಭಾರತದ ಪ್ರಧಾನ ಮಂತ್ರಿಯವರಾಗಿದ್ದಾರೆ. ಇವರಿಗೆ ಮರಣಾನಂತರ "ಭಾರತ ರತ್ನ" ಗೌರವವನ್ನು ಪ್ರಧಾನ ಮಾಡಲಾಗಿದೆ. ಇವರ ಸ್ಮರಣಾರ್ಥ ದೆಹಲಿಯಲ್ಲಿ ಸ್ಮಾರಕ ನಿರ್ಮಿಸಲಾಗಿದೆ. ಇತ್ತೀಚೆಗೆ ಅವರ 'ತಾಷ್ಕೆಂಟ್ ಡೈರಿ' ಕೃತಿ ಸಹ ಬಿಡುಗಡೆಯಾಗಿದೆ.



ಸರಸ್ವತಿ ಬಾಯಿ ರಾಜವಾಡೆ : (03.10.1913 – 23.04.1994)

– ಇಂದಿರಾ ಕೃಷ್ಣಪ್ಪ

ಇಪ್ಪತ್ತನೆಯ ಶತಮಾನ ಕನ್ನಡ ಸಾಹಿತ್ಯ ಮಹತ್ವದ ಬದಲಾವಣೆಗಳಿಗೆ ತೆರೆದುಕೊಂಡಿತು. ಮಹಿಳಾ ಸಾಹಿತ್ಯದ ಆರಂಭ ಕಾಲವೆನ್ನಬಹುದು. ವಸಾಹತುಶಾಹಿಯ ಆಡಳಿತದ ವಿರುದ್ಧ ನಡೆದ ಸಾಹಿತ್ಯ, ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕ ಹೋರಾಟಗಳಿಂದಾಗಿ ಶಿಕ್ಷಣ ಸಾಹಿತ್ಯ ಪತ್ರಿಕೆ, ಸಂಘಟನೆ, ಹೋರಾಟದ ಹೊಸ ಪರ್ವವೇ ಆರಂಭವಾಯಿತು. ಮಹಿಳಾ ಸಾಹಿತ್ಯ ಕ್ಷೇತ್ರದಲ್ಲಿ ಹಲವಾರು ಮಹಿಳಾ ಸಾಹಿತಿಗಳು ತಮ್ಮ ಬರಹಗಳಲ್ಲಿ ಅಬಲೆಯರ, ಶೋಷಿತ ಹೆಣ್ಣುಮಕ್ಕಳ ಬಾಳಿನ ವಾಸ್ತವ ಚಿತ್ರಣವನ್ನು ಸಮಾಜದ ಮುಂದೆ ತೆರೆದಿರಿಸಿದರು. ಹೆಣ್ಣು ಮಕ್ಕಳ ಉದ್ಧಾರಕ್ಕಾಗಿ ಸಮಾಜದ ವಿವಿಧ ರಂಗಗಳಲ್ಲಿ ದುಡಿದರು. ಅಂತಹವರಲ್ಲಿ ಹಿರಿಯ ಲೇಖಕಿ ಶ್ರೀಮತಿ ಸರಸ್ವತಿಬಾಯಿ ರಾಜವಾಡೆ ಅವರೂ ಒಬ್ಬರು. ಗಿರಿಬಾಲೆ ಎಂಬ ಕಾವ್ಯನಾಮದಿಂದ ಹೆಸರಾಗಿದ್ದ ರಾಜವಾಡೆ ಅವರದು ಬಹುಮುಖ ಪ್ರತಿಭೆ. ಉಡುಪಿಯ ಒಳಂಜಾಲ ಎಂಬ ಹಳ್ಳಿಯ ನಾರಾಯಣರಾವ್ ಕಮಲಾಬಾಯಿ ದಂಪತಿಗೆ ಸರಸ್ವತಿ ಮಗಳಾಗಿ ಜನಿಸಿದರು. ಪಾಟಿ ಬಳಪಗಳಿಗೂ ದುಡ್ಡಿಲ್ಲದ ಪರಿಸ್ಥಿತಿಯಲ್ಲಿ ಹಠಮಾಡಿ ಶಾಲೆಗೆ ಸೇರಿದ ಮಗಳಿಗೆ ತಾಯಿ ಅವರಿವರನ್ನು ಯಾಚಿಸಿ ಓದಿಸಲು ಮುಂದಾದರು. 1928ರಲ್ಲಿ ರಾಯಶಾಸ್ತ್ರಿ ರಾಜವಾಡೆ ಅವರನ್ನು ಮದುವೆಯಾದಾಗ ಗಿರಿಬಾಲೆ ಅವರಿಗೆ 15 ವರ್ಷ. ರಾಜವಾಡೆ ಅವರಿಗೆ 51 ವರ್ಷಗಳಾಗಿತ್ತು. ಸರಸ್ವತಿ ಅವರ ಓದಿನ ಗೀಳಿನಿಂದಾಗಿ ಹಲವು ಪತ್ರಿಕೆಗಳನ್ನು ತರಿಸಿ ಓದುತ್ತಿದ್ದರು. ಓದುತ್ತಾ ಹೋದಂತೆ ಬರೆಯಬೇಕೆಂಬ ತುಡಿತ ಹೆಚ್ಚಿತು. ಅದರ ಫಲವೇ ಅವರ ಮೊದಲ ಕಥೆ 'ನನ್ನ ಅಜ್ಞಾನ'. ಮೊದಲು ರಾಜವಾಡೆ ಅವರಿಗೆ ಗೊತ್ತಾಗದಂತೆ ಬರೆಯುತ್ತಿದ್ದರು. ರಾಜವಾಡೆ ಅವರು ಪತ್ನಿಯ ಓದಿನ ಆಸಕ್ತಿ ಅರಿತು, ಬರೆಯಲು ಪ್ರೋತ್ಸಾಹಿಸಿದ್ದಲ್ಲದೇ, ಮನೆಯಲ್ಲೇ ಪಾಠ ಹೇಳಿಸಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕಟ್ಟಿಸಿದರು. ಅದರಲ್ಲಿ ಅವರು ಉತ್ತಮ ದರ್ಜೆಯಲ್ಲಿ ಪಾಸಾದರು. ನಂತರ ಕನ್ನಡ, ಹಿಂದಿ, ತಮಿಳು, ಇಂಗ್ಲಿಷ್, ಸಂಸ್ಕೃತ, ಮರಾಠಿ ಭಾಷೆಗಳಲ್ಲಿ ಪ್ರಾವೀಣ್ಯತೆ ಹೊಂದಿದ್ದರು. ಇವರು ಕವನ, ಅನುವಾದ, ನಾಟಕ, ಪತ್ರಿಕೋದ್ಯಮ, ಅಂಕಣ ಬರಹ, ಸಂಪಾದನೆ ಹೀಗೆ ಹತ್ತು ಹಲವು ಕ್ಷೇತ್ರಗಳಲ್ಲಿ ಕೃಷಿ ಮಾಡಿದರು. ಅವರ ಮೊದಲ ಕಥಾ ಸಂಕಲನ ಆಹುತಿ 1938ರಲ್ಲಿ ಪ್ರಕಟಗೊಂಡಿತು. 65 ಕಥೆಗಳು, 23 ಕವನಗಳು, 1 ಕಾದಂಬರಿ, 7 ನಾಟಕಗಳು, 5 ಧಾರ್ಮಿಕ ಕೃತಿಗಳು, 46ಕ್ಕೂ ಮಿಕ್ಕಿ ಲೇಖನಗಳನ್ನು ಬರೆದರು. ಅಂದಿನ ಪತ್ರಿಕೆಗಳಿಗೆ ಅಂಕಣ ಬರಹ ಬರೆಯುತ್ತಲೇ, ಇವರೇ 'ಸುಪ್ರಭಾತ' ಎಂಬ ಪತ್ರಿಕೆ ಹಾಗೂ 'ಕಮಲ' ಎಂಬ ಸಂಚಿಕೆಯನ್ನು ಹೊರತಂದರು. ಸಮಾಜ ಸೇವೆ, ಜಾತೀಯತೆ ವಿರೋಧ, ಸ್ತ್ರೀ ಪುರುಷ ಸಮಾನತೆ, ಸ್ತ್ರೀ ಶಿಕ್ಷಣದ ಮಹತ್ವ ಕುರಿತಾದ ಅನೇಕ ಲೇಖನಗಳು ಇವರ ಲೇಖನಿಯಿಂದ ಹೊರಹೊಮ್ಮಿದೆ. ಅವರ ಅಂತಿಮ ಕಾಲದಲ್ಲಿ ಆಧ್ಯಾತ್ಮಿಕಕ್ಕೆ ಅರ್ಪಿಸಿಕೊಂಡರು.



ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಕನ್ನಡ – ಇಂಗ್ಲಿಷ್ ಮಾಸಪತ್ರಿಕೆ

BAPU PRAPANCHA
(A Monthly Kannada - English
Magazine of Gandhian Thoughts)

ಪ್ರಧಾನ ಸಂಪಾದಕರು : ಡಾ.ವೂಡೇ ಪಿ. ಕೃಷ್ಣ
Chief Editor : **Dr. Wooday P. Krishna**

ಸಂಪಾದಕರು : ಇಂದಿರಾ ಕೃಷ್ಣಪ್ಪ
Editor : **Indira Krishnappa**

ಸಲಹಾ ಸಂಪಾದಕರು : ವಿ.ಎನ್. ತಿಪ್ಪನಗೌಡ
Advisory Editor : **V.N. Tippana Gouda**

ಪ್ರಕಾಶಕರು : ಕಾರ್ಯದರ್ಶಿ

ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಗಾಂಧೀ ಭವನ
ಕುಮಾರ ಪಾರ್ಕ್ ಪೂರ್ವ, ಬೆಂಗಳೂರು–560001

Published by :
Karnataka Gandhi Smaraka Nidhi
Gandhi Bhavana, Kumarapark East
Bengaluru - 560001
Phone : +91 80 22261967, 9738605799
gandhibhavanabengaluru@gmail.com

Design & Print : **CreativeGeekZ**
Yadhava College Road, Madhavanagara
Bengaluru - 560001
Ph : +91 80 40927049
E-mail : mail@creativegeekz.com

ಈ ಸಂಚಿಕೆಯಲ್ಲಿ

ಸಂಪಾದಕೀಯ

ಇಂದಿರಾ ಕೃಷ್ಣಪ್ಪ

ಎಲ್ಲರಿಗೂ ನಮಸ್ಕಾರಗಳು,

ಬಾಪೂಜಿ ಅವರ 151ನೇ ಜನ್ಮದಿನಾಚರಣೆಯ ತಿಂಗಳಿನ ಈ ಸಂಚಿಕೆಯಲ್ಲಿ, ಬಾ-ಬಾಪುವಿನ ಹಲವಾರು ಚಿಂತನೆಗಳು, ತತ್ವ, ಸಂದೇಶಗಳು, ಅವರ ಜೀವನ ನಡೆಗಳನ್ನು ಒಳಗೊಂಡಂತೆ ನಿಮ್ಮ ಕೈಗೆ ತಲುಪಿಸಲು ಸಂತೋಷವಾಗುತ್ತಿದೆ. ಬಾ-ಬಾಪು 150ನೇ ವರ್ಷಾಚರಣೆಯ ಎಲ್ಲಾ ಸಂತೋಷ, ಸಂಭ್ರಮ, ನೆಮ್ಮದಿಗಳನ್ನು ಕ್ರಮಿಸುವಾಗ ತಾವೆಲ್ಲರೂ ನಾನಾ ವಿಧದಲ್ಲಿ ಗಾಂಧಿ ಭವನದ ಕಾರ್ಯಕ್ರಮ, ಶಿಬಿರ, ಚರ್ಚೆ, ಸಂವಾದ, ವಿಚಾರ ಸಂಕಿರಣ, ವಿಚಾರ ವಿನಿಮಯಗಳಲ್ಲಿ ಪಾಲ್ಗೊಂಡಿರುತ್ತೀರಿ. ಜವಾಬ್ದಾರಿಗಳನ್ನು ಹಂಚಿಕೊಂಡಿರುತ್ತೀರಿ. ಆದ್ದರಿಂದ ತಮ್ಮೆಲ್ಲರಿಗೂ ಬಾಪುವಿನ 151ನೇ ಜನ್ಮ ದಿನಾಚರಣೆಯ ಶುಭಾಶಯಗಳನ್ನು ತಿಳಿಸುತ್ತೇವೆ.

ಈ ಜನ್ಮ ದಿನಾಚರಣೆಯ ಸಂದರ್ಭದಲ್ಲಿಯೂ, ವಿಶ್ವದಲ್ಲಿರುವ ಭಾರತವೂ ಸೇರಿದಂತೆ, ಎಲ್ಲ ದೇಶಗಳು ಕರೋನಾ ಭೀಕರತೆಯಿಂದ ಇಂದಿಗೂ ತಲ್ಲಣಿಸುತ್ತಿವೆ. ದಿನದಿನಕ್ಕೂ ಉಲ್ಬಣಗೊಳ್ಳುತ್ತಿರುವ ಈ ಪಿಡುಗನ್ನು ನಿವಾರಣೆ ಮಾಡುವ ಮಾರ್ಗಗಳ ಹುಡುಕಾಟದಿಂದ ಮಾತ್ರ ತಲ್ಲಣದಿಂದ ಮುಕ್ತರಾಗಬಹುದು. ರೋಗ ನಿರೋಧಕ ವ್ಯಾಕ್ಸಿನ್‌ಗಳು, ಔಷಧಿಗಳ ತಯಾರಿಕೆ ಮುಂದುವರಿದಿದೆ. ಜೊತೆಗೆ, ಈ ರೋಗ ನಿರೋಧಕಗಳ ಪೇಟೆಂಟ್ ರಾಜಕಾರಣಕ್ಕೆ ತಕ್ಷಣ ಪರಿಹಾರ ಕಂಡು ಬರುತ್ತಿಲ್ಲವಾದ್ದರಿಂದ, ಇನ್ನೂ ವರ್ಷ ಕಳೆದರೂ, ನಿರೋಧಕಗಳು ಬಿಡುಗಡೆಯಾಗುವುದಿಲ್ಲವೇನೋ ಎಂಬ ಶಂಕೆ ಕಾಣುತ್ತಿದೆ. ಇದು ಒಂದು ಕಡೆಯಾದರೆ, ಪರಿಸರ ವಿನಾಶಕ್ಕೆ ತಡೆಹಾಕುವುದು, ಅರಣ್ಯ ರಕ್ಷಣೆ, ಕಾಡು ಬೆಳೆಸುವುದು, ಪ್ರಕೃತಿಗೆ ಬಿಡುವ ಕಾರ್ಬನ್ ಪ್ರಮಾಣ ತಗ್ಗಿಸುವಿಕೆ, ಕಾರ್ಯಗಳು ಭರದಿಂದ ನಡೆಸಬೇಕಾಗಿದೆ. ಇಂಟರ್ ಗೌರ್ನಮೆಂಟಲ್ ಪೀನಲ್ ಆನ್ ಕ್ಲೈಮೇಟ್ ಚೇಂಜ್ (ಐಪಿಸಿಸಿ) ಸಂಸ್ಥೆ, ವಾಯುಗುಣ ಬದಲಾವಣೆಯ ಕುರಿತಾಗಿ ವೈಜ್ಞಾನಿಕ, ತಾಂತ್ರಿಕ, ಸಾಮಾಜಿಕ ಅಪಾಯಗಳು ಮತ್ತು ಅದನ್ನು ನಿವಾರಿಸುವ ಕ್ರಮಗಳ ವರದಿ ತಯಾರಿಸಿ, ಸದಸ್ಯ ರಾಷ್ಟ್ರಗಳ ಗಮನಕ್ಕೆ ತರುತ್ತದೆ. ಈ ಸಂಸ್ಥೆ ವಾಯುಗುಣ ಬದಲಾವಣೆಯ ಬಗೆಗಿನ ವೈಜ್ಞಾನಿಕ ವಿವರಗಳು, ಅದರಿಂದಾಗುವ ಅಘಾತಗಳು, ವಾಯುಗುಣ ಬದಲಾವಣೆಯ ಪ್ರಕೋಪಗಳಿಗೆ ಪರಿಹಾರಗಳು, ಸುಧಾರಣೆಗಳ ಮಾಹಿತಿಯನ್ನು ಕೊಡುತ್ತದೆ. ಇವುಗಳನ್ನು ಪಾಲಿಸಲು ಸರ್ಕಾರಗಳ ಪ್ರಯತ್ನಕ್ಕಾಗಿ ನಾವೆಲ್ಲ ಈ ಮೂಲಕ ಒತ್ತಾಯಿಸಬೇಕಾಗಿದೆ. ಹಾಗೂ ಅಸ್ಸಾಂ ವಾಸಿ ಜಾಧವ್ ಪಾಯೆಂಗ್, ಅರಣ್ಯೀಕರಣದ ಸಾಹಸಿ, ಭಾರತದ ಅರಣ್ಯ ಪುರುಷನ ಕೆಲಸಗಳನ್ನು ನಾವು ಮಾಡಬೇಕಿದೆ. ಜೊತೆಗೆ ಸುಂದರ್‌ಲಾಲ್ ಬಹುಗುಣರ ಚಿಪ್ಕೊ ಚಳವಳಿ, ಅಪ್ಪಿಕೋ ಚಳವಳಿಯ ಕಡೆ ತಿರುಗಬೇಕಿದೆ. ಮಹಾತ್ಮಾಜಿ ಅವರ ಸರಳ ಜೀವನ, ಪರಿಸರ ಸ್ವಚ್ಛತೆ, ಆಶ್ರಮ-ಪರಿಸರಗಳನ್ನು ನಿರ್ಮಿಸುವ ಕಡೆಗೆ ತಕ್ಷಣ ಕೈಗೊಳ್ಳಬೇಕಿದೆ.

ಇದು ಸಕಲ ಜೀವರಾಶಿಗಳ ಉಳಿವಿನ ಸವಾಲಾದರೆ, ಜೀವ ಸೃಷ್ಟಿಯ ಜೀವಿಗಳಾದ ಹೆಣ್ಣು ಮಕ್ಕಳ ಮೇಲಿನ ನಿತ್ಯದ ಅತ್ಯಾಚಾರದ ಭೀಭತ್ಸತೆ, ಮಹಿಳಾ ಸಮುದಾಯವನ್ನು ಆತಂಕದಲ್ಲಿ ಉಸಿರಾಡುವಂತೆ ಮಾಡಿದೆ. ಹ್ಯಾಥ್ರಾಸ್‌ನ ಮನಿಷಾಳ ಭೀಕರ ಅತ್ಯಾಚಾರ ಹಾಗೂ ಕೊಲೆ, ಬೆಂಗಳೂರಿನ ಪಶ್ಚಿಮ ಭಾಗದ ಬೆಟ್ಟಹಳ್ಳಿಯ ಹದಿಹರೆಯದ ಹೆಣ್ಣುಮಗಳು



ಲತಾಳ ಅಮಾನುಷ ಹತ್ಯೆ ಹಾಗೂ ಉತ್ತರ ಪ್ರದೇಶ ಮತ್ತಿತರ ರಾಜ್ಯಗಳ ಸರಣಿ ಅತ್ಯಾಚಾರಗಳು, ಮಹಿಳೆಯರ ಆತ್ಮಹತ್ಯೆಗಳು, ಮಹಿಳಾ ಸಂಕುಲವನ್ನೇ ವಿನಾಶಗೈಯುವ ಹಂತಕ್ಕೆ, ಕೊಂಡೊಯ್ಯುವುದೇನೋ ಎಂದು ಭಾಸವಾಗುತ್ತಿದೆ. ಜಾತಿ ಮತ್ತು ಲಿಂಗ ತಾರತಮ್ಯದ ಪರಿಣಾಮದಿಂದುಂಟಾಗುವ ಈ ಕೃತ್ಯಗಳು, ಭಾರತದಲ್ಲಿನ ಅಸಮಾನತೆಯ ಬೇರುಗಳು, ಪುರುಷಾಧಿಕಾರದ ಹಿಡಿತಗಳು ಪ್ರಬಲವಾಗುತ್ತಿರುವುದನ್ನು ತಿಳಿಸುತ್ತವೆ. ದಲಿತರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಮೇಲಿನ ಕ್ರೌರ್ಯಗಳಿಗೆ, ಹಿಂಸೆಗಳಿಗೆ ಕೊನೆಯೆಂದು? ಎಂದು ಪ್ರಲಾಪಿಸುವಂತೆ ಮಾಡಿದೆ. ಬುದ್ಧ, ಬಸವ, ಪುಲೆ, ಅಂಬೇಡ್ಕರ್, ಗಾಂಧೀಜಿ ಅವರ ಸಮಾನತೆ, ಸಹೋದರತೆ, ಸಹಿಷ್ಣುತೆ; ಅಹಿಂಸೆ, ನ್ಯಾಯಪರತೆಗಳು ನಮ್ಮ ಹೃದಯದಲ್ಲೇಕೆ ಮನೆಮಾಡಿಲ್ಲ? ಎಂಬ ವಿಚಾರಗಳು ಕಾಡುತ್ತವೆ. ಸಮಾಜದಲ್ಲಿನ ಸಹಜೀವಿಗಳನ್ನು ಗೌರವದಿಂದ ನೋಡುವ ಸಲುವಾಗಿ ಅತ್ಯಾಚಾರಗಳ ಕಾನೂನುಗಳನ್ನು ಕಠಿಣವಾಗಿ ಆಚರಣೆಗೆ ತರಬೇಕು. ಸಾರ್ವಜನಿಕವಾಗಿ ಈ ಕಾನೂನುಗಳ ಫಲಕಗಳನ್ನು ಅಲ್ಲಲ್ಲಿ ಹಾಕಬೇಕು. ಅತ್ಯಾಚಾರಿಗಳು ಮತ್ತು ಅವರಿಗೊದಗಿದ ಶಿಕ್ಷೆಗಳನ್ನು ವ್ಯಾಪಕವಾಗಿ ಪ್ರಚಾರ ಮಾಡಬೇಕು. 1971 ರಿಂದ ಸಮೀಕ್ಷೆಯನ್ನೇ ತೆಗೆದುಕೊಂಡರೆ ದಲಿತರು ಮತ್ತು ಮಹಿಳೆಯರ ಮೇಲಿನ ಅತ್ಯಾಚಾರದ ದೌರ್ಜನ್ಯದ ಪ್ರಕರಣಗಳು 2020ರ ಈ ವೇಳೆಗೆ ನೂರ್ಮಡಿಗೊಂಡಿರುವುದನ್ನು ಕಾಣಬಹುದು. 1971ರಲ್ಲಿ 2487 ಅತ್ಯಾಚಾರ ಪ್ರಕರಣಗಳು ದಾಖಲಾಗಿದ್ದರೆ, 32034 ಪ್ರಕರಣಗಳು 2019ರಲ್ಲಿ ದಾಖಲಾಗಿವೆ.

ಪಾರ್ಲಿಮೆಂಟಿನಲ್ಲಿ ಮತ್ತು ವಿಧಾನಸಭೆಗಳಲ್ಲಿ ದಲಿತ ಸುಮುದಾಯದ ಸದಸ್ಯರಿದ್ದಾರೆ. ದೇಶದ ಪ್ರಥಮ ಪ್ರಜೆಯು ದಲಿತ ಸಮುದಾಯದವರೇ ಆಗಿದ್ದಾರೆ. ಆದಾಗ್ಯೂ ದಲಿತ ಹೆಣ್ಣುಮಕ್ಕಳ ಮೇಲೆ ನಿರಂತರ ಅತ್ಯಾಚಾರ ಪ್ರಕರಣಗಳು ನಡೆಯುತ್ತಲೇ ಇವೆ. ಒಂದೆಡೆ ಉನ್ನತ ಹುದ್ದೆಗಳ ಪದಗ್ರಹಣ, ಮತ್ತೊಂದೆಡೆ ಅದೇ ಸಮುದಾಯದವರ ಮೇಲಿನ ದೌರ್ಜನ್ಯ. ಇವು ಭಾರತದಲ್ಲಿನ ಜಾತಿ ವ್ಯವಸ್ಥೆಯ ವೈರುಧ್ಯಗಳಿಗೆ ಕನ್ನಡಿಯಾಗಿದೆ. ಅಧಿಕಾರದಲ್ಲಿರುವವರ ದಿವ್ಯಮೌನಗಳು ಜಾತಿಕಾರಣದಿಂದ ಅಪಾದಿತರಿಗೆ ಬೆಂಬಲ ಎಂದು ನಿಲ್ಲುವುದೋ, ಅಂದು ಮಾತ್ರ ದಲಿತರು ಮತ್ತು ಮಹಿಳಾ ದೌರ್ಜನ್ಯಗಳು ನಿಲ್ಲುವವು. ಹಾಗೂ ಮಾತಾಪಿತೃಗಳು, ಗಂಡು ಮಕ್ಕಳಿಗೆ, ಹೆಣ್ಣು ಮಕ್ಕಳನ್ನು ಸಹಜೀವಿಯಂತೆ ನೋಡುವ ಪಾಠ ಬಾಲ್ಯದಿಂದಲೇ ಕಲಿಸಬೇಕಾಗಿದೆ. ಶಾಲಾ ಕಾಲೇಜುಗಳ ಪಠ್ಯದಲ್ಲಿ ಸಹಜೀವಿಯೊಡನೆ ಸ್ನೇಹ ಜೀವನದ ಶಿಕ್ಷಣ ನೀಡಬೇಕಾಗಿದೆ. ಸಾಮಾಜಿಕ ಸಂಸ್ಥೆಗಳು, ಗಾಂಧಿ, ಅಂಬೇಡ್ಕರ್, ವಿವೇಕಾನಂದರ ಚಿಂತನೆಗಳನ್ನು ಪ್ರಖರವಾಗಿ ಜನರ ಮನಸ್ಸುಗಳಲ್ಲಿ ತುಂಬಬೇಕಿದೆ ಮತ್ತು ಈ ಕಾರ್ಯವನ್ನು ಮಾಡಲು ನಿರಂತರ ಪ್ರಕ್ರಿಯೆಯಲ್ಲಿ ತೊಡಗೋಣ.



ನನ್ನ ನಿಸ್ಸಹಾಯಕತೆ : ಗಾಂಧೀಜಿ ಅವರ "ನನ್ನ ಸತ್ಯಾನ್ವೇಷಣೆ' ಕೃತಿಯಿಂದ ಆಯ್ದ ಭಾಗ

(ಗಾಂಧೀಜಿ ಅವರ ಜೀವನದಲ್ಲಿ ನಡೆದ ಹಲವಾರು ಘಟನೆಗಳು ಇಂದಿನ ಹಲವು ಸಂಕಷ್ಟದಲ್ಲಿ ದಾರಿತೋರುವ ದೀವಿಗೆಗಳಾಗಿವೆ. ಹೀಗಾಗಿ ಗಾಂಧೀಜಿ ಅವರ ಆತ್ಮಕಥೆಯ ಆಯ್ದ ಭಾಗಗಳನ್ನು ನಿಯತವಾಗಿ ಪ್ರಕಟಿಸುತ್ತಿದ್ದೇವೆ.)

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನನ್ನ ನಿರಾಸೆಯನ್ನು ತಮ್ಮ ನಗೆಯಿಂದಲೇ ಓಡಿಸಿಬಿಟ್ಟರು. ಪ್ರತಿಯೊಬ್ಬರೂ ಫಿರೋಜ್ ಷಾ ಮೆಹತಾ ಆಗಬೇಕೆಂದು ನಿನ್ನ ಅಭಿಪ್ರಾಯವೇ? ಫಿರೋಜ್ ಷಾ ಮೆಹತಾ, ಬದ್ರುದ್ದೀನ್‌ರಂಥವರು ಅಪರೂಪ. ಸಾಧಾರಣ ವಕೀಲನಾಗಿ ಅಸಾಧಾರಣವಾದ ಬುದ್ಧಿಶಕ್ತಿ ಬೇಕಿಲ್ಲ. ಪ್ರಾಮಾಣಿಕತೆ, ಕಾರ್ಯಾಸಕ್ತಿ ಇವು ಇದ್ದರೆ ಜೀವನವನ್ನು ಸಂಪಾದಿಸಿಕೊಳ್ಳಬಹುದು. ಎಲ್ಲ ಮೊಕದ್ದಮೆಗಳ ತೊಡಕಿನವುಗಳಾಗಿರುವುದಿಲ್ಲ. ಅದಿರಲಿ, ಸಾಧಾರಣ ಜ್ಞಾನ ಸಂಪಾದನೆಗಾಗಿ ನೀನು ಯಾವ ಯಾವ ಗ್ರಂಥಗಳನ್ನು ಓದಿದ್ದೀರಾ ಹೇಳು" ಎಂದು ಕೇಳಿದರು.

ನನ್ನ ಜ್ಞಾನ ಬಹು ಸ್ವಲ್ಪವಾಗಿದ್ದುದನ್ನು ಅವರು ಅರಿತುಕೊಂಡರು. ಅವರಿಗೆ ಆಶಾಭಂಗವಾಯಿತೆಂದು ನನಗೆ ಕಂಡಿತು. ಆದರೆ ಇದು ಒಂದು ಕ್ಷಣ ಮಾತ್ರ. ಮುಂದಿನ ಗಳಿಗೆಯಲ್ಲಿ ಅವರ ಮುಖದಲ್ಲಿ ಹಿತವಾದ ನಗು ಹೊಳೆಯಿತು. "ನಿನ್ನ ಕಷ್ಟ ನನಗೆ ಅರ್ಥವಾಗಿದೆ. ಸಾಮಾನ್ಯ ಜ್ಞಾನಾರ್ಜನೆಗಾಗಿ ನೀನು ವ್ಯಾಸಂಗ ಮಾಡಿರುವುದು ಬಹಳ ಕಡಿಮೆ. ನಿನ್ನಲ್ಲಿ ವಕೀಲನಿಗೆ ಇರಬೇಕಾದಷ್ಟು ವ್ಯವಹಾರ ಜ್ಞಾನವಿಲ್ಲ. ಭಾರತದ ಇತಿಹಾಸವನ್ನು ಸಹ ನೀನು ಓದಿಲ್ಲ. ವಕೀಲನಾಗುವವನಿಗೆ ಮನುಷ್ಯ ಸ್ವಭಾವ ತಿಳಿದಿರಬೇಕು. ಮನುಷ್ಯನ ಮುಖ ಚಹರೆಯನ್ನು ನೋಡಿ, ಆತನ ಸ್ವಭಾವವನ್ನು ತಿಳಿಯುವ ಶಕ್ತಿಯುಳ್ಳವನಾಗಿರಬೇಕು. ಪ್ರತಿಯೊಬ್ಬ ಭಾರತೀಯನೂ ಭಾರತದ ಇತಿಹಾಸವನ್ನು ತಿಳಿಯುವುದು ಅವರ ಕರ್ತವ್ಯ. ಅದಕ್ಕೂ ವಕೀಲ ವೃತ್ತಿಗೆ ಸಂಬಂಧವಿಲ್ಲ. ಆದರೆ ನಿನಗೆ ಆ ಜ್ಞಾನ ತಿಳಿದಿರಬೇಕು. ನೀಮ ಕೇಯ್ ಮತ್ತು ಮ್ಯಾಲೆಸನ್ ಬರೆದ ಭಾರತದ 1857ರ ದಂಗೆಯ ಇತಿಹಾಸವನ್ನು ಸಹ ಓದಿಲ್ಲ, ಕೂಡಲೇ ಆ ಪುಸ್ತಕಗಳನ್ನು ತೆಗೆದುಕೊಂಡು ಓದು. ಜೊತೆಗೆ ಮನುಷ್ಯನ ಸ್ವಭಾವವನ್ನು ತಿಳಿಯಬೇಕಾದರೆ ಇನ್ನೂ ಎರಡು ಪುಸ್ತಕಗಳನ್ನು ಓದು" ಎಂದು ಹೇಳಿದರು. ಲ್ಯಾವೇಟರ್ ಮತ್ತು ಪೆಮ್ಮೆಲ್‌ಪೆನಿಕ್ ಅವರು ಮುಖ ಸಾಮುದ್ರಿಕ ಶಾಸ್ತ್ರವನ್ನು ಕುರಿತು ಬರೆದ ಪುಸ್ತಕಗಳೇ ಅವುಗಳಾಗಿದ್ದವು

ಆ ಪೂಜ್ಯ ಮಿತ್ರರ ಉಪಕಾರವನ್ನು ನಾನು ತುಂಬಾ ಕೃತಜ್ಞತೆಯಿಂದ ಸ್ಮರಿಸಿದೆ. ಅವರ ಎದುರಿಗೆ ನಾನು ಇದ್ದಾಗ ನನ್ನ ಭಯ ಪೂರ್ಣವಾಗಿ ಮಾಯವಾಗಿತ್ತು. ಆದರೆ ಅವರನ್ನು ಬಿಟ್ಟು ಬಂದ ಕೂಡಲೇ ನನ್ನ ಕಳವಳ ಮತ್ತೆ ಪ್ರಾರಂಭವಾಯಿತು. "ಮುಖ ನೋಡಿ ಮನುಷ್ಯನ ಸ್ವಭಾವವನ್ನು ಅರಿಯುವುದು" ಈ ಮಾತುಗಳು ನನ್ನ ಮನಸ್ಸನ್ನು ಬಿಟ್ಟುಹೋಗಲೇ ಇಲ್ಲ. ಮರುದಿನ ನಾನು ಲ್ಯಾವೇಟರ್‌ರ ಪುಸ್ತಕವನ್ನು ಕೊಂಡುಕೊಂಡೆ. ಪೆಮ್ಮೆಲ್‌ಪೆನಿಕ್‌ರ ಪುಸ್ತಕ, ಅಂಗಡಿಯಲ್ಲಿ ದೊರೆಯಲಿಲ್ಲ. ನಾನು ಲ್ಯಾವೇಟರ ಪುಸ್ತಕವನ್ನು ಓದಿದೆ. ಅದು ಸ್ನೆಲ್‌ರವರು ಬರೆದ ಈಕ್ವಿಟಿ ಎಂಬ ಪುಸ್ತಕಕ್ಕಿಂತ ಹೆಚ್ಚು ಕ್ಲಿಷ್ಟವಾಗಿತ್ತು. ಸ್ವಲ್ಪವೂ ಉತ್ಸಾಹಕರವಾಗಿರಲಿಲ್ಲ. ಷೇಕ್ಸ್‌ಪಿಯರ್‌ನ ಮುಖಚಹರೆಯನ್ನು ಕುರಿತು ಓದಿದೆನು. ಆದರೆ ಲಂಡನ್ ನಗರದಲ್ಲಿ ರಸ್ತೆಯಲ್ಲಿ ಮೇಲಕ್ಕೂ ಕೆಳಕ್ಕೂ ಶಿರುಗಾಡುತ್ತಿದ್ದ ಷೇಕ್ಸ್‌ಪಿಯರ್‌ಗಳನ್ನು ಗುರುತಿಸುವ ಶಕ್ತಿ ನನಗೆ ಉಂಟಾಗಲಿಲ್ಲ.

ಲ್ಯಾವೇಟರ ಗ್ರಂಥದಿಂದ ನನ್ನ ಜ್ಞಾನ ಹೆಚ್ಚಲಿಲ್ಲ, ಪಿನ್‌ಕಟ್‌ರ ಸಲಹೆ ನನಗೆ ಪ್ರತ್ಯಕ್ಷವಾಗಿ ಯಾವ ಸಹಾಯವನ್ನೂ ಮಾಡಲಿಲ್ಲ. ಆದರೆ ನನ್ನಲ್ಲಿದ್ದ ಅವರ ಕರುಣೆ ನನಗೆ ಒಳ್ಳೆಯ ಬೆಂಬಲವಾಯಿತು. ನನ್ನ ಮನಸ್ಸಿನ ಮುಂದೆ ಅವರ ನಗುಮುಖ ಯಾವಾಗಲೂ ಇರುತ್ತಿದ್ದಿತು. ಅವರು ಹೇಳಿದ "ವಕೀಲಿ ವೃತ್ತಿಯಲ್ಲಿ ಜಯಶಾಲಿಯಾಗಬೇಕಾದರೆ ಫಿರೋಜ್ ಷಾ ಮೆಹತಾ ಅವರ ನೈಪುಣ್ಯ, ಸ್ಮರಣಶಕ್ತಿ, ಯೋಗ್ಯತೆ ಇವು ಇದ್ದರೆ ಸಾಕು" ಎಂಬ ಮಾತುಗಳಲ್ಲಿ ನನಗೆ ನಂಬಿಕೆಯುಂಟಾಯಿತು. ಕೊನೆಯ ಎರಡು ಗುಣಗಳೂ ನನ್ನಲ್ಲಿ ತಕ್ಕ ಪ್ರಮಾಣದಲ್ಲಿ ಇದ್ದುದರಿಂದ ನನಗೆ ಬಹುಮಟ್ಟಿಗೆ ಧೈರ್ಯವುಂಟಾಯಿತು.

ಇಂಗ್ಲೆಂಡಿನಲ್ಲಿದ್ದಾಗ ಕೇಯ್ ಮತ್ತು ಮ್ಯಾಲೆಸನ್‌ರು ಬರೆದ ದಂಗೆಯ ಇತಿಹಾಸವನ್ನು ಓದಲು ನನಗೆ ಸಾಧ್ಯವಾಗಲಿಲ್ಲ. ಆ ಗ್ರಂಥವನ್ನು ಅವಕಾಶ ದೊರೆತ ಕೂಡಲೇ ಓದಬೇಕೆಂದು ನಿಶ್ಚಯ ಮಾಡಿಕೊಂಡಿದ್ದೆ. ದಕ್ಷಿಣ ಆಫ್ರಿಕಾಕ್ಕೆ ಹೋದ ಕೂಡಲೇ ಅದನ್ನು ಓದಿದೆ. ಹೀಗೆ ನಿರಾಸೆಯ ಜೊತೆಗೆ ಸ್ವಲ್ಪ ಆಶಾಕಿರಣದೊಂದಿಗೆ, ನಾನು ಎಸ್.ಎಸ್. ಅಸ್ಸಾಂ ಎಂಬ ಹಡಗಿನಲ್ಲಿ ಬೊಂಬಾಯಿ ತಲಪಿದೆ. ಬಿರುಗಾಳಿಯಿಂದ ಬಂದರಿನಲ್ಲಿ ಅಲ್ಲೋಲಕಲ್ಲೋಲವಾಗಿತ್ತು. ದೋಣಿಯಲ್ಲಿ ಕುಳಿತು ತೀರವನ್ನು ಸೇರಬೇಕಾಯಿತು.

ಮುಂದುವರೆಯುವುದು...

ಕರ್ನಾಟಕದಲ್ಲಿ ಕಾಂಗ್ರೆಸ್ : ಬೆಳಗಾವಿ, 1924

ಮೋ. ಕ. ಗಾಂಧಿ (ಗಾಂಧಿ ಮತ್ತು ಕರ್ನಾಟಕ ಕೃತಿಯಿಂದ)
ಸಂಪಾದನೆ : ಸಿದ್ದವನಹಳ್ಳಿ ಕೃಷ್ಣಶರ್ಮ

"ಗಾಂಧೀಜಿ ಅವರ ವಿಚಾರಗಳು - ಚಿಂತನೆಗಳು - ಈ ಅಂಕಣದಲ್ಲಿ ಗಾಂಧೀಜಿ ಅವರು ಕೈಗೊಂಡ ನಿಲುವು ನಿರ್ಧಾರಗಳನ್ನು ಇಲ್ಲಿ ಪ್ರಸ್ತುತಪಡಿಸಲಾಗಿದೆ. ಈ ಅಂಕಣವು ನಿಯತವಾಗಿ ಬರಲಿದೆ.
(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕಾಕಿನಾಡದಲ್ಲಿ ಕಾಂಗ್ರೆಸ್ ಸಭೆ ನಡೆದಾಗ, ಕರ್ನಾಟಕದ ಪ್ರತಿನಿಧಿಗಳು ಬಹಳ ಜನ ಹೋಗಿದ್ದರು. ಆಗ ಗಾಂಧೀಜಿ ಯರವಡಾ ಸೆರೆಮನೆಯಲ್ಲಿದ್ದರು. ಕಾಕಿನಾಡದಲ್ಲಿ, ಮುಂದಿನ ಕಾಂಗ್ರೆಸ್ (1924ರಲ್ಲಿ) ಕರ್ನಾಟಕದಲ್ಲಿ ನಡೆಯಬೇಕು ಎಂದು ಗೊತ್ತಾಗಿತ್ತು. ಕರ್ನಾಟಕದಿಂದ ಅಷ್ಟು ಜನ ಪ್ರತಿನಿಧಿಗಳು ಕಾಂಗ್ರೆಸ್ಸಿಗೆ ಬಂದಿದ್ದಕ್ಕೂ ಅದೇ ಕಾರಣ. ಮೊಟ್ಟಮೊದಲು ಆ ಕಾಂಗ್ರೆಸ್ಸಿನಲ್ಲಿ ಕನ್ನಡದಲ್ಲಿ ಭಾಷಣ ಆಯಿತು. ಆ ಭಾಗ್ಯ ಶ್ರೀ ದೇಶಪಾಂಡೆ ಗಂಗಾಧರ ರಾಯರದು. 15–20 ನಿಮಿಷ ಮಾತನಾಡಿ, ಕಾಂಗ್ರೆಸ್ ಅಧಿವೇಶನ ಮುಂದಿನದು ಕರ್ನಾಟಕದಲ್ಲಿ ಆಗಲಿ ಎಂದು ಕರ್ನಾಟಕದ ಪರವಾಗಿ ಅವರು ಆಹ್ವಾನ ಇತ್ತರು. ಮೌಲಾನಾ ಮಹಮ್ಮದಲಿ ಕಾಕಿನಾಡ ಕಾಂಗ್ರೆಸ್ಸಿನ ಅಧ್ಯಕ್ಷರು. ಕಾಂಗ್ರೆಸ್ಸಿಗೆ ಯಾರು ಕಾರ್ಯದರ್ಶಿಗಳಾಗಿರಬೇಕು ಎಂದು ಸೂಚಿಸುವುದು ಅಧ್ಯಕ್ಷರ ಕೆಲಸ. ಮೌಲಾನಾ ಸಾಹೇಬರು ಮೂರು ಹೆಸರನ್ನು ಸೂಚಿಸಿದರು. ಪಂಡಿತ ನೆಹರು, ಡಾ॥ ಕಿಚಲು, ದೇಶಪಾಂಡೆ ಗಂಗಾಧರರಾಯರು. ಒಂದು ಉತ್ತರ ಪ್ರದೇಶದ್ದು, ಒಂದು ಪಂಜಾಬಿನದು, ಒಂದು ಕರ್ನಾಟಕದ್ದು, ಈ ಹೆಸರುಗಳು. ಸರ್ವಾನುಮತಿಯಿಂದ ಕಾಂಗ್ರೆಸ್ ಮೂರೂ ಹೆಸರನ್ನು ಒಪ್ಪಿಕೊಂಡಿತು. ಕರ್ನಾಟಕದಲ್ಲಿ ಮುಂದಿನ ವರ್ಷದ ಕಾಂಗ್ರೆಸ್ ಅಧಿವೇಶನ ನಡೆಯಬೇಕು ಎಂಬ ಆಮಂತ್ರಣ ಬಂದಾಗ ಸ್ವಯಂ ಮಹಮ್ಮದಲಿಯೇ ಅದನ್ನು ಪುಷ್ಟೀಕರಿಸಿದರು. ಅಧ್ಯಕ್ಷರೇ ಸಮರ್ಥಿಸಿದ ಮೇಲೆ ಉಳಿದ ಎಲ್ಲ ಆಮಂತ್ರಣಗಳು ಹಿಂದಕ್ಕೆ ಹೋದವು. ಕರ್ನಾಟಕದ ಆಮಂತ್ರಣಕ್ಕೆ ಸರ್ವಾನುಮತಿ ದೊರೆಯಿತು. ಬಿಜಾಪುರದ ಕಾಂಗ್ರೆಸ್ ಮುಖಂಡರು ಶ್ರೀ ಕೌಜಲಗಿ ಶ್ರೀನಿವಾಸರಾಯರು ಆ ಆಮಂತ್ರಣದ ಸೂಚನೆಯನ್ನು ಮಂಡಿಸಿದರು. ಅದು ಮಾನ್ಯವಾಯಿತು. ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿವೇಶನ ನಡೆಸಬೇಕು–ಆದರೆ ಎಲ್ಲಿ? ಈ ಪ್ರಶ್ನೆಯನ್ನು ಕಾಂಗ್ರೆಸ್ ತೀರ್ಮಾನಿಸಲಿಲ್ಲ. ಪ್ರಾಂತೀಯ ಕಾಂಗ್ರೆಸ್ ಸಮಿತಿಗೇ ಬಿಟ್ಟುಬಿಟ್ಟರು. ಇದು ಅಷ್ಟು ಸುಲಭವಾಗಿ ಇತ್ಯರ್ಥವಾಗುವ ಮಾತು ಅಲ್ಲ. ಸುಲಭವಾಗಿ ಸಮರಸ ಆಗಿ ತೀರ್ಮಾನ ಆಗಲೂ ಇಲ್ಲ. ಬಿಜಾಪುರದವರಿಗೆ ಬಿಜಾಪುರದಲ್ಲಿ ಅಧಿವೇಶನ ನಡೆಸಬೇಕು ಎಂಬ ಆಶೆ. ಮಂಗಳೂರಿನಲ್ಲಿ ಆಗಬೇಕು ಎಂದು ಮಂಗಳೂರಿನವರಿಗೆ. ಧಾರವಾಡದಲ್ಲಿ ಆಗಬೇಕು ಎಂದು ಧಾರವಾಡದವರಿಗೆ. ಗಂಗಾಧರರಾಯರಿಗೆ ಬೆಳಗಾವಿಯಲ್ಲಿ ನಡೆಸಬೇಕು ಎಂಬ ಬಯಕೆ. ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಸಮಿತಿಯ ಸಭೆ ಹುಬ್ಬಳ್ಳಿಯಲ್ಲಿ ನಡೆಯಿತು. ಆಗ ಕರ್ನಾಟಕದಲ್ಲಿ ಇದ್ದದ್ದು ಎರಡೇ ದೊಡ್ಡ ಪಟ್ಟಣ; ಒಂದು ಬೆಂಗಳೂರು, ಒಂದು ಹುಬ್ಬಳ್ಳಿ ಆಗ ಮೈಸೂರು ಸಂಸ್ಥಾನಕ್ಕೆ ಸೇರಿದ್ದಾಗಿತ್ತು. ನಾಲ್ವಡಿ ಕೃಷ್ಣರಾಜ ಒಡೆಯರು ಮಹಾರಾಜರು. ಗಾಂಧೀಜಿಗೆ ದೇಶೀ ಸಂಸ್ಥಾನಗಳಲ್ಲಿ ರಾಜಕೀಯ ಚಳವಳಿ ನಡೆಸುವುದು ಇಷ್ಟವಿರಲಿಲ್ಲ. ಆದ್ದರಿಂದ ಬೆಂಗಳೂರಲ್ಲಿ ಕಾಂಗ್ರೆಸ್ ನಡೆಸುವ ಮಾತೇ ಇರಲಿಲ್ಲ. ಉಳಿದದ್ದು ಹುಬ್ಬಳ್ಳಿ. ಹುಬ್ಬಳ್ಳಿಯೇನೋ ವ್ಯಾಪಾರ ಸ್ಥಳವೇ. ಅಲ್ಲಿ ಹತ್ತಿ ವ್ಯಾಪಾರ ಹೆಚ್ಚೇ. ಆದರೆ ಅಲ್ಲಿನ ಜನರಿಗೆ ಕಾಂಗ್ರೆಸ್ ನಡೆಸುವ ಮನಸ್ಸು ಇರಲಿಲ್ಲ. ಮನಸ್ಸು ಮಾಡಿದ್ದರೆ ಕಾಂಗ್ರೆಸ್ ನಡೆಸುವುದು ಅವರಿಗೆ ಕಷ್ಟ ಆಗುತ್ತಿರಲಿಲ್ಲ. ಬಳ್ಳಾರಿ, ಕಾರವಾರ ಜಿಲ್ಲೆಗಳಲ್ಲಿ ಜನರಿಗೆ ಉತ್ಸಾಹ ಕಡಿಮೆ ಇತ್ತು. ತಮ್ಮಿಂದ ಸಾಧ್ಯ ಇಲ್ಲ ಎಂದು ಅಲ್ಲಿನ ಜನ ಹೇಳಿಬಿಟ್ಟರು. ಧಾರವಾಡದಲ್ಲಿ ಮಾಡಬೇಕು ಎಂದು ಕೆಲವರಿಗೆ ಭಾರಿ ಹುರುಪು. ಮಂಗಳೂರಿನಲ್ಲಿ ಮಾಡಬೇಕು ಎನ್ನುವ ಉತ್ಸಾಹ ಕಾರ್ನಾಡ ಸದಾಶಿವರಾಯರಿಗೆ ಇತ್ತು. ಕಾಂಗ್ರೆಸ್ಸನ್ನು ನಡೆಸಲು ಪ್ರಾರಂಭದ ವೆಚ್ಚವೇ ಕೆಲವು ಸಾವಿರ ಆಗುತ್ತದೆ. ಕಡೇಪಕ್ಷ 50 ಸಾವಿರ ಆದರೂ ಬೇಕು. ಬೆಳಗಾವಿ, ಶಹಪುರದ ವರ್ತಕರನ್ನು ಕೇಳಿ, 30 ಸಾವಿರ ರೂಪಾಯಿನ ವಾಗ್ದಾನ ಪಡೆದಿದ್ದರು ಗಂಗಾಧರರಾಯರು. ಆ ವರ್ತಕರು ತಮ್ಮ ವಾಗ್ದಾನವನ್ನು ಬರೆದೇ ಕೊಟ್ಟಿದ್ದರು. ಕೆಲವರಂತೂ ಈ ಸುಸಂಧಿಯನ್ನು ಕಳೆದುಕೊಳ್ಳಬಾರದು ಎಂದು ತಮ್ಮ ಆಮಂತ್ರಣವನ್ನು ಒತ್ತಾಯಿಸಲು ಪ್ರಾಂತೀಯ ಸಮಿತಿಯ ಸಭೆಗೇ ಬಂದಿದ್ದರು.

ಪ್ರಾಂತೀಯ ಸಮಿತಿ ಸಭೆಯಲ್ಲಿ ನಿರ್ಣಯ

ಪ್ರಾಂತೀಯ ಸಮಿತಿಯ ಸಭೆಗೆ ಬಿಜಾಪುರ, ಮಂಗಳೂರು, ಕಾರವಾರ ಜಿಲ್ಲೆಗಳ ಜನರು ಎಲ್ಲರೂ ಬಂದಿದ್ದರು. ತಮ್ಮ ತಮ್ಮ ಜಿಲ್ಲೆಯಲ್ಲಿ ಕಾಂಗ್ರೆಸ್ ಸಭೆ ನಡೆಯಬೇಕೆಂದು ಎಲ್ಲರದೂ ಭಾರಿ ಪ್ರಯತ್ನ. ಮಂಗಳೂರಿನ ಪರ ಶ್ರೀ ಕಾರ್ನಾಡ ಸದಾಶಿವರಾಯರೂ, ಬಿಜಾಪುರದ ಪರ ಶ್ರೀ ಕೌಜಲಗಿ ಶ್ರೀನಿವಾಸರಾಯರೂ ಬಹಳ ಗಟ್ಟಿಯಾಗಿ ವಾದಿಸಿದರು. ಎರಡೂ ಊರಿನದೂ ಸ್ವಲ್ಪ ಹೆಚ್ಚುಗಾರಿಕೆ ಇತ್ತು. ಬಿಜಾಪುರ ಹಿಂದಿನ ವೈಭವದ ಅವಶೇಷ, ಮಂಗಳೂರು ಸೃಷ್ಟಿ ಸೌಂದರ್ಯದ ಗಣಿ, ಬೆಳಗಾವಿಯಲ್ಲಿ ಈ ಎರಡೂ ಇಲ್ಲ. ಹೀಗಿದ್ದೂ ಆ ಸಭೆಯಲ್ಲಿ ಕರ್ನಾಟಕದ ಈ ಕಾಂಗ್ರೆಸ್ಸನ್ನು ಬೆಳಗಾವಿಯಲ್ಲೇ ನಡೆಸಬೇಕು ಎಂದು ತೀರ್ಮಾನ ಆಯಿತು. ಅದರಂತೆ ಬೆಳಗಾವಿಯಲ್ಲಿ ಸರ್ವಸಿದ್ಧತೆಗಳೂ ಆಗತೊಡಗಿದವು. ಈ ಸಂದರ್ಭದಲ್ಲಿ ಅಂದಿನ ರಾಜಕೀಯ ವಿಶೇಷವಾಗಿ ಕಾಂಗ್ರೆಸ್ಸಿನ ಪರಿಸ್ಥಿತಿಯು ಹೇಗಿತ್ತು ಎಂಬುದನ್ನು ಸ್ವಲ್ಪ ನೋಡೋಣ.

ಮುಂದುವರೆಯುವುದು...



ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು

– ಇಂದಿರಾ ಕೃಷ್ಣಪ್ಪ,

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಕಮಲಾದೇವಿ ಚಟ್ಟೋಪಾಧ್ಯಾಯ

ನೇರ ಹೋರಾಟದಲ್ಲೂ ಹಾಗೂ ಸುಧಾರಣಾ ಕ್ರಮದಲ್ಲೂ ಪಾಲ್ಗೊಂಡ ಮತ್ತೊಬ್ಬ ಹೋರಾಟಗಾರ್ತಿ ಎಂದರೆ ಕಮಲಾದೇವಿ ಚಟ್ಟೋಪಾಧ್ಯಾಯ. ಕಲಾವಿದೆಯಾದ ಕಮಲಾ ಕಾಂಗ್ರೆಸ್‌ನಲ್ಲಿ ಸಕ್ರಿಯ ಸದಸ್ಯಳಾಗಿದ್ದಳು. 'ಅಖಿಲ ಭಾರತ ಮಹಿಳಾ ಸಮಾವೇಶದ ಕಾರ್ಯದರ್ಶಿಯಾಗಿ ದುಡಿದರು. ರಾಷ್ಟ್ರೀಯ ಸೇವಾದಳದ ಸದಸ್ಯೆಯಾಗಿ ಸ್ವದೇಶಿ ಚಳುವಳಿ, ಸತ್ಯಾಗ್ರಹಗಳಲ್ಲಿ ಭಾಗಿಯಾದಳು. ಮದ್ರಾಸಿನಲ್ಲಿ ಬಟ್ಟೆ ಗಿರಣಿ ಟ್ರೇಡ್ ಯೂನಿಯನ್ ಮೂಲಕ ಮಹಿಳಾ ಕಾರ್ಮಿಕರಿಗೆ ಹೆರಿಗೆ ರಜೆ ಸೌಲಭ್ಯ ಕೊಡಿಸಲು ಹೋರಾಡಿದರು. ಕಾರ್ಮಿಕರ ಮಕ್ಕಳಿಗೆ ಶಿಶು ಪಾಲನಾ ಕೇಂದ್ರಗಳನ್ನು ಸ್ಥಾಪಿಸಿದರು. ಕುಶಲಕಲೆ ಗೃಹೋದ್ಯೋಗ ಕುರಿತು ಅನೇಕ ಗ್ರಂಥಗಳನ್ನು ರಚಿಸಿದರು. ಈಗಲೂ ಕರಕುಶಲ ಅಭಿವೃದ್ಧಿ ನಿಗಮದಲ್ಲಿ ಅವರ ಹೆಸರಿನಲ್ಲಿ ಪ್ರಶಸ್ತಿಗಳನ್ನು ಕೊಡಲಾಗುತ್ತಿದೆ. ಮ್ಯಾಗ್ಸೆಸ್ಸೆ ಗೌರವ, ಪದ್ಮಭೂಷಣ ಪ್ರಶಸ್ತಿಗಳಿಂದ ಇವರು ಪುರಸ್ಕೃತರಾಗಿದ್ದಾರೆ.

ಉಮಾಬಾಯಿ ಕುಂದಾಪುರ

ಕುಂದಾಪುರದ ಗೋಳಿಕೇರಿ ಕೃಷ್ಣರಾಯರು ಮತ್ತು ತುಂಗಾ ಬಾಯಿ ದಂಪತಿಯ ಮುದ್ದಿನ ಮಗಳು ಉಮಾಬಾಯಿಯವರಾಗಿದ್ದಾರೆ. ಹುಟ್ಟು ಹೆಸರು ಭವಾನಿ. 13ನೇ ವಯಸ್ಸಿನಲ್ಲಿ ಸಂಜೀವರಾಯ ಎಂಬುವರೊಂದಿಗೆ 1905ರಲ್ಲಿ ಇವರು ಬಾಲ್ಯ ವಿವಾಹಿತರಾಗಿ ಮುಂಬೈ ಸೇರಿದರು. ವಿವಾಹದ ನಂತರದ ಹೆಸರೇ 'ಉಮಾಬಾಯಿ', ಆದರೆ ಕ್ಷಯರೋಗಕ್ಕೆ ತುತ್ತಾದ ಪತಿ 1923ರ ಹೊತ್ತಿಗೆ ಅಕಾಲಿಕವಾಗಿ ನಿಧನರಾದರು. ಮಾವ ಆನಂದರಾಯರು ಸುಧಾರಣಾವಾದಿಗಳು, ಜನಪರ ಚಿಂತಕರು ಆಗಿದ್ದರಿಂದ, ಉಮಾಬಾಯಿ ಅವರಿಗೆ ಶಿಕ್ಷಣ ಮುಂದುವರೆಸಲು ಪ್ರೋತ್ಸಾಹ ನೀಡಿದರು. ಅಲ್ಲಿಯೇ "ಸಾರಸ್ವತ ಸಮಾಜ" ಎಂಬ ಸಾಮಾಜಿಕ ಚಟುವಟಿಕೆ ಕೇಂದ್ರವನ್ನು ಸ್ಥಾಪಿಸಿದರು. ಅಂದಿನ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ತಿಲಕರು, ಕರ್ವೆ ಅವರು ಇನ್ನೂ ಮುಂತಾದವರ ಸಾನಿಧ್ಯದಿಂದ ಉಮಾಬಾಯಿ ಖಾದಿ ಆಂದೋಲನ, ಮಹಿಳೆಯರ ಅಭ್ಯುದಯ, ಸಮಾಜಮುಖಿ ಕಾರ್ಯದಲ್ಲಿ ತೊಡಗಿದರು. 1921ರ ಬೆಳಗಾವಿ ಕಾಂಗ್ರೆಸ್ ಅಧಿವೇಶನದಲ್ಲಿ ಉಮಾಬಾಯಿ, ಕಾಂಗ್ರೆಸ್ ಪಕ್ಷವನ್ನು ಸೇರಿದರು. ಅಧಿವೇಶನಕ್ಕಾಗಿ ಸ್ವಯಂ ಸೇವಕಿಯರಿಗೆ ತರಬೇತಿ ಕೊಡುವುದು, ಮಹಿಳೆಯರನ್ನು ಸಂಘಟಿಸುವುದು ಇವರ ಪ್ರಮುಖ ಜವಾಬ್ದಾರಿಯಾಗಿತ್ತು. ಅದರಂತೆ ಅವರು 101 ಮಹಿಳಾ ಸ್ವಯಂ ಸೇವಕಿಯರನ್ನು ಸಜ್ಜುಗೊಳಿಸಿದರು. ಹುಬ್ಬಳ್ಳಿಯಲ್ಲಿ 'ಭಗಿನಿ ಮಂಡಲಿ' ತಿಲಕರ ಕನ್ಯಾಶಾಲೆ ಆರಂಭಿಸಿದರು. ಈ ಶಾಲೆಯ ಯಶಸ್ಸಿನಿಂದಾಗಿ, ಬೇರೆ ಜಿಲ್ಲೆಗಳಲ್ಲಿಯೂ ಇದೇ ಮಾದರಿ ನಾಲ್ಕು ಶಾಲೆಯನ್ನು ಸ್ಥಾಪಿಸಿದರು. ನಾ.ಸು. ಹರ್ಡೀಕರ್ ಅವರ ಸೇವಾದಲದ ಕಾರ್ಯದರ್ಶಿಯಾಗಿ 1928ರಲ್ಲಿ ಕರ್ನಾಟಕ ಪ್ರಾಂತೀಯ ಕಾಂಗ್ರೆಸ್ ಉಪಾಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸಿದರು. ಭಗಿನಿ ಮಂಡಳ – 1932ರ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗಿಯಾಗಿದ್ದರಿಂದ ಅಂದಿನ ಸರ್ಕಾರ ಇದನ್ನು "ಅಕ್ರಮ ಕೂಟ"ವೆಂದು ಪರಿಗಣಿಸಿ, ಉಮಾಬಾಯಿ ಅವರನ್ನು ಬಂಧಿಸಿ, ಯರವಾಡ ಜೈಲಿಗೆ ಸೇರಿಸಲಾಯಿತು. ಜೈಲಿನಿಂದ ಬಿಡುಗಡೆಯಾದ ನಂತರ, ಬಿಹಾರದ ಭೂಕಂಪ ಸಂತ್ರಸ್ತರ ನೆರವಿಗೆ ಸ್ವಯಂ ಸೇವಕಿಯರೊಂದಿಗೆ ತೆರಳಿ, ಶುಶ್ರೂಷೆ ನಡೆಸಿದ್ದಾರೆ. ಇದರಿಂದಾಗಿ ಜವಹರಲಾಲ್ ನೆಹರು, ಬಾಬು ರಾಜೇಂದ್ರ ಪ್ರಸಾದ್ ಅವರ ಸಂಪರ್ಕವು ಇವರಿಗೆ ದೊರಕಿತು. 1935 – 36ರ ನಂತರ ಪ್ರೌಢಶಿಕ್ಷಣ, ಶಿಶುಪಾಲನಾ ಕೇಂದ್ರ ಮತ್ತು ಕಸ್ತೂರಬಾ ವಿಶ್ವಸ್ಥ ಮಂಡಳಿಯ ಕರ್ನಾಟಕದ ಪ್ರತಿನಿಧಿಯಾಗಿ ಸೇವೆ ಸಲ್ಲಿಸಿದರು. ಮಾವನವರೊಂದಿಗೆ ನಡೆಸುತ್ತಿದ್ದ ಕರ್ನಾಟಕ ಪ್ರೆಸ್‌ನ್ನು ಅವರ ನಿಧನದ ನಂತರ ಮಾರಾಟ ಮಾಡಿದರು.

ಮುಂದುವರೆಯುವುದು...

ಗಾಂಧೀಜಿಯ ಕೊನೆಯ ಉಪವಾಸಗಳು

(ಲೂಯಿ ಫಿಶರ್ 'ಗಾಂಧಿ' ಪುಸ್ತಕದಿಂದ ಸಂಗ್ರಹ)

ರಾಷ್ಟ್ರೀಯ ಐಕ್ಯ ಭಾವನೆಗಿಂತ ಧಾರ್ಮಿಕ ಭೇದಭಾವನೆಗಳೇ ಪ್ರಬಲವಾದ್ದರಿಂದ ಭಾರತದ ವಿಭಜನೆಯನ್ನು ಮಹಾತ್ಮ ಗಾಂಧೀಜಿ ಅವರು ತಡೆಯಲಾರದೆ ಹೋದರು. ಹಿಂದೂ–ಮುಸ್ಲಿಂರನ್ನು ಒಗ್ಗೂಡಿಸಲು ಗಾಂಧೀಜಿ, ನೆಹರೂ ಮುಂತಾದವರು ಅಪಾರವಾಗಿ ಶ್ರಮಿಸಿದ್ದರು. ಭೇದಭಾವನೆಗಳನ್ನು ಕೆರಳಿಸುವ ದ್ವೇಷ, ಅಧಿಕಾರ ಲಾಲಸೆಗಳು, ಧರ್ಮಾಂಧತೆಯಿಂದ ರಕ್ತದ ಮಡುವಿನಿಂದ ಬಂದ ಸ್ವಾತಂತ್ರ್ಯವು ಗಾಂಧೀಜಿಗೆ ಸಂತೋಷವನ್ನುಂಟು ಮಾಡಲಿಲ್ಲ. ಅದನ್ನು ತಿರಸ್ಕರಿಸುವ ಶಕ್ತಿ ಮತ್ತು ಧೈರ್ಯ ಅವರಲ್ಲಿತ್ತು. ಇದೇ ಅವರ ಹಿರಿಮೆ ನಿಜತಿರುಳು. ಭಾರತದ 1948ರ ಆಗಸ್ಟ್ 15ರ ಸ್ವಾತಂತ್ರ್ಯೋತ್ಸವದಲ್ಲಿ ತಾನು ಭಾಗವಹಿಸಲಾರೆನೆಂದು ಅವರು ಕಲಕತ್ತೆಯಲ್ಲಿ ಜಾತೀಯ ದಂಗೆಗಳ ಶಮನಕ್ಕಾಗಿ ತೆರಳಿದರು. ರಾಷ್ಟ್ರದ ನವಜೀವನದ ಅಧಿಕೃತ ಪ್ರಾರಂಭದಂದು ರಾಜಧಾನಿಗೆ ಬರಬೇಕೆಂದು ಬಂದ ಆಮಂತ್ರಣವನ್ನು ಅವರು ತಿರಸ್ಕರಿಸಿದರು. ದೇಶಕ್ಕೆ ಯಾವ ಸಂದೇಶವನ್ನೂ ಕೊಡಲಿಲ್ಲ.

ಆಗಸ್ಟ್ 29ರಂದು ಅವರು ರಾಜಕುಮಾರಿ ಅಮೃತಕೌರರಿಗೆ ಪತ್ರ ಬರೆದು: "ಮಾನವ ಕುಲವೊಂದು ಮಹಾ ಸಾಗರ, ಮಹಾ ಸಾಗರದಲ್ಲಿ ಕೆಲಹನಿಗಳು ಹೊಲಸಾದರೆ ಇಡೀ ಸಾಗರವೇ ಹೊಲಸಾಗುವುದಿಲ್ಲ" ಎಂದರು. "ನಾನು ಅಪಜಯವನ್ನರಿಯದ ಹುಟ್ಟಾ ಯೋಧ" ಎಂದು ಕಲಕತ್ತೆಯ ಪ್ರಾರ್ಥನಾ ಸಭೆಯಲ್ಲಿ ಜನರಿಗೆ ಆಶ್ವಾಸನೆಯಿತ್ತರು. ವಿಭಜನೆ ಸತ್ಯವಾಗಿರುವುದೇನೋ ನಿಜ, ಆದರೆ "ಸದ್ವರ್ತನೆಯಿಂದ ಅನಿಷ್ಟವನ್ನು ಕಡಿಮೆ ಮಾಡಿಕೊಳ್ಳುವುದು ಮತ್ತು ಕೊನೆಯಲ್ಲಿ ಅನಿಷ್ಟದಲ್ಲೇ ಇಷ್ಟವನ್ನು ಸಾಧಿಸುವುದು ಯಾವಾಗಲೂ ಸಾಧ್ಯವಿದೆ." 1947ರ ಆಗಸ್ಟ್ ತಿಂಗಳಲ್ಲಿ ಗಾಂಧೀಜಿ ಅವರ ಕಲಕತ್ತೆಯ ವಾಸ್ತವ್ಯವು ಕೋಮು ಬಿರುಗಾಳಿಯನ್ನು ಶಾಂತಗೊಳಿಸಿತು. ತುಂಡು ದಟ್ಟಿಯ (ಪಂಚೆ) ಈ ಮಾಂತ್ರಿಕನನ್ನು ಪತ್ರಿಕೆಗಳು ಹೊಗಳಿದವು. ಆದರೆ ಹಿಂದೂ–ಮುಸ್ಲಿಮರಿಬ್ಬರಿಗೂ ಹಾನಿಕರವಾದ ಬಂಗಾಲದ ವಿಭಜನೆ ಮತ್ತೆ ಹುಯಿಲೆಬ್ಬಿಸಿತು. ವಿಭಜನೆಯು ಬಗೆಹರಿಸದ ಸಮಸ್ಯೆಗಳು ಗಾಂಧೀಜಿ ಮನೆಯನ್ನೇ ಪ್ರವೇಶಿಸಿತು, ಆಗಸ್ಟ್ 31ರ ರಾತ್ರಿ ಮುಸ್ಲಿಮರ ಇರಿತದಿಂದ ಸತ್ತನೆಂದು ಹಿಂದುವಿನ ಶವವನ್ನು ಹೊತ್ತುಕೊಂಡು ಹಿಂದುಗಳ ಗುಂಪೊಂದು ಬೊಬ್ಬಿಡುತ್ತ ಗಾಂಧೀಜಿ ಮನೆಯನ್ನು ಹೊಕ್ಕಿತು. ಕಲ್ಲು ತೂರಿ, ಮುಷ್ಟಿಯಿಂದ ಗುದ್ದಿ, ಕಿಟಕಿಯ ಗಾಜುಗಳನ್ನು ಪುಡಿಪುಡಿ ಮಾಡಿದರು; ಬಾಗಿಲುಗಳನ್ನು ಒದ್ದರು; ವಿದ್ಯುತ್ ತಂತಿಗಳನ್ನು ಹರಿಯಲೆತ್ನಿಸಿದರು. ಅವರನ್ನು ಗಾಂಧೀಜಿ ಶಾಂತಗೊಳಿಸಿದರು. ಮರುದಿನ ಸರದಾರ ವಲ್ಲಭಾಯಿಅವರಿಗೆ ಬರೆದ ಪತ್ರದಲ್ಲಿ ಅವರು, "ನಾನು ಅವರನ್ನುದ್ದೇಶಿಸಿ ಕೂಗಿಕೊಳ್ಳತೊಡಗಿದೆ. ಆದರೆ ಕೇಳುವವರಾರು?" ಎಂದು ಬರೆದರು. ಗಾಂಧೀಜಿ ಅವರನ್ನು ರಕ್ಷಿಸಲು ಮುಸ್ಲಿಮರು ಅವರನ್ನು ಸುತ್ತುವರಿದು ನಿಂತರು. ಗಾಂಧೀಜಿ ಅವರ ಮೇಲೆ ಇಟ್ಟಂಗಿಯನ್ನು ತೂರಲಾಯಿತು. ಅವರ ಬಳಿಯಿದ್ದ ಮುಸ್ಲಿಮನಿಗೆ ಅದು ಬಡಿಯಿತು. ಗಲಭೆಗಾರನೋರ್ವ ಬೀಸಿದ ಲಾಠಿಏಟು ಮಹಾತ್ಮಾಜಿಯವರ ತಲೆಗೆ ಬೀಳಬೇಕಾದ್ದು ಕೂದಲೆಳೆಯಷ್ಟರಿಂದ ತಪ್ಪಿತು. ಗಾಂಧೀಜಿ ದುಃಖದಿಂದ ತಲೆಯಲ್ಲಾಡಿಸಿದರು. ಕೊನೆಗೆ ಪೊಲೀಸರು ಬಂದು ಅಶ್ರುವಾಯು ಪ್ರಯೋಗಿಸಿ ಜನರನ್ನು ಚದುರಿಸಿದರು. ಗಾಂಧೀಜಿ ಉಪವಾಸ ಮಾಡಲು ನಿರ್ಧರಿಸಿದರು. ಸೆಪ್ಟೆಂಬರ್ ಒಂದರಂದು ಪತ್ರಿಕೆಗಳಿಗಿತ್ತ ಹೇಳಿಕೆಯಲ್ಲಿ 'ಗುಲ್ಲೆಬ್ಬಿಸುತ್ತಿರುವ ಜನಜಂಗುಳಿಯ ಎದುರಿಗೆ ಹೋಗಿ ನಿಲ್ಲುವುದು ಎಲ್ಲ ಸಮಯಗಳಲ್ಲಿ ಉಪಯೋಗವಾಗುವುದಿಲ್ಲ. ನಿನ್ನೆ ರಾತ್ರಿಯಂತೂ ಖಂಡಿತವಾಗಿಯೂ ಅದರಿಂದ ಉಪಯೋಗವಾಗಲಿಲ್ಲ. ನನ್ನ ಮಾತುಗಳು ಬೀರುವ ಪರಿಣಾಮಗಳಿಗಿಂತಲೂ ಬಹುಶಃ ನನ್ನ ಉಪವಾಸ ಪರಿಣಾಮ ಮಾಡಬಹುದು. ಕಲಕತ್ತೆಯಲ್ಲಿ ಅದರ ಪರಿಣಾಮವಾದರೆ ಅದು ಪಂಜಾಬದಲ್ಲಿ ಕಾದಾಡುತ್ತಿರುವವರ ಹೃದಯವನ್ನು ಮೃದು ಮಾಡಬಹುದು. ಆದ್ದರಿಂದ ಇಂದು ರಾತ್ರಿ 8–15ಕ್ಕೆ ಉಪವಾಸವನ್ನಾರಂಭಿಸುತ್ತೇನೆ. ಕಲಕತ್ತೆಗೆ ವಿವೇಕೋದಯವಾದಲ್ಲಿ ಕೊನೆಗೊಳ್ಳುವುದು.' ಎಂದರು. ಇದು ಆಮರಣಾಂತ ಉಪವಾಸವಾಗಿತ್ತು. ಸೆಪ್ಟೆಂಬರ್ 2 ರಂದು ಜನರು ಗುಂಪಾಗಿ ಗಾಂಧೀಜಿ ಅವರ ನಿವಾಸಕ್ಕೆ ಬರತೊಡಗಿದರು. "ಅವರ ಜೀವವನ್ನುಳಿಸಲು ನಾವು ಬೇಕಾದ್ದನ್ನು ಮಾಡಲು ಸಿದ್ಧರಿದ್ದೇವೆಂದು" ಹೇಳುತ್ತಿದ್ದರು.

"ಉಪವಾಸಗಳು ವಿವೇಕವನ್ನು ಜಾಗೃತಗೊಳಿಸಿ ಮನಸ್ಸಿನ ಮಾಲಿನ್ಯವನ್ನು ಅಳಿಸುತ್ತದೆ." ಇದು ನನ್ನ ಜೀವವುಳಿಸುವ ಮಾತಿಗಿಂತಲೂ ಹೃದಯ ಪರಿವರ್ತನೆ ಮುಖ್ಯವಾಗಿದೆ' ಎಂದರು. ಪ್ರಮುಖ ಮುಸ್ಲಿಮರು ಕೋಮು ಸೌಹಾರ್ದವನ್ನುಂಟು ಮಾಡಲು ಪ್ರಯತ್ನಿಸುವುದಾಗಿ ತಿಳಿಸಿದರು. ಪಾಕಿಸ್ತಾನೀ ನಾವಿಕರ ಸಂಘದ ಅಧಿಕಾರಿಯೊಬ್ಬರು ಸಹ ಅದೇ ಮಾತನ್ನು ಹೇಳಿದರು.

ಮುಂದುವರಿಯುವುದು...

ಸೌಜನ್ಯ : ಕಸ್ತೂರಿ – ಅಕ್ಟೋಬರ್ 2020ರ ಸಂಚಿಕೆಯಿಂದ

ಸಂಗ್ರಹ : ನಳಿನಾ ಡಿ. – ಪತ್ರಕರ್ತರು, ಕವಿಗಳು



ನವ ಭಾರತ ನಿರ್ಮಾಪಕರು : ಲೋಕ ಮಾನ್ಯರು : ಶತದಿನ ಸಂಸ್ಮರಣೆ

– ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಲಕ್ಷಾಂತರ ಜನರು ಹೋರಾಡಿದ್ದಾರೆ. ತಮ್ಮ ಸ್ವಂತ ಹಿತಾಸಕ್ತಿಗಳನ್ನು ಬದಿಗಿಟ್ಟು ದೇಶವನ್ನು ವಿದೇಶಿಯರಿಂದ ಮುಕ್ತಗೊಳಿಸಲು ಜೀವನವನ್ನೇ ಪಣಕ್ಕಿಟ್ಟು ಶ್ರಮಿಸಿದ್ದಾರೆ. ಅಂತಹ ತ್ಯಾಗ, ನಿಸ್ವಾರ್ಥ ದೇಶಪ್ರೇಮಿಗಳ ಜೀವನವನ್ನು ಪರಿಚಯಿಸಲು ಈ ಅಂಕಣ.

ತಿಲಕರ ಪತ್ರಿಕೋದ್ಯಮ : ಪತ್ರಿಕೆಗಳಿಗೆ ಯಾವ ಹೆಸರನ್ನಿಡಬೇಕೆಂಬ ಚರ್ಚೆಯ ಸಂದರ್ಭದಲ್ಲಿ ಅವರ ಸ್ನೇಹಬಳಗದ, ಹಿರಿಯ ಸದಸ್ಯ ಮತ್ತು ಪತ್ರಿಕೋದ್ಯಮಿ ಚಿಪಳೂಣಕರ ಅವರು ಸೂಚಿಸಿದ 'ಮರಾಠಾ' ಎಂಬ ಹೆಸರನ್ನೂ ಮರಾಠಿ ಪತ್ರಿಕೆಗೂ, ಅವರ ಆಶಯದ 'ಕೇಸರಿ' ಎಂಬ ಹೆಸರನ್ನು ಇನ್ನೊಂದು ಪತ್ರಿಕೆಗೆ ಇಡಲಾಯಿತು. ಕೇಸರಿ ಪತ್ರಿಕೆಗೆ ಅಗರ್‌ಕರ್ ಸಂಪಾದಕರಾದರು. ಮರಾಠಾ ಪತ್ರಿಕೆಗೆ ತಿಲಕರು ಸಂಪಾದಕರಾದರು. ಮರಾಠ ದಿ. 02.01.1881ರಂದು ಮತ್ತು ಕೇಸರಿ ದಿ.01.01.1881ರಲ್ಲಿ ಮೊದಲ ಸಂಚಿಕೆಗಳು ಪ್ರಕಟವಾದವು. 1882ರ ವೇಳೆಗೆ ಕೇಸರಿ, ಸ್ವಾತಂತ್ರ್ಯ ಹೋರಾಟದ ಮುಖವಾಣಿಯಂತಾಗಿತ್ತು. ಕೇಸರಿ ರಾಷ್ಟ್ರೀಯತೆ, ರಾಜಕೀಯ ಚಟುವಟಿಕೆ, ಆರ್ಥಿಕ, ಸಾಮಾಜಿಕ, ಶೈಕ್ಷಣಿಕ ಪರಿಸ್ಥಿತಿಗಳನ್ನು ಜನರಿಗೆ ತಲುಪಿಸುವುದು, ರಾಷ್ಟ್ರಪ್ರೇಮವನ್ನು ಬೆಸೆಯುವ ಕೆಲಸ ಮಾಡುತ್ತಿತ್ತು. ಮಹಾರಾಷ್ಟ್ರವಷ್ಟೇ ಅಲ್ಲದೆ ಭಾರತದಾದ್ಯಂತ ಅವರ ಪ್ರಸಾರ ವ್ಯಾಪ್ತಿ ವಿಸ್ತರಿಸಿತು. ಮರಾಠ ಪತ್ರಿಕೆಯಲ್ಲಿ ಭಾರತದ ಸಂಸ್ಥಾನಗಳ ಆಡಳಿತ ವ್ಯವಸ್ಥೆ, ಅವುಗಳ ವಿರುದ್ಧ ಬ್ರಿಟಿಷರ ಪ್ರಹಾರ, ಮರಾಠ ಭಾಷೆ ಸಾಹಿತ್ಯ ಕುರಿತು ಚರ್ಚಿಸುತ್ತಿತ್ತು. ಆದರೆ ಇವೆರಡು ಪತ್ರಿಕೆಗಳು "ಸರ್ಕಾರದ ಪರವಾಗಿಲ್ಲ" ಎಂದು ಬ್ರಿಟಿಷ್ ಸರ್ಕಾರದ ದಾಖಲೆಗಳಲ್ಲಿ ನಮೂದಿಸಲ್ಪಟ್ಟಿತ್ತು.

ಮರಾಠ ಪತ್ರಿಕೆಗೆ ಆರಂಭದಿಂದ, ಕೊಲ್ಹಾಪುರದ ಮೊಕದ್ದಮೆವರೆಗೆ ತಿಲಕರೇ ಸಂಪಾದಕರಾಗಿದ್ದರು. ಅಗರ್‌ಕರ್ ಸಂಪಾದಕರಾಗಿದ್ದ ಕೇಸರಿ ಪತ್ರಿಕೆಯನ್ನು 1887ರವರೆಗೆ ನಡೆಸುತ್ತಿದ್ದು, ತದನಂತರ ತಿಲಕರಿಗೆ ಅದರ ಸಂಪಾದಕತ್ವ ವಹಿಸಿಕೊಟ್ಟರು. ಹೀಗೆ ತಿಲಕರು, ಸ್ವತಂತ್ರ ಪತ್ರಿಕೋದ್ಯಮಿಯಾಗಿ, ಸೃಜನಶೀಲ ಲೇಖಕರಾಗಿ ಹೊರಹೊಮ್ಮಿದರು. ಆ ದಿನಗಳಲ್ಲಿ, ಕೊಲ್ಹಾಪುರದ ಮಹಾರಾಜನ ಆಸ್ಥಾನದಲ್ಲಿ ಪ್ರಮುಖ ಸಚಿವನಾಗಿದ್ದ ಮಾಧವರಾವ್ ಬರ್ವೆಯ ದುರಾಡಳಿತ, ಅನೀತಿಗಳ ಕುರಿತು ತಿಲಕರು ಅವರ ಎರಡೂ ಪತ್ರಿಕೆಗಳಲ್ಲಿ ಟೀಕಿಸಿ ಬರೆಯುತ್ತಾ, ರಾಜಕುಮಾರನ ಪ್ರಾಣಕ್ಕೆ ಅಪಾಯ ಸಂಭವಿಸಿದರೆ, ಬ್ರಿಟಿಷ್ ಸರ್ಕಾರವೇ ಹೊಣೆಯೆಂದು ಎಚ್ಚರಿಕೆಯ ಸಂದೇಶವನ್ನೇ ದಾಖಲಿಸಿದರು. ಆ ಲೇಖನದಲ್ಲಿ, ಮಾಧವರಾವ್ ಬರ್ವೆ ಅವರು ಬ್ರಿಟಿಷರಿಗೆ ಬರೆದ ಗೌಪ್ಯ ಪತ್ರವನ್ನು ಉಲ್ಲೇಖಿಸಿ ಟೀಕೆ ಟಿಪ್ಪಣಿಗಳನ್ನು ಬರೆದರೂ, ಪತ್ರಿಕೆಗಳ ಮೇಲೆ ಮೊಕದ್ದಮೆಯನ್ನೂ ಹೂಡಬಹುದೆಂಬ ಸವಾಲೊಡ್ಡಲಾಗಿತ್ತು. ಶಿವಾಜಿ ವಂಶಸ್ಥರಾದ ಮಹಾರಾಜನ ಮೇಲೆ, ಜನರಿಗೆ ಅತೀವ ಪ್ರೀತಿ ವಿಶ್ವಾಸವಿದ್ದಿತ್ತು. ಆದರೆ ಬರ್ವೆಯ ನಡವಳಿಕೆಗಳಿಂದ ಜನರು ಆಡಳಿತದಲ್ಲಿ ವಿಶ್ವಾಸ ಕಳೆದುಕೊಳ್ಳುತ್ತಿದ್ದರು. ತೀವ್ರತರ ಟೀಕೆ ಟಿಪ್ಪಣಿಗಳಿಂದ ವ್ಯಗ್ರನಾದ ಬರ್ವೆ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದನು. ಈತನ ಪರವಾಗಿ ಕ್ಲೀವರ್‌ಲೆಂಡ್ ಲಿಟ್ಲ್, ಸಾಲಿಸಿಟರ್ ಜನರಲ್ ಅವರೇ ವಾದಿಸಿದ್ದರು. ಮರಾಠ ಪತ್ರಿಕೆಯ ಮೂರು ಲೇಖನ ಅಷ್ಟೆ ಬರೆದಿದ್ದರಾದರೂ ಸಂಪಾದಕರಾಗಿದ್ದ, ಬಾಲಗಂಗಾದರರೇ ಹೊಣೆಗಾರರಾಗಿದ್ದರು. ಹಾಗೂ ಕೇಸರಿ ಪತ್ರಿಕೆಯ ಸಂಪಾದಕರಾಗಿದ್ದ ಅಗರ್‌ಕರ್ ಅವರನ್ನು ಅಪಾದಿತರನ್ನಾಗಿಸಲಾಗಿತ್ತು. ಫಿರೋಜ್ ಷಾ ಮೆಹ್ತಾ ಮತ್ತು ತೇಲಂಗ್ ಅವರು, ತಿಲಕ ಮತ್ತು ಅಗರ್‌ಕರ್ ಪರ ವಕಾಲತ್ತು ವಹಿಸಿದ್ದರು. ಮುಂಬೈನ ಪ್ರಧಾನ ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್ ಮಿಸ್ಟರ್ ವೆಬ್ಸ್ ಅವರ ನ್ಯಾಯಾಲಯದಲ್ಲಿ ಈ ಪ್ರಕರಣ ವಿಚಾರಣೆಗೆ ಒಳಪಟ್ಟಿತ್ತು. ಬರ್ವೆ ಅವರನ್ನು ಅಪಮಾನ ಮಾಡುವ ಉದ್ದೇಶದಿಂದ ಪತ್ರಿಕೆಗಳಲ್ಲಿ ಬರೆಯಲಾಗಿತ್ತು ಎಂಬುದು ಪ್ರಮುಖ ಆರೋಪವಾಗಿತ್ತು. ಬರ್ವೆ ಅವರನ್ನು ಅವಮಾನಿಸುವ ಉದ್ದೇಶ ತಮಗಿರಲಿಲ್ಲವೆಂದೂ ಆಡಳಿತದ ಏರುಪೇರುಗಳಿಗಾಗಿ ಮಾತ್ರ ಪತ್ರಿಕೆಯಲ್ಲಿ ಲೇಖನ ಪ್ರಕಟಿಸಿದ್ದಾಗಿಯೂ, ಅದಕ್ಕಾಗಿ ಕ್ಷಮೆ ಯಾಚಿಸುವ ಪತ್ರವನ್ನು ಇಬ್ಬರೂ ಸಂಪಾದಕರು ಬರೆದು ಕೊಟ್ಟಿದ್ದರೆಂದು ವರದಿಗಳು ತಿಳಿಸುತ್ತವೆ. ನಂಬಲಾನರ್ಹವಾದ ವಿಚಾರವಾದರೂ ಆಗಿನ್ನೂ 26ರ ತರುಣ ತಿಲಕ್, ಪತ್ರಿಕೆ ಆರಂಭಿಕೆಯ ಉತ್ಸಾಹದಲ್ಲಿದ್ದವರು. ಪತ್ರಿಕೆಯ ನಿರಂತರ ಪ್ರಕಟಣೆಯ ಮಹದುದ್ದೇಶದಿಂದ ಕ್ಷಮಾಪತ್ರ ಬರೆದುಕೊಟ್ಟಾರೇನೋ ಎಂಬ ಅಭಿಪ್ರಾಯವೂ ಇದೆ. ಪ್ರಕರಣವನ್ನೇನಾದರೂ ಕ್ಷಮಾದಾನ ನೀಡಿ, ಮುಕ್ತಾಯಗೊಳಿಸಬಹುದೆಂಬ ಶಂಕೆಯಿಂದ ಬರ್ವೆಯ ಪರ ವಕೀಲ "ಬರ್ವೆ ಅವರಿಗೆ ಸಾಕಷ್ಟು ಅವಮಾನಗಳಾಗಿವೆ. ಕ್ಷಮೆ ಪತ್ರ ಈಗ ಕೊಟ್ಟಲ್ಲಿ, ಅವಮಾನ ಸರಿಪಡಿಸಲಾಗದು, ಆದ್ದರಿಂದ ತಿಲಕ್ ಮತ್ತು ಅಗರ್‌ಕರ್ ಅವರಿಗೆ ಶಿಕ್ಷೆ ಆಗಲೇಬೇಕು" ಎಂದು ವಿಚಾರ ಮಂಡಿಸಿದ್ದ. ತಿಲಕ್ ಮತ್ತು ಅಗರ್‌ಕರ್ ಅವರಿಗೆ 4 ತಿಂಗಳ ಜೈಲು ಶಿಕ್ಷೆ ವಿಧಿಸಲಾಯಿತು. ಅವರನ್ನು ಮುಂಬೈನ ಡೋಂಗರಿ ಜೈಲಿನ '13x12' ಅಳತೆಯ ಕೊಠಡಿಗೆ ಕಳುಹಿಸಲಾಯಿತು. ಈ ಕೊಠಡಿ, ತಿಗಣೆ, ಜಿರಳೆ, ಜೇಡಗಳ ಆವಾಸಸ್ಥಾನವಾಗಿತ್ತು. ಜೈಲಿನ ಆಹಾರ ತೀರಾ ಕಳಪೆಯಾಗಿತ್ತು. ಕಳಪೆ ಊಟ, ನಿದ್ರೆಗಳಿಲ್ಲದ ದಿನಗಳನ್ನೂ ಅವರಿಬ್ಬರೂ ಜೈಲಿನಲ್ಲಿ ಕಳೆದಿದ್ದರು. ಅಗರ್‌ಕರ್ ಅಸ್ತಮದಿಂದ ಬಳಲುತ್ತಿದ್ದರೆ, ತಿಲಕರು ತೀವ್ರ ನಿಶ್ಯಕ್ತರಾದರು. ಆದಾಗ್ಯೂ ದೇಶದ ಭವಿಷ್ಯದ ಬಗ್ಗೆ ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳು, ಪತ್ರಿಕೆಯ ಮುನ್ನಡೆ ಬಗ್ಗೆ ಚರ್ಚಿಸುತ್ತಾ, ದಿನದೂಡುತ್ತಿದ್ದರು. ಅವರ ಕೋರಿಕೆ ಮೇರೆಗೆ ಒಂದು ತಿಂಗಳ ನಂತರ, ಅವರಿಗೆ ಲೇಖನಿ-ಕಾಗದವನ್ನು ಕೊಡಲಾಯಿತು. ಅಗರ್‌ಕರ್ ಅವರು "ಡೋಂಗರಿ ಜೈಲಿನಲ್ಲಿ 101 ದಿನಗಳು" ಎಂಬ ಕೃತಿ ರಚಿಸಿದರು.



ಎಲಿಫನ್‌ಸ್ಟನ್ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ವಿಲಿಯಂ ವರ್ಡ್ಸ್‌ವರ್ತ್ ಅವರು, ಮುಂಬೈನ ಗೌರ್ನರ್ ಅವರಿಗೆ ಮನವಿ ಪತ್ರ ಬರೆದು, ಯುವ ಪತ್ರಿಕೋದ್ಯಮಿಗಳನ್ನು ಬಿಡುಗಡೆಮಾಡಲು ಕೋರಿಕೊಂಡರು. ಆದರೆ ಆಡಳಿತಶಾಹಿ ಮೌನವಹಿಸಿತು. ಜನರಲ್ಲಿ ಇವರಿಬ್ಬರ ಧೈರ್ಯ, ನ್ಯಾಯಪರತೆ, ದೇಶಾಭಿಮಾನದ ಬಗ್ಗೆ ಅಪಾರ ಗೌರವ ವಿಶ್ವಾಸ ಬೆಳೆಯಿತು. ಸಾರ್ವಜನಿಕ ನಿಧಿ ಸಂಗ್ರಹಿಸಲಾಯಿತು. ಕೊಲ್ಹಾಪುರದ ರಾಜಾರಾಮ್ ಕಾಲೇಜಿನ ವಿದ್ಯಾರ್ಥಿಗಳು ನಾಟಕ ಪ್ರದರ್ಶನ ಮಾಡಿ ತಿಲಕ್ ಮತ್ತು ಅಗರ್‌ಕರ್ ನಿಧಿಗೆ ಹಣ ಕೂಡಿಸಿದರು. ಈ ನಾಟಕದಲ್ಲಿ ಗೋಪಾಲ ಕೃಷ್ಣ ಗೋಖಲೆ ಅವರು ಸ್ತ್ರೀ ಪಾತ್ರ ವಹಿಸಿದ್ದರು. ಸಾರ್ವಜನಿಕ ಅಭಿಪ್ರಾಯ ಈ ಇಬ್ಬರೂ ಪತ್ರಿಕೋದ್ಯಮಿಗಳ ಮೇಲೆ ಇದ್ದುದರಿಂದ ಮತ್ತು ಅವರ ಸನ್ನಡತೆಯ ಕಾರಣದಿಂದ ಒಟ್ಟು ಶಿಕ್ಷೆಯು 120 ದಿನಗಳಲ್ಲಿ 19 ದಿನಗಳನ್ನು ಕಡಿತಮಾಡಿ, 1882ರ ಅಕ್ಟೋಬರ್ 22ರಂದು ಇಬ್ಬರನ್ನೂ ಜೈಲಿನಿಂದ ವಿಮುಕ್ತಿಗೊಳಿಸಲಾಯಿತು.

ವಿನೋಬಾ ಭಾವೆಯವರ ವ್ಯಕ್ತಿತ್ವ ಹಾಗೂ ಚಿಂತನೆ (11.09.1895 – 15.11.1982)

–ಡಾ. ಶಿವಾನಂದ ಶೆಟ್ಟರ : ಪ್ರಾಧ್ಯಾಪಕರು ಹಾಗೂ ಅಧ್ಯಕ್ಷರು, ಗಾಂಧೀ ಅಧ್ಯಯನ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ


(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



ಆ ನೂರು ಎಕರೆ ಜಮೀನನ್ನು ಕೂಡಲೇ ಬಡವರಿಗೆ ಹಂಚಿದರು. ಭೂಮಿಯನ್ನು ದಾನವಾಗಿ ಕೇಳಿದೊಡನೆ ಜನ ಕೊಡುವರೆಂಬ ಕಲ್ಪನೆಯೂ ಅವರಿಗಿರಲಿಲ್ಲ. ಹೀಗೆ ಪ್ರಾರಂಭವಾದ ಭೂದಾನ ಚಳುವಳಿಯ ಕಾಲಕ್ಕೆ ಅವರು ಸತತ ಹದಿನಾಲ್ಕು ವರ್ಷಗಳ ಕಾಲ ಸುಮಾರು ಅರವತ್ತು ಸಾವಿರ ಮೈಲಿಗಳಷ್ಟು ಪಾದಯಾತ್ರೆ ಕೈಗೊಂಡರು. ಸುಮಾರು ನಲವತ್ತೆರಡು ಲಕ್ಷ ಎಕರೆ ಭೂಮಿ ದಾನವಾಗಿ ಬಂದಿತೆಂಬುದು ಸಣ್ಣ ವಿಷಯವೇನಲ್ಲ. ತಮ್ಮ ರಾಜಕೀಯ ಜೀವನದ ಒಂದು ಹಂತದಲ್ಲಿ ಸಮಾಜವಾದಿ ನಾಯಕರಾಗಿದ್ದ ಜಯಪ್ರಕಾಶ ನಾರಾಯಣರು ಪಕ್ಷ ರಾಜಕೀಯ ತೊರೆದು ವಿನೋಬಾರ ಭೂದಾನ ಚಳುವಳಿಯಲ್ಲಿ ಭಾಗವಹಿಸುವ ನಿರ್ಧಾರ ಕೈಕೊಂಡರು. ಒಟ್ಟಾರೆ ಭೂದಾನ ಚಳುವಳಿ ನಮ್ಮ ಭೂ ಸಮಸ್ಯೆಯನ್ನು ಪರಿಹರಿಸುವಲ್ಲಿ ಫಲಪ್ರದವಾಗಲಿಲ್ಲವಾದರೂ ಅದರ ಮಹತ್ವವನ್ನು ಕಡೆಗಣಿಸಲಾಗುವುದಿಲ್ಲ. ಹೃದಯ ಪರಿವರ್ತನೆಯ ಪಥ ಕೆಲಮಟ್ಟಿಗೆ ಯಶಸ್ವಿಯಾಯಿತಾದರೂ ಅದು ದೇಶದ ಇಡೀ ಬಂಡವಾಳಶಾಹಿ, ಜಮೀನ್ದಾರಿ ವರ್ಗದ ಗುಣ ಲಕ್ಷಣಗಳನ್ನು ಬದಲಿಸುವಲ್ಲಿ ಸಫಲವಾಗಲಿಲ್ಲವೆನ್ನಬಹುದು. ಅದೇನೇ ಇದ್ದರೂ ಅವರು ಈ ದೇಶಕ್ಕೆ ಕೊಟ್ಟ ದಾನದ ಕಲ್ಪನೆ ಇನ್ನೂ ಒಂದಿಲ್ಲೊಂದು ರೀತಿಯಲ್ಲಿ ಕೆಲಸ ಮಾಡುತ್ತಲೇ ಇದೆ. ಭೂದಾನ, ಗ್ರಾಮದಾನ ಕಲ್ಪನೆಯ ಜೊತೆಗೆ ಸಂಪತ್ತಿ ದಾನ, ಬುದ್ಧಿದಾನ, ಶ್ರಮದಾನ, ಜೀವನದಾನ, ಸಾಧನದಾನ, ಪ್ರೇಮದಾನ ಮುಂತಾದವು ಒಂದಿಲ್ಲೊಂದು ರೀತಿಯಲ್ಲಿ ತಮ್ಮ ಸ್ವರೂಪವನ್ನು ಇಂದಿಗೂ ಉಳಿಸಿಕೊಂಡಿವೆ.

ವಿನೋಬಾ ಅವರು ತಮ್ಮ ಭೂದಾನ ಪಾದಯಾತ್ರೆಯ ಕಾಲಕ್ಕೆ ಮಧ್ಯಪ್ರದೇಶದಲ್ಲಿದ್ದಾಗ ಚಂಬಲ್ ಕಣಿವೆ ಡಕಾಯಿತರ ಹಾವಳಿ ಅವರ ಗಮನಕ್ಕೆ ಬಂತು. ಡಕಾಯತನೊಬ್ಬನನ್ನು ಹಿಡಿದು ಕೊಟ್ಟವರಿಗೆ ಹತ್ತು ಸಾವಿರ ರೂಪಾಯಿಗಳ ಬಹುಮಾನವನ್ನು ಸರ್ಕಾರ ಘೋಷಿಸಿತು. ಇಂಥ ಸ್ಥಿತಿಯಲ್ಲಿ ಗುಟ್ಟಾಗಿ ಡಕಾಯಿತರನ್ನು ಭೇಟಿ ಮಾಡಿದ ವಿನೋಬಾ ಅಲ್ಲಿ ಅವರ ಜೀವನ ಶೈಲಿ ನೋಡಿ ಕನಿಕರಪಟ್ಟರು. 'ಧೀರರಾದವರು ಒಮ್ಮೆ ಮಾತ್ರ ಸಾಯುತ್ತಾರೆ. ನೀವಾದರೂ ಕ್ಷಣಕ್ಷಣಕ್ಕೂ ಸಾವನ್ನು ಎದುರು ನೋಡುತ್ತೀರಿ. ಅದರಿಂದ ಪಾರಾಗಲು ಮತ್ತೆ ಹಿಂಸೆ ಮಾಡುತ್ತೀರಿ. ನೀವೆಂಥ ಧೀರರು?' ಎಂದು ಪ್ರಶ್ನಿಸಿ, ಅವರಿಗೆ ತಮ್ಮ ತಪ್ಪೊಪ್ಪಿಕೊಂಡು ಹೊಸ ಜೀವನ ಪ್ರಾರಂಭಿಸಲು ಮನವಿ ಮಾಡಿಕೊಂಡರು. ಅವರ ಈ ಮಾತು ಡಕಾಯಿತರ ಅಂತಃಸಾಕ್ಷಿಯನ್ನು ಕಲಕಿ ಅವರಲ್ಲಿ ಅನೇಕರು ಶರಣಾಗತರಾದರು. ಇದು ಎಂಥ ಕ್ರೂರಿಯನ್ನಾದರೂ ಹೃದಯ ಪರಿವರ್ತನೆಯ ಮೂಲಕ ಸನ್ಮಾರ್ಗಕ್ಕೆ ತರಬಹುದೆಂಬುದಕ್ಕೆ ಒಂದು ಒಳ್ಳೆಯ ಉದಾಹರಣೆ. ಜಯಪ್ರಕಾಶರು ಈ ದೇಶದ ರಾಜಕೀಯ ಭ್ರಷ್ಟಾಚಾರದ ವಿರುದ್ಧ ವಿದ್ಯಾರ್ಥಿ ಯುವ ಜನರು ಕೈಗೊಂಡ ಹೋರಾಟದ ನೇತೃತ್ವ ವಹಿಸಿದರು. ಪರಿಣಾಮವಾಗಿ ತಮ್ಮ ಅಧಿಕಾರಕ್ಕೆ ಧಕ್ಕೆ ಬಂದೀತೆಂಬ ಭಯದಿಂದ ಅಂದಿನ ಪ್ರಧಾನಿ ಇಂದಿರಾ ಗಾಂಧಿಯವರು 1975ರಲ್ಲಿ ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಿದರು. ಆಗ ಜೆ. ಪಿ. ಯವರನ್ನೊಳಗೊಂಡಂತೆ ಸಾವಿರಾರು ಜನ ನಾಯಕರನ್ನು ದೇಶದಾದ್ಯಂತ ಬಂಧಿಸಲಾಯಿತು. ಈ ಹಂತದಲ್ಲಿ ವಿನೋಬಾ ಮೌನ ವಹಿಸಿದರು. ಈ ಮೌನ ಜೆ.ಪಿ. ಹಾಗೂ ವಿನೋಬಾರ ನಡುವೆ ಮತಭೇದ ಉಂಟಾಗಲು ಕಾರಣವಾಯಿತು. ವಿನೋಬಾರ ನಿಷ್ಕ್ರಿಯೆಯನ್ನು ಹಲವರು ಹಲವು ರೀತಿಯಲ್ಲಿ ಅರ್ಥೈಸುತ್ತಾರಾದರೂ ಪ್ರಜಾಪ್ರಭುತ್ವದ ಕಗ್ಗೊಲೆಯಾದಾಗ ಮೌನವಹಿಸಿದ ವಿನೋಬಾರ ನಿಲುವು ಗಾಂಧೀ ಮಾರ್ಗದಿಂದ ಪಲ್ಲಟವಾಯಿತೆಂದು ಹೇಳದೇ ವಿಧಿಯಿಲ್ಲ.

ಇಷ್ಟೆಲ್ಲ ಹೇಳಿದ ಮೇಲೂ ಒಂದು ವಿಷಯ ಸ್ಪಷ್ಟವಿದೆ. ಸ್ವಾತಂತ್ರ್ಯ ಬಂದ ದಶಕದಲ್ಲಿಯೇ ನಮ್ಮ ನಾಯಕತ್ವ ಗಾಂಧೀ ಮಾರ್ಗದಿಂದ ಬಹುದೂರ ಸರಿದು ಬಿಟ್ಟಿತು. ನಮ್ಮನ್ನು ಕೆಲಮಟ್ಟಿಗಾದರೂ ಆ ಮಾರ್ಗಕ್ಕೆ ಕರೆದುಕೊಂಡು ಹೋದ ಗಾಂಧೀಯುಗದ ಮಹಾನ್ ವ್ಯಕ್ತಿ ವಿನೋಬಾಜಿ ಅವರೇ. ಇಂದಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪರಿಣಾಮವಾಗಿ ನಮ್ಮ ಗ್ರಾಮಜೀವನ ಅಸಹನೀಯವಾಗುತ್ತಿದೆ, ಕೃಷಿ ಅನಾಕರ್ಷಕ ಹಾಗೂ ಅನುತ್ಪಾದಕವೆನಿಸುತ್ತಿದೆ. ಗುಡಿಕೈಗಾರಿಕೆಗಳು ವಿನಾಶದ ಅಂಚಿನಲ್ಲಿವೆ. ಇಂದು ಇಡೀ ಒಂದು ಜನವರ್ಗವೇ ಬಡತನದಲ್ಲಿ ಪರಿತಪಿಸುತ್ತಿರುವುದನ್ನು ಅರ್ಥಮಾಡಿಕೊಂಡಾಗ ಮಾತ್ರ ನಮಗೆ ವಿನೋಬಾಭಾವೆ ಅವರ ಚಿಂತನೆ, ಕಾರ್ಯಚರಣೆಗಳ ಪ್ರಸ್ತುತತೆ ಅರ್ಥವಾಗುತ್ತದೆ.



ರಾಶಿಪುರಂ ಕೃಷ್ಣಸ್ವಾಮಿ ನಾರಾಯಣ್ 10.10.1906 13.05.2001 ಭಾರತದ ಪ್ರಸಿದ್ಧ ಕಾದಂಬರಿಕಾರರಲ್ಲಿ ಒಬ್ಬರು. ನಾರಾಯಣ್ ಅವರ ಕಾದಂಬರಿಗಳು ಆಂಗ್ಲ ಭಾಷೆಯಲ್ಲಿದ್ದು, ಪಾತ್ರಗಳ ನೈಜತೆ, ಸರಳತೆ ಮತ್ತು ಮೃದು ಹಾಸ್ಯಕ್ಕೆ ಹೆಸರಾಗಿವೆ. ಅವರ ಬಹುಪಾಲು ಕಥೆಗಳು "ಮಾಲ್ಗುಡಿ" ಎಂಬ ಕಾಲ್ಪನಿಕ ದಕ್ಷಿಣ ಭಾರತದ ಸ್ಥಳದಲ್ಲಿ ನಡೆಯುತ್ತವೆ.



ಸರ್ವಧರ್ಮ ಸಮನ್ವಯತೆ



ವಿವಿಧತೆ ನಡುವಿನ ಹೊಂದಾಣಿಕೆಯೇ ಧರ್ಮ: ಇದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕಿದೆ

– ಡಾ. ಎಚ್.ಎಸ್. ದೊರೆಸ್ವಾಮಿ

ಬುದ್ಧ, ಬಸವ, ಅಶೋಕ, ಅಕ್ಬರ್, ಸೂಫಿಗಳು ಭಕ್ತಿಪಂಥದವರು, ಗುರುನಾನಕ್ ಒಂದೇ. ಇವರೆಲ್ಲ ಬೇರೆಬೇರೆ ಕಾಲಘಟ್ಟದಲ್ಲಿ ಬೇರೆಬೇರೆ ಮಾತುಗಳಲ್ಲಿ ಹೇಳಿದ ಸಾರ ಒಂದೇ. ಅದು ಸೌಹಾರ್ದನೆ, ಸಾಮರಸ್ಯ. ಭಾರತದಲ್ಲಿ ನೂರಾರು ವರ್ಷಗಳಿಂದ ನೆಲೆಸಿರುವ ಹಿಂದು, ಕ್ರಿಶ್ಚಿಯನ್, ಪಾರ್ಸಿ, ಮಹಮದೀಯರು ಎಲ್ಲರೂ ಶಾಂತಿಯಿಂದ, ಸೌಹಾರ್ದದಿಂದ 'ನಾವೆಲ್ಲ ಭರತೀಯರು' ಎಂಬ ಬಂಧದಲ್ಲಿ ಬದುಕಬೇಕು ಎಂಬ ಪಾಠವನ್ನು ಅವರ ಬೋಧನೆಗಳು ನಮಗೆ ದಾಟಿಸುತ್ತವೆ. ಅವರ ನಂತರ ಬಂದ ರಾಮಕೃಷ್ಣ ಪರಮಹಂಸರು, ಸ್ವಾಮಿ ವಿವೇಕಾನಂದರು, ಮಹಾತ್ಮ ಗಾಂಧಿ, ಇವರೆಲ್ಲ ಸರ್ವಧರ್ಮಗಳ ಸಮನ್ವಯ ಕಾರ್ಯವನ್ನು ಮುಂದುವರೆಸಿದರು. ಗಾಂಧೀಜಿ ಕೋಮು ಸೌಹಾರ್ದಕ್ಕಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟರು. ಮಾತ್ರವಲ್ಲದೆ ಅದ-ಕ್ಕೆ ಇನ್ನೊಂದು ಆಯಾಮವನ್ನೂ ಸೇರಿಸಿದರು. ಅದೆಂದರೆ ಪ್ರಜಾಪ್ರಭುತ್ವ ಪ್ರತಿಪಾದನೆ. ಇದು ಅವರ ವಿಶಿಷ್ಟ ಕೊಡುಗೆ. ಮನುಷ್ಯರಲ್ಲಿ ಪರಸ್ಪರ ಸಹಿಷ್ಣುತೆ, ಸಾಮರಸ್ಯಗಳೇ ಪ್ರಜಾಪ್ರಭುತ್ವದ ನೆಲೆಗಟ್ಟು. ಅದು ನಮ್ಮ ಜೀವನದಲ್ಲಿ, ನಡತೆಯಲ್ಲಿ, ಮಾತಿನಲ್ಲಿ, ಕೃತಿಯಲ್ಲಿ ಪ್ರತಿಪಾದಿತವಾಗಬೇಕು. ಅಭಿವ್ಯಕ್ತವಾಗಬೇಕು ಎಂದು ಅವರು ಸಾರಿ ಹೇಳಿದರು. ವಿವಿಧ ಮತಗಳ ನಡುವಿನ ಹೊಂದಾಣಿಕೆಯೇ ನಿಜವಾದ ಧರ್ಮ. ಬಡಿದಾಡುವುದನ್ನು ಬಯಸುವ ಧರ್ಮ, ಧರ್ಮವೇ ಅಲ್ಲ. ಸಹನಶೀಲತೆ, ಸಂವೇದನೆ ಮತ್ತು ಮಾನವೀಯತೆ ಇವುಗಳನ್ನು ಪೋಷಿಸುವ ಸಾಧನವಾಗಬೇಕು ಧರ್ಮ. ಸ್ವಾತಂತ್ರ್ಯ ಪ್ರಾಪ್ತವಾದ ಕೆಲ ವರ್ಷಗಳು ರಾಷ್ಟ್ರದ ಅಖಂಡತೆ, ವಿವಿಧ ಮತಗಳಲ್ಲಿ ಸೌಹಾರ್ದತೆ, ಸಹಕಾರ ಭಾವನೆಗಳನ್ನು ಕಾಪಾಡಿಕೊಂಡು ಬರಲು ಪ್ರಯತ್ನಗಳು ಅಖಂಡವಾಗಿ ನಡೆದವು.

ಮುಂದುವರಿಯುವುದು...


ವಿಶಿಷ್ಟರು



ಪ್ರಥಮ ಚಿತ್ರ ಸಾಹಿತಿ ಬೆಳ್ಳಾವೆ ನರಹರಿ ಶಾಸ್ತ್ರಿ

ಕನ್ನಡದ ಮೊದಲ ಚಿತ್ರಸಾಹಿತಿ ಬೆಳ್ಳಾವೆ ನರಹರಿ ಶಾಸ್ತ್ರಿಗಳು. ದಿ. 20.09.2020ರಂದು ಅವರ 138ನೇ ಜನ್ಮದಿನ. ತುಮಕೂರು ಬಳಿಯ ಬೆಳ್ಳಾವೆಯಲ್ಲಿ ಜನಿಸಿದ ಶಾಸ್ತ್ರಿ ಅವರಿಗೆ ಎಳವೆಯಲ್ಲೇ ನಾಟಕದ ಗೀಳು. ಮುಂದೆ ಶಿಕ್ಷಕರಾದಾಗ ನಾಟಕ ರಚಿಸುವ, ಅಭಿನಯ ಮಾಡುವ ಜೊತೆಗೆ ಗೀತ ರಚನಕಾರರಾಗಿಯೂ ಗುರುತಿಸಿಕೊಂಡರು. ಪಿಟೀಲು ನುಡಿಸುವ ಹವ್ಯಾಸವೂ ಇತ್ತು. ಆ ಹೊತ್ತಿಗೆ ಗುಬ್ಬಿ ಕಂಪನಿಯಲ್ಲಿ ನಾಟಕಗಳಿಗೆ ಕೊರತೆ ಇತ್ತು. ಶಾಸ್ತ್ರಿಗಳು ಅತ್ಯುತ್ತಮ ನಾಟಕ ರಚಿಸಿ ರಂಗಭೂಮಿಯ ಎಲ್ಲೆ ವಿಸ್ತರಿಸಿದರು. ನಟ, ನಟಿಯರಿಗೆ ಹಾಡಿನ ತರಬೇತಿಯನ್ನು ನೀಡುತ್ತಿದ್ದರು. ಸಾಂಪ್ರದಾಯಿಕ ಶೈಲಿಯ ಕಂದ ಪದ್ಯ, ಹಾಡುಗಳನ್ನು ನಾಟಕಗಳಲ್ಲಿ ಸೇರಿಸಿ ರಂಗು ಹೆಚ್ಚಿಸಿದರು. 1950ರ ಸುಮಾರಿಗೆ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಶಾಸ್ತ್ರಿ ಅವರ 'ರಾಜಭಕ್ತಿ ಕಾವ್ಯಂ' ಕಾವ್ಯವನ್ನು ಮೆಚ್ಚಿ ಆಸ್ಥಾನ ವಿದ್ವಾನ್ ಬಿರುದು ನೀಡಿ ಗೌರವಿಸಿದರು. ಮುಂದೆ ಇವರ ಪ್ರತಿಭೆ ಚಿತ್ರರಂಗಕ್ಕೂ ವಿಸ್ತರಿಸಿತು. ಮೊದಲ ಕನ್ನಡ ಚಿತ್ರ 'ಸತಿ ಸುಲೋಚನ'ಕ್ಕೆ ಸಾಹಿತ್ಯ, ಕಥೆ, ಗೀತೆಗಳನ್ನು ಬರೆಯುವ ಮೂಲಕ ಕನ್ನಡದ ಮೊದಲ ಚಿತ್ರ ಸಾಹಿತಿಯಾಧ ಹೆಗ್ಗಳಿಕೆ ಇವರದು.

ಸೌಜನ್ಯ : ಕನ್ನಡಪ್ರಭ – **20.09.2020** – ಸಂಗ್ರಹ : ಎಸ್.ಎಂ. ಶ್ಯಾಮಲ, ಅಧ್ಯಾಪಕರು (ನಿ)



ಅಂತರಾಷ್ಟ್ರೀಯ ಅಹಿಂಸಾ ದಿನ

ಅಕ್ಟೋಬರ್ 2 ಮಹಾತ್ಮ ಗಾಂಧಿ ಅವರ ಜನ್ಮದಿನವನ್ನು ವಿಶ್ವ ಅಹಿಂಸಾ ದಿನ ಎಂದು ಪರಿಗಣಿಸಲಾಗಿದೆ. 2004ರ ಜನವರಿಯಲ್ಲಿ ಇರಾನಿಯನ್ ನೊಬೆಲ್ ಪ್ರಶಸ್ತಿ ವಿಜೇತ ಶಿರಿನ್ ಎಬಾಡಿ ಪ್ಯಾರಿಸ್‌ನ ಅಂತರಾಷ್ಟ್ರೀಯ ಅಹಿಂಸಾ ದಿನದ ಪ್ರಸ್ತಾಪವನ್ನು ಕೈಗೆತ್ತಿಕೊಂಡರು. ಮುಂಬೈಯ ವರ್ಲ್ಡ್ ಸೋಶಿಯಲ್ ಫೋರಂನ ಹಿಂದಿ ಶಿಕ್ಷಕರಿಂದ ಅಂತರಾಷ್ಟ್ರೀಯ ವಿದ್ಯಾರ್ಥಿಗಳಿಗೆ ಪ್ಯಾರೀಸ್‌ನಲ್ಲಿ ಪಾಠ ಮಾಡುತ್ತಿದ್ದಾಗ ಈ ಕಲ್ಪನೆ ಬಂದಿತ್ತು. ಈ ಯೋಚನೆ ಕ್ರಮೇಣ ಭಾರತದ ಕಾಂಗ್ರೆಸ್ ಪಕ್ಷದ ನಾಯಕರ ಗಮನಕ್ಕೂ ಬಂದಿತು. ಜನವರಿ 2007ರಲ್ಲಿ ನವದೆಹಲಿಯಲ್ಲಿ ನಡೆಸಿದ ಸತ್ಯಾಗ್ರಹ ಸಮಾವೇಶದಲ್ಲಿ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಮತ್ತು ಆರ್ಚ್ ಬಿಷಪ್ ಡೆಸ್ಮಂಡ್ ಟುಟು ಈ ಕಲ್ಪನೆಯನ್ನು ಅಳವಡಿಸಿಕೊಳ್ಳಲು ಯುನೈಟೆಡ್ ನೇಷನ್ಸ್‌ಗೆ ಕರೆ ನೀಡಿದರು. 2007ರ ಜೂನ್ 15 ರಂದು ಯುನೈಟೆಡ್ ನೇಷನ್ಸ್‌ನ ಜನರಲ್ ಅಸೆಂಬ್ಲಿ, ಅಕ್ಟೋಬರ್ 2ನ್ನು ಅಂತರಾಷ್ಟ್ರೀಯ ಅಹಿಂಸಾ ದಿನವಾಗಿ ಆಚರಿಸಲು ತೀರ್ಮಾನಿಸಿತು. ಜನರಲ್ ಅಸೆಂಬ್ಲಿಯ ನಿರ್ಣಯದಂತೆ ಯುನೈಟೆಡ್ ನೇಷನ್ಸ್ ಸದಸ್ಯ ರಾಷ್ಟ್ರಗಳಿಗೆ ಅಕ್ಟೋಬರ್ 2 "ಶಿಕ್ಷಣ ಮತ್ತು ಸಾರ್ವಜನಿಕ ಜಾಗೃತಿ ಸೇರಿದಂತೆ ಅಹಿಂಸೆಯ ಸಂದೇಶವನ್ನು ಸೂಕ್ತ ರೀತಿಯಲ್ಲಿ ಪ್ರಸಾರ ಮಾಡಬೇಕು" ಎಂದು ಮನವಿ ಮಾಡಿಕೊಂಡಿತು. ಯುನೈಟೆಡ್ ನೇಷನ್ಸ್‌ನೊಂದಿಗೆ ಭಾರತದ ಖಾಯಂ ಕಾರ್ಯಾಚರಣೆಯ ನಿಟ್ಟಿನಲ್ಲಿ, ಭಾರತದ ರಾಯಭಾರಿಯ ಕೋರಿಕೆಯ ಮೇರೆಗೆ, ನ್ಯೂಯಾರ್ಕ್ ನಗರದ ಯುನೈಟೆಡ್ ನೇಷನ್ಸ್‌ನ ಪೋಸ್ಟಲ್ ಅಡ್ಮಿನಿಸ್ಟ್ರೇಷನ್ ವಿಶೇಷ ಸ್ಟಾಂಪ್ ಒಂದನ್ನು ತಯಾರಿಸಿತು. ಅಕ್ಟೋಬರ್ 2 ರಿಂದ 31 ರವರೆಗೆ ಯು.ಎನ್.ಪಿ.ಎ.ಯಿಂದ ಹೊರಹೋಗುವ ಎಲ್ಲಾ ಮೈಲ್ ಗಳೂ ಕೂಡ, ಈ ಛಾಪು ಹೊಂದಿರಲೇಬೇಕೆಂದು ಯು.ಎನ್.ಪಿ.ಎ. ಸೂಚಿಸಿತ್ತು. ಅಂತರಾಷ್ಟ್ರೀಯ ಅಹಿಂಸಾ ದಿನದ ದ್ಯೋತಕವಾಗಿ ಕಾರ್ಲ್ ಫ್ರೆಡ್ರಿಕ್ ರಾಯಿಟರ್ ಸ್ವಾರ್ಡ್ ಅಹಿಂಸಾ ಶಿಲ್ಪವೊಂದನ್ನು ಚಿತ್ರದಲ್ಲಿರುವಂತೆ ನಿರ್ಮಾಣ ಮಾಡಿದರು. ಇದು ಈಗ ಸ್ವೀಡನ್‌ನ ಮಾಲ್ಮೋನಲ್ಲಿದೆ.

ಸಂಗ್ರಹ : ಮಹಾಂತೇಶ್ ಉಜ್ಜಿನಿಕೊಪ್ಪ

ವರ್ತಮಾನದ ತಲ್ಲಣಗಳಿಗೆ ಬಾಪುವಿನಲ್ಲಿ ಉತ್ತರ

– ಪ್ರಸನ್ನಕುಮಾರ್ ಕೆರಗೋಡು

ಮತ್ತೆ ಬಾಪುವಿನ ಜನ್ಮದಿನ ಬಂದಿದೆ. ಕಳೆದ 2018ರ ಅಕ್ಟೋಬರ್ ನಿಂದ ವರ್ಷವಿಡಿ ಅವರ ಮತ್ತು ಕಸ್ತೂರ ಬಾ ಜನ್ಮವರ್ಷಾಚರಣೆಯನ್ನು ಬಾ–ಪಾಪು–150 ಎಂಬ ಶೀರ್ಷಿಕೆಯಡಿಯಲ್ಲಿ ಕಾರ್ಯಕ್ರಮಗಳನ್ನು ಜಗತ್ತಿನಾದ್ಯಂತ ಆಚರಿಸಲಾಗಿದೆ. ಅವರ ನೆನಪಿನಲ್ಲಿ ಅವರ ಜೀವನ, ಸಾಧನೆ ಮತ್ತು ಅವರು ಪ್ರತಿಪಾದಿಸಿದ ತತ್ವಗಳನ್ನು ಸ್ಮರಿಸಲಾಗಿದೆ. ಅವುಗಳನ್ನು ಮಕ್ಕಳು, ಯುವಜನರು ಮತ್ತು ಬಾಪುವಿನ ಬಗ್ಗೆ ಸಧ್ಯ ಧನಾತ್ಮಕ ಧೋರಣೆ ಹೊಂದಿದ ಜೀವನಕ್ರಮ ಮತ್ತು ಸಂದೇಶಗಳಲ್ಲಿ ನಂಬಿಕೆ ಇರಿಸಿರುವ ಮಧ್ಯ ವಯಸ್ಕರು ಮತ್ತು ಹಿರಿಯರಿಗೆ ವಿವಿಧ ವಿಚಾರ ಸಂಕಿರಣಗಳು ಮತ್ತು ಸೆಮಿನಾರುಗಳ ಮೂಲಕ ತಲುಪಿಸಲಾಗಿದೆ. ವಿಶ್ವದಾದ್ಯಂತ ಮತ್ತು ದೇಶದಾದ್ಯಂತ ಗಾಂಧೀ ಪ್ರಣೀತ ಸಂಸ್ಥೆಗಳು ಅಂತಹ ಕೆಲಸವನ್ನು ಜವಾಬ್ದಾರಿಯುತವಾಗಿ ಮಾಡಿವೆ. ಮತ್ತು ಹೆಚ್ಚು ನಿರೀಕ್ಷೆ ಇಟ್ಟುಕೊಂಡಿದ್ದು ಕೋವಿಡ್–19 ಬಿಕ್ಕಟ್ಟಿನ ಜಟಿಲತೆಯಿಂದ ಮಾಡಲಾಗದಿದ್ದುದ್ದರ ಕುರಿತು ಅವು ವ್ಯಥೆ ಪಡುತ್ತಿರಬಹುದು.

ಇಲ್ಲಿ ಒಂದು ಪ್ರಶ್ನೆ ಉದ್ಭವಿಸುತ್ತದೆ. ಇಂದಿಗೂ ಬಾಪು ಸಲ್ಲುವರೆ? ಎಂದು. ಕಳೆದ ಶತಮಾನದ ಮೊದಲರ್ಧದಲ್ಲೆ ಅವರು ಭೌತಿಕವಾಗಿ ಇಲ್ಲವಾದವರು. ಆನಂತರದ ಎಪ್ಪತ್ತು ವರ್ಷಗಳ ತರುವಾಯವೂ, ಜಗತ್ತು ಯಾಂತ್ರಿಕ ಬದುಕಿನ ತಿರುಗಣೆಯನ್ನು ವೇಗವಾಗಿ ತಿರುಗಿಸುತ್ತಾ ವಿಚಿತ್ರ ಎನ್ನಿಸುವ ಮಗ್ಗುಲಿಗೆ ಜನರ ಬದುಕನ್ನು ಹೊರಳಿಸಿರುವಾಗಲೂ, ತನ್ನ ಮೂಲನೆಲೆ ಮತ್ತು ಸೆಲೆಗಳನ್ನು ಧ್ವಂಸ ಮಾಡಿ ಕಾಣದ ಅಸಹಜ ಮಾಯಾಸುಖದ ಬೆನ್ನೇರಿ ಹೋಗುತ್ತಿರುವಾಗಲೂ ಬಾಪು ನೆನಪಾದಾರೆಯೇ? ಅಪ್ರಾಮಾಣಿಕತೆ ಪ್ರಾಮಾಣಿಕತೆಯ ಸೋಗು ಹಾಕಿಕೊಂಡು ಮೆರೆಯುತ್ತಿರುವಾಗ, ಅಮಾನವೀಯತೆಯು ಮಾನವೀಯತೆಯ ಮುಖವಾಡ ಧರಿಸಿ ಅಟ್ಟಹಾಸಗೈಯುತ್ತಿರುವಾಗ, ಕ್ರೌರ್ಯವು ಕಾರುಣ್ಯದ ತೋರಿಕೆಯ ಕಂಬನಿಯ ಹನಿಗಳನ್ನು ಹನಿಸುತ್ತಿರುವಾಗ ಜಗತ್ತಿಗೆ ಶಾಂತಿ, ಪ್ರೀತಿ, ಅಹಿಂಸೆಯ ಸಿಂಚನ ಹರಿಸಿದ ಬಾಪು ನಿಜವಾಗಿಯೂ ನೆನಪಾಗುವರೇ? ಶಾಲೆಯ ಪರೀಕ್ಷೆಯಲ್ಲಿ ನಕಲು ಮಾಡಲಾರೆ ಎಂದು ಗಟ್ಟಿ ಧ್ವನಿಯಲ್ಲಿ ಹೇಳಿದ್ದ ಬಾಲಕ ಮೋಹನನ ನೈತಿಕ ಸ್ಥೈರ್ಯ ಇಂದಿನ ಮಕ್ಕಳಲ್ಲಿ ಕಾಣಬಹುದೇ? ತನ್ನ ತಪ್ಪುಗಳನ್ನು ಅಪ್ಪನ ಮುಂದೊಪ್ಪಿಸಿ ಇನ್ನು ಮರುಕಳಿಸಲಾರದು ಎಂದು ತನ್ನೊಳಗೆಯೆ ಆತ್ಮಸಾಕ್ಷಿಯ ಷರತ್ತು ವಿಧಿಸಿಕೊಂಡ ಬಾಲ್ಯದ ಕೆಚ್ಚು ಈಗ ಕಾಣಲಾದೀತೆ? ಹೊಟ್ಟೆಗೆ ಹಿಟ್ಟು ಹುಟ್ಟಿಸಿಕೊಳ್ಳಲು ದೇಶ ಬಿಟ್ಟು ಪರದೇಶದಲ್ಲಿ ತನ್ನ ದೇಶಿಗರ ಕಣ್ಣೀರು ಒರೆಸುತ್ತಾ ಸಂಘಟನೆ ಕಟ್ಟಿ ಬೀದಿಗಿಳಿದ ಕರಮಚಂದ್ ಚತುರ ತರುಣನ ಸಂಘಟನಾ ಚತುರತೆಯನ್ನು ಹುಡುಕುವುದೆಲ್ಲಿ? ವಸಾಹತುಶಾಹಿಯ ದುರಾಡಳಿತದಲ್ಲಿ ಅಕ್ಷರಶಃ ನಲುಗಿ ಹೋಗಿದ್ದ ದೇಶದ ವಿಮೋಚನೆಯನ್ನು ಶಾಂತಿಯಿಂದಲೆ ರಕ್ತರಹಿತ ಕ್ರಾಂತಿಯಾಗಿ ಸೇನಾನಿಯ ಸಹನೆ ಎಲ್ಲಾದರೂ ಸಿಕ್ಕೀತೆ? ತಾನು ದುಡಿದ ಹಣದಿಂದ ಧನಿಕನಾಗಿ ಐಹಿಕ ಸುಖದ ಪರಮೋಚ್ಚ ಪರಾಕಾಷ್ಠೆಯನ್ನು ತಲುಪಬಹುದಾಗಿದ್ದರೂ ಸರಳತೆಯ ಕನಿಷ್ಠತಮದ ಬದುಕಿನ ತ್ಯಾಗಕ್ಕೆ ಈಗೆಲ್ಲೆ ಜಾಗವಿದೆ? ತನ್ನೊಳಗೆ ಸಂಕಷ್ಟಗಳ ಮಹಾಪೂರವನ್ನೇ ತುಂಬಿಕೊಂಡೂ ಮುಗ್ಧ ನಗು ಚೆಲ್ಲುತ್ತಿದ್ದ ಅವರ ಮಗುವಿನ ಮನಸ್ಸು ಯಾರ ಬಳಿ ಹುಡುಕುವುದು?

ಆಧುನಿಕ ವಿಜ್ಞಾನ–ತಂತ್ರಜ್ಞಾನಗಳು, ಯಂತ್ರ ನಾಗರೀಕತೆ ಮತ್ತು ಅದರ ಮೂಲಕ ಮನುಷ್ಯನ ಜೀವನದಲ್ಲಿ ಎಲ್ಲವೂ ಇದೆ ಎಂಬ ಭ್ರಮೆ ಉಂಟುಮಾಡಿರುವ ಶೂನ್ಯವನ್ನು ಗುರುತಿಸಬೇಕಾದರೆ ಪ್ರಾಯಶಃ ಬಾಪು ಪ್ರತಿಪಾದಿಸಿದ ಸರಳತೆಯ ನೈಜ ಸುಖದ ಪರಿಕಲ್ಪನೆಯನ್ನು ಹುಡುಕಬೇಕಿದೆ. ಪ್ರಪಂಚದಾದ್ಯಂತ ಕಳೆದ ಹತ್ತಾರು ತಿಂಗಳುಗಳಿಂದ ಕೋವಿಡ್–19 ಉಂಟು ಮಾಡಿರುವ ಆರ್ಥಿಕ ಮತ್ತು ಜೈವಿಕ ಅನಿಶ್ಚಿತತೆಯು ಮತ್ತೆ ಮಹಾತ್ಮರೆಡೆಗೆ ದೃಷ್ಟಿ ಬೀರುವಂತೆ ಮಾಡಿದೆ. ಭಾರತವೂ ಒಳಗೊಂಡಂತೆ ಅನೇಕ ದೇಶಗಳ ಒಟ್ಟು ದೇಶೀಯ ಉತ್ಪನ್ನವು ಮೈನಸ್ ಹಂತದಲ್ಲಿ ದಾಖಲಾಗುತ್ತಿರುವಾಗ ಬಾಪು ಮತ್ತು ಜೆ.ಸಿ ಕುಮಾರಪ್ಪ ನೀಡಿದ ಶಾಶ್ವತ ಅರ್ಥಶಾಸ್ತ್ರದ ಪರಿಕಲ್ಪನೆಗೆ ಕಾಯಕಲ್ಪ ನೀಡಿ ಅನುಷ್ಠಾನಿಸಬೇಕಿದೆ. ಇಂತಹ ಕೆಲವುಗಳ ಮಾದರಿ ಮಾತ್ರವಲ್ಲದೆ ಅವರು ಪ್ರತಿಪಾದಿಸಿದ ಅನೇಕ ವಿಚಾರಗಳು ಇಂದು ಪ್ರಸ್ತುತವಾಗಿರುವುದರಿಂದ ಭವಿಷ್ಯದ ಭಾರತದ ಮಕ್ಕಳು ಮತ್ತು ಯುವಜನರಿಗೆ ತಲುಪಿಸಿ, ಅವುಗಳ ಪ್ರಾಮುಖ್ಯತೆಯನ್ನು ಮನದಟ್ಟು ಮಾಡುವ ಬಹುದೊಡ್ಡ ಹೊಣೆಗಾರಿಕೆ ಎಲ್ಲರ ಮೇಲಿದೆ. ಕಳೆದ ಹತ್ತಾರು ವರ್ಷಗಳಿಂದ ಗಾಂಧೀ–ಅಂಬೇಡ್ಕರ್ ಮುಂತಾದ ಭಾರತದ ಶ್ರೇಷ್ಠ ಚಿಂತಕರು ಮತ್ತು ದಾರ್ಶನಿಕರ ವಿಚಾರಗಳನ್ನು ಯುವಜನರ ಮುಂದೆ ತೆಗೆದುಕೊಂಡು ಹೋದಾಗೆಲ್ಲಾ ಅವುಗಳನ್ನು ಕೇಳಿ, ಅನುಮಾನಿಸಿ ಚರ್ಚೆಯ ಮೂಲಕ ಮನದಟ್ಟು ಮಾಡಿಕೊಂಡು ಸ್ವೀಕಾರ ಮಾಡಿದ ಯುವ ಮನಸ್ಸುಗಳು ನಮ್ಮ ನಡುವೆ ಇವೆ. ಇತಿಹಾಸದಲ್ಲಿನ ನೈಜತೆಯನ್ನು ಆಧುನಿಕ ಜಗತ್ತಿನ ರೀತಿ ನೀತಿಗಳಿಗೆ ಒಗ್ಗುವ ಹಾಗೆ ಕಟ್ಟಿಕೊಟ್ಟರೆ ಅನೇಕಗಳು ನಿರಾಕರಣೆಗೊಂಡರೂ ಕೆಲವಾದರೂ ಸ್ವೀಕೃತಿಗೊಳ್ಳುತ್ತವೆ. ಆ ಕೆಲವುಗಳಾದರೂ, ಮಹಾಬದಲಾವಣೆಯನ್ನು ತರುವಂತದ್ದಾಗಿವೆ ಎನ್ನುವ ಸತ್ಯದ ಅರಿವು ನಮಗಿದೆ. ವರ್ತಮಾನದಲ್ಲಿ ಸೃಷ್ಟಿಯಾಗುತ್ತಿರುವ ತಲ್ಲಣಗಳನೇಕಗಳಿಗೆ ಬಾಪುವಿನಲ್ಲಿ ಉತ್ತರಗಳಿವೆ. ಇದು ಬಹುತೇಕರಿಗೆ ತಿಳಿದಿದೆ ಕೂಡ. ಅವರ ಹಲವಾರು ವಿಚಾರಗಳು ಅವರು ಬದುಕಿನ ಮಾದರಿ, ಪ್ರತಿಪಾದಿಸಿದ ರೀತಿಗಳನ್ನು ಗ್ರಹಿಸಿ ಪ್ರಸ್ತುತ ಎನ್ನಿಸುವ ಅವೆಲ್ಲವುಗಳನ್ನು ಯುವ ಮನಸ್ಸುಗಳಿಗೆ ಮುಟ್ಟಿಸಿ ಅವರನ್ನು ಜಾಗೃತಗೊಳಿಸಬೇಕಿದೆ.

ಮುಂದುವರಿಯುವುದು...



ಮಹಾತ್ಮರ ಪ್ರೀತಿ

– ವೇಮಗಲ್ ಸೋಮಶೇಖರ್

ಮಹಾತ್ಮರ ಆಪ್ತ ಕಾರ್ಯದರ್ಶಿಯಾಗಿದ್ದ ಮಹದೇವ ದೇಸಾಯಿ ಅವರು ಮಹಾತ್ಮರ ಜೊತೆ ಉತ್ತರಭಾರತದಲ್ಲಿ ಸಂಚರಿಸುತ್ತಿದ್ದರು. ಒಂದು ದಿನ ರೈಲಿನಲ್ಲಿಯೇ ಬರೆಯುವ ಕಾರ್ಯದ ಒತ್ತಡ ಉಂಟಾಯಿತು. ಸಂಜೆ ಬರೆಯಲು ಪ್ರಾರಂಭಿಸಿ ಬೆಳಗಿನ ಜಾವದವರೆಗೂ ಬರೆದು ನಸುಕಿನಲ್ಲಿ ಮಲಗಿದ್ದರಿಂದ, ನಿತ್ಯ ಏಳಬೇಕಾದ ಸಮಯಕ್ಕೆ ಎಚ್ಚರವಾಗಲಿಲ್ಲ. ಮಹದೇವ ದೇಸಾಯಿ ಹೊತ್ತಾಗಿ ಎದ್ದು ಕಣ್ಣುಜ್ಜಿ ಕೊಳ್ಳುತ್ತಾ ಎದುರಿಗೆ ನೋಡಿದರೆ ಅವರು ಮುಂದೆ ಮುಂಜಾವಿನ ಚಹಾದ ಸನ್ನಾಹಗಳೆಲ್ಲಾ ಸಿದ್ಧವಾಗಿದ್ದವು. ಬಾಪು ಎದ್ದು ಹೋಗಿ ರೈಲಿನ ವಿಶ್ರಾಂತಿ ಭವನದಿಂದ ಚಹಾ, ಹಾಲು, ಸಕ್ಕರೆ, ಬ್ರೆಡ್ಡು, ಬೆಣ್ಣೆಯನ್ನು ಮಹಾದೇವ ದೇಸಾಯಿಗಾಗಿ ಅವರಿದ್ದೆಡೆ ತರಲು ಹೇಳಿ ಬಂದಿದ್ದರು. ಬಾಪೂಜಿಗೆ ತಾವು ಚಹಾ ಕುಡಿಯದಿದ್ದರೂ, ಮಹದೇವ ದೇಸಾಯಿಗೆ ಅದಿಲ್ಲದೆ ನಡೆಯಲಾರದೆಂಬುದು ಗೊತ್ತಿತ್ತು. ಅಂತಲೇ ಎಲ್ಲಾ ಸಾಮಾನುಗಳನ್ನೂ ತರಿಸಿಟ್ಟು ಮಹದೇವ ದೇಸಾಯಿ ಏಳುವುದನ್ನು ನೋಡುತ್ತಾ ಕುಳಿತಿದ್ದರು. ಆತ ಎದ್ದೊಡನೆ ಬಾಪುವಿನ ಕಾರ್ಯವನ್ನು ನೋಡಿ ತನ್ನ ದುರ್ಬಲತೆಯನ್ನು ನೆನೆದು ನಾಚಿಕೆ ಪಟ್ಟುಕೊಂಡರು. ಬಾಪು ಮೆಲ್ಲನೆ ಮಹಾದೇವ ದೇಸಾಯಿ ಜೊತೆ ಮಾತನಾಡಿ ಚಹಾ ಕುಡಿಸಿದರು. ಬಾಪು ಹೇಳಿ ತರಿಸಿದ್ದ ಚಹಾ ಬಹಳ ರುಚಿಯಾಗಿತ್ತು. ಅದಕ್ಕಿಂತಲೂ ರುಚಿಯಾದ ಅವರ ಮಾತುಗಳನ್ನು ಕೇಳಿ ಮಹದೇವದೇಸಾಯಿಗೆ ರಾತ್ರಿಯ ಶ್ರಮವೆಲ್ಲ ಕ್ಷಣದಲ್ಲಿ ಮಾಯವಾಗಿತ್ತು. ಸ್ನೇಹವೆಂದರೆ ಗಾಂಧೀಜಿ ಅವರಿಗೆ ಅಷ್ಟು ಪ್ರೀತಿ. ತಮ್ಮ ಯೋಗಕ್ಷೇಮಕ್ಕಿಂತಲೂ ತಮ್ಮ ನೆರೆಯವರು ಮತ್ತು ಸ್ನೇಹಿತರ ಯೋಗಕ್ಷೇಮದಲ್ಲಿ ಅವರಿಗೆ ಅಪಾರ ಕಾಳಜಿ.

ಒಮ್ಮೆ ಆಶ್ರಮಕ್ಕೆ ಯಾರೋ ಬಾಪುವಿಗಾಗಿ ಅನೇಕ ಹಣ್ಣುಗಳನ್ನು ತಂದಿದ್ದರು. ಅವುಗಳಲ್ಲಿ ಕೆಲವು ಹಣ್ಣುಗಳನ್ನೆತ್ತಿ ಕಾಕಾ ಕಾಲೇಲ್ಕರ್ ಅವರಿಗೆ ಕೊಟ್ಟು "ಕಾಕ, ಈ ಹಣ್ಣುಗಳನ್ನು ಮಹದೇವನಿಗೆ ಕೊಡು, ಆತನಿಗೆ ಹಣ್ಣುಗಳೆಂದರೆ ಪ್ರಾಣ" ಎಂದರು. ಆಶ್ರಮದಲ್ಲಿ ಮಹದೇವನ ಮನೆ ಕಾಕಾರ ಮನೆಯ ಬದಿಯಲ್ಲಿದೆ. ಕಾಕಾ ಆತನ ಮನೆಗೆ ಹೋಗಿ "ಮಹಾದೇವ, ನಿನಗಾಗಿ ಪ್ರೀತಿಯ ಸಂದೇಶ ತಂದಿದ್ದೇನೆ' ಎಂದರು. ಮಹದೇವ ಮನೆಯ ಎದುರು ನಿಂತು ಹಣ್ಣುಗಳ ಮೇಲೆ ಕಣ್ಣರಳಿಸಿ ಪ್ರೀತಿಯಿಂದ "ನಿಜಕ್ಕೂ ಇದು ಪ್ರೀತಿಯ ಸಂದೇಶ" ಎನ್ನುತ್ತಾ ತೆಗೆದುಕೊಂಡರು. ಕಾಕಾ ಕಾಲೇಲ್ಕರ್ ಅವರು ಕ್ಷಯದಿಂದ ಬಳಲಿ ಬೆಂಡಾಗಿದ್ದಾರೆ. ವೈದ್ಯರು ಚಿಕಿತ್ಸೆ ಮಾಡಿ ವಿಶ್ರಾಂತಿ ಪಡೆಯಲು ಹೇಳಿದ್ದರು. ಕಾಕಾನಿಗೆ ವ್ಯಾಧಿ ಸ್ವಲ್ಪ ಕಡಿಮೆ ಎನಿಸಿದೊಡನೆಯೇ ತಮ್ಮ ನಿವಾಸದಿಂದ ಮರಳಿ ಆಶ್ರಮಕ್ಕೆ ಹೋದರು. ಕಾಕಾ ಆಶ್ರಮವನ್ನು ತಲುಪಿದೊಡನೆ ಚಿಕ್ಕ ಬಾಲಕಿಯೊಬ್ಬಳು ತಟ್ಟೆಯ ತುಂಬ ವಿವಿಧ ವರ್ಣದ ಪುಷ್ಪಗಳನ್ನು ತೆಗೆದುಕೊಂಡು "ಇದು ಬಾಪು ನಿಮಗಾಗಿ ಕಳಿಸಿದ್ದಾರೆ" ಎಂದು ಹೇಳಿ ಕಾಕಾನಿಗೆ ಕೊಟ್ಟಳು. ಮುಂದುವರಿದು ಆ ಚಿಕ್ಕ ಬಾಲಕಿ "ಕಾಕಾ, ನೀವು ಹೂವುಗಳನ್ನು ಬಹಳ ಪ್ರೀತಿಸುವುದರಿಂದ ಬಾಪು ಪ್ರತಿನಿತ್ಯವೂ ತೆಗೆದುಕೊಂಡು ಹೋಗಲು ನನಗೆ ತಿಳಿಸಿದ್ದಾರೆ" ಎಂದಳು. ಬಾಪುಗೆ ಕ್ಷಣಾವಕಾಶವಿದ್ದರೂ ಸ್ನೇಹಿತರೆಂದರೆ ಏನನ್ನು ಮಾಡಲು ಸಿದ್ಧರಾಗುತ್ತಿದ್ದರು. ಬಾಪುವಿಗೆ ಆಶ್ರಮದಲ್ಲಿದ್ದ ತಮ್ಮ ಸ್ನೇಹಿತರ ನಾಡಿ ಮಿಡಿತಗಳೆಲ್ಲ ಗೊತ್ತಿತ್ತು. ಬೇರೊಬ್ಬರ ಸುಖ ದುಃಖಗಳನ್ನು ಕಂಡು ಅವರ ಒಲುಮೆಯಂತೆ ನಡೆಯುವಲ್ಲಿ ಬಾಪೂಜಿಗೆ ಯಾವಾಗಲೂ ಆನಂದ.

ಮಹಾತ್ಮ ಗಾಂಧಿ 150 : ನಾನೇನು ಕಲಿಯಬಹುದು – ಅನುಭವ ಕಥನ

ಎಸ್.ಎನ್. ಸುಬ್ಬರಾವ್

ಮೊದಲ ಬಾರಿ ನಾನು 1942ರಲ್ಲಿ. ಅಕ್ಟೋಬರ್ 2 ರಂದು ಗಾಂಧಿ ಜಯಂತಿ ಆಚರಿಸಿದೆ. ಆ ವರ್ಷದ 9ನೇ ಆಗಸ್ಟ್‌ರಂದು ನನ್ನನ್ನು ಮಲ್ಲೇಶ್ವರಂ ಪೋಲೀಸ್ ಸ್ಟೇಷನ್ ಲಾಕಪ್‌ನಲ್ಲಿ ಕೆಲವು ಗಂಟೆ ಬಂದಿಯಾಗಿಟ್ಟಿದ್ದರು. ಕಾರಣ ನಾನು ಧರಿಸಿದ್ದ ಖಾದಿ ಬಟ್ಟೆ. ನನ್ನ ಶಾಲೆಯ ಹುಡುಗರೊಂದಿಗೆ "ಭಾರತ ಬಿಟ್ಟು ತೊಲಗಿ", "ಭಾರತ್ ಮಾತಾ ಕೀ ಜೈ" ಘೋಷಣೆಗಳೊಂದಿಗೆ ಮೆರವಣಿಗೆಗೆ ಪೋಲೀಸರ ಮೂಲಕ ಗಾಂಧೀಜಿಗೆ ಹೆಚ್ಚು ಸಮೀಪ ಹೋದೆ! 1969ರ ಅಕ್ಟೋಬರ್ 2ರಂದು ನಮ್ಮ ಗಾಂಧಿ ಪ್ರದರ್ಶನ ರೈಲನ್ನು ತೆಗೆದುಕೊಂಡು ಜಮ್ಮು ಕಾಶ್ಮೀರ ಸ್ಟೇಷನ್‌ನಿಂದ ಹೊರಟು ದೇಶದ ಎಲ್ಲಾ ಮುಖ್ಯ ಊರುಗಳಲ್ಲಿ ಪ್ರಾರ್ಥನೆ ನಡೆಸಿದ್ದೆ. ಮೀಟರ್ ಗೇಜಿನಲ್ಲಿ ಇನ್ನೊಂದು ಗಾಂಧಿ ಪ್ರದರ್ಶನ ರೈಲು ರಾಮೇಶ್ವರಂ ಸ್ಟೇಷನ್‌ನಿಂದ ಹೊರಟು ಆಗಿನ ಸರ್ಕಾರದ ಯೋಜನೆಗಳನ್ನು ಅರ್ಥ ಮಾಡಿಸುತ್ತಿತ್ತು. ಶತಮಾನಗಳಲ್ಲಿ ಮಹಾತ್ಮ ಗಾಂಧಿಯ ಕೃತಿ ಮತ್ತು ನೀತಿಗಳ ಬಗ್ಗೆ ನೂರಾರು ಪುಸ್ತಕಗಳು ಬರೆಯಲ್ಪಟ್ಟಿವೆ. ಇವತ್ತೂ ಲೇಖಕರು ಬರೆಯುತ್ತಲೇ ಇದ್ದಾರೆ. ಈ ಲೇಖನದಲ್ಲಿ ಗಾಂಧಿ ಅನುಭವಗಳಿಂದ ನಾನೇನು ಕಲಿಯಬಹುದು? ಎಂಬ ವಿಚಾರ ಮತ್ತು ಒಂದೆರೆಡು ವಿಷಯಗಳನ್ನು ಬರೆಯುವ ಪ್ರಯತ್ನ ಮಾಡುತ್ತೇನೆ.

ನೇತೃತ್ವದ ಹಾದಿ

ಸುಮಾರು 1960ನೇ ಇಸವಿಯಲ್ಲಿ ಶ್ರೀ ಚೆಸ್ಮಲ್ ಬಾಪ್ಸೆ ಭಾರತದಲ್ಲಿ ಅಮೇರಿಕಾದ ರಾಯಬಾರಿ. ಆ ದಿನಗಳಲ್ಲಿ ನಮ್ಮ ದೇಶದ ಪ್ರಧಾನ ಮಂತ್ರಿ ಅಥವ ರಾಯಭಾರಿಗಳನ್ನು ಕಾಣುವುದು ಸುಲಭ ಸಾಧ್ಯ. ಚಸ್ಮೆಲ್ ಬಾಪ್ಸೆರನ್ನು ಸಮಯ ಕೇಳಿ ಅವರನ್ನು ಭೇಟಿ ಮಾಡಿದಾಗ, ನಾನು 30ವರ್ಷದವನಾಗಿದ್ದೆ. ಅವರು ಹಿರಿಯರು. ಆದರೂ ಆದರ ಮತ್ತು ಪ್ರೀತಿಯಿಂದ ಬರಮಾಡಿಕೊಂಡರು. ನಾನೆಂದೆ "ನಿಮ್ಮ ಒಂದು ಪುಸ್ತಕದಲ್ಲಿರುವ ಒಂದು ವಾಕ್ಯಕ್ಕಾಗಿ ನಿಮ್ಮನ್ನು ಅಬಿನಂಧಿಸಲು ಬಂದಿರುವೆ." ಆತನಿಗೆ ಕುತೂಹಲ ಕೆರಳಿತು. ನೀವು ನನ್ನ ಪುಸ್ತಕ ಓದಿರುವಿರಾ? ಅಥವಾ ವಾಕ್ಯ ಮಾತ್ರವೇ? ಎಂದರು. ನಾನು, ನೀವು ಬರೆದಿರುವ "ಭಾರತದಲ್ಲಿ ನೇತೃತ್ವದ ಹಾದಿ, ಗುಡಿಸಲಿನಿಂದ ರಾಷ್ಟ್ರಪತಿ ಭವನ ಅಲ್ಲ, ಆದರೆ ಭವನದಿಂದ ಮಣ್ಣಿನ ಗುಡಿಸಲು" ಈ ವಾಕ್ಯ ನನ್ನ ಮೇಲೆ ಸಿಡಿಲಿನ ಪ್ರಭಾವ ಬೀರಿತು.

ಚೆಸ್ಮಲ್ ಬಾಪ್ಸೆ : ಧನ್ಯವಾದಗಳು, ನಾನು ದಿಲ್ಲಿಗೆ ಬಂದು ಭಾರತದ ರಾಷ್ಟ್ರಪತಿಗಳಿಗೆ ಪರಿಚಯ ಪತ್ರ (Credintial) ಕೊಡಲು, ಮೊದಲು ರಾಜ್‌ಘಾಟ್‌ಗೆ ಹೋದೆ. ಅಲ್ಲಿ ಗಾಂಧಿ ಸಮಾಧಿ ಎದುರು ನಿಂತಾಗ ಈ ವಾಕ್ಯ ನನ್ನ ತಲೆಯಲ್ಲಿ ಮೂಡಿತು. ನಮ್ಮ ದೇಶಕ್ಕೆ (ಅಮೇರಿಕಾಕ್ಕೆ) ಹೊರದೇಶದ ಜನ ಬಂದು ರಾಷ್ಟ್ರಪತಿ ಅಬ್ರಹಾಂ ಲಿಂಕನ್ ಅವರ ಮೂರ್ತಿ ನೋಡಿ ಧನ್ಯರಾಗುತ್ತಾರೆ. ಲಿಂಕನ್ನರ ಕಥೆ ಏನು? ಬಹಳ ಬಡ ತಾಯಿ ತಂದೆಯರ ಪುತ್ರ, ತನ್ನ ಪ್ರಯತ್ನಗಳಿಂದ ಅಮೇರಿಕಾದ ರಾಷ್ಟ್ರಪತಿಯಾಗಿ, ರಾಷ್ಟ್ರಪತಿ ಭವನ ಸೇರಿದರು. ಆದರೆ ಎಷ್ಟು ವಿಚಿತ್ರ ನಿಮ್ಮ ಭಾರತ! ನಾನು ಅಮೇರಿಕದಿಂದ ಬಂದು ಮೊದಲ ಕೆಲಸವಾಗಿ ಗಾಂಧಿ ಸಮಾಧಿಗೆ ಬಂದಿರುವೆ. ಗಾಂಧೀಜಿ ಅವರ ಜೀವ ಸಂದೇಶ ಏನು? ಅವರ ತಂದೆಯ ದಿವಾನರ ಭವನದಲ್ಲಿ ಹುಟ್ಟಿ ತಮ್ಮದೇ ಇಚ್ಛೆಯಂತೆ ಸೇವಾಗ್ರಾಮದ ಗುಡಿಸಿಲಲ್ಲಿ ವಾಸ ಮಾಡತೊಡಗಿದರು. ಎಂಥಾ ಆದರ್ಶ ಭಾರತದ್ದು!

ಗಾಂಧಿ – ಗಾಂಧಿ

1984ರಲ್ಲಿ ನಾನು ಮೊದಲ ಬಾರಿ ಅಮೇರಿಕಾಗೆ ಹೋದೆ. 1985ರಿಂದ ಆ ದೇಶದಲ್ಲಿ ನಮ್ಮ ಗಾಂಧಿ ಯುವ ಶಿಬಿರಗಳು ಪ್ರಾರಂಭವಾದವು. 2019ರ ವರೆಗೆ 37 ಗಾಂಧಿ ಯುವ ಶಿಬಿರಗಳು ನಡೆದವು. ನಾನು ಒಂದೊಂದು ವರ್ಷ ಒಂದೊಂದು ಊರಿನ ಮೂಲಕ ಅಮೇರಿಕ ಪ್ರವೇಶಿಸುತ್ತಿದ್ದೆ. 1984ರಲ್ಲಿ ಮೊದಲ ಬಾರಿ ನ್ಯೂಯಾರ್ಕ್ ನಗರದಲ್ಲಿ ಆಶ್ಚರ್ಯ ಕಾದಿತ್ತು. ವಿಮಾನ ನಿಲ್ದಾಣದಿಂದ ಹೊರಬರುತ್ತಿದ್ದಂತೆಯೇ ಎಂತಹ ಸ್ವಾಗತ. ದೊಡ್ಡ ಬೋರ್ಡ್ ಹಾಕಿ ಅದರಲ್ಲಿ ಸುಮಾರು ನೂರು ಭಾಷೆಗಳಲ್ಲಿ "ನಿಮಗೆ ಸ್ವಾಗತ" ಎಂದು ಬರೆದಿದೆ! ಒಟ್ಟಾಗೊ, ಡೆಟ್ರಾಯಿಟ್, ಹೊನಲುಲು, ಟೊರಾಂಟೋ, ಮುಂತಾದ ಭಾಷೆಗಳಲ್ಲಿವೆ. ಎಲ್ಲಾ ಪ್ರಕ್ರಿಯೆಗಳು ಮುಗಿದು ನನ್ನ ವಸ್ತುಗಳನ್ನು ಪಡೆಯಲು ಕಾನ್ಸುಲೇಟ್ ಮುಂದೆ ನಿಂತು ಕಾಯುತ್ತಿದ್ದಾಗ, ನನ್ನ ದೃಷ್ಟಿ ಪಕ್ಕಕ್ಕೆ ಹೋಯಿತು. . ಅಮೇರಿಕಾದ ನ್ಯೂಯಾರ್ಕಿನ ಕೆನಡಿ ಏರ್‌ಪೋರ್ಟ್‌ನಲ್ಲಿ ಒಂದು ವಿಶಲವಾದ ಪರದೆ, ಅದರ ಒಂದು ಕಡೆ ಗಾಂಧೀಜಿ ಅವರ ದೊಡ್ಡ ರೇಖಾಚಿತ್ರ, ಪಕ್ಕದಲ್ಲಿ ದೊಡ್ಡ ಅಕ್ಷರಗಳಲ್ಲಿ ಬರೆದಿದೆ. (Why made Gandhi Gandhi -) ಗಾಂಧಿಯನ್ನು ಏನು ಗಾಂಧಿ ಮಾಡಿತು? ಅಲ್ಲೇ ಪಕ್ಕದಲ್ಲಿ ಅಬ್ರಾಹಂ ಲಿಂಕನ್ ಚಿತ್ರದೊಂದಿಗೆ ಮತ್ತೊಂದು ದೊಡ್ಡ ಪರದೆ. ಜೊತೆಗೆ ಬರೆದಿದ್ದಾರೆ. Failure-Failure-Failure : Perseverance!, ಅಸಫಲತೆ-ಅಸಫಲತೆ-ಅಸಫಲತೆ : ದೃಢನಿರ್ಧಾರ! ಎಂದು ಗಾಂಧಿ ಹೇಗೆ ವಿಶ್ವ ವಿಖ್ಯಾತ ಗಾಂಧಿ ಆದ? ಎಂದು ಅಮೇರಿಕನ್ನರು ವಿಶ್ಲೇಷಣೆ ಮಾಡುತ್ತಿದ್ದಾರೆ! ಪ್ರೇರಣೆ ಪಡೆಯುತ್ತಿದ್ದಾರೆ.

ಮುಂದುವರಿಯುವುದು...

ಗಾಂಧಿ ಭವನದ ನವೆಂಬರ್ ತಿಂಗಳಿನ ಕಾರ್ಯಕ್ರಮಗಳು

1. ಕನ್ನಡ ರಾಜ್ಯೋತ್ಸವ ಸರಳ ಆಚರಣೆ ದಿ.12.11.2020
2. ಸಾಮಾನ್ಯ ಸಭೆ ದಿ. 16.11.2020
3. ಎಚ್.ಎಸ್. ದೊರೆಸ್ವಾಮಿ ಅವರ ಸಾಕ್ಷ್ಯಚಿತ್ರ ಪ್ರದರ್ಶನ ದಿ. 22.11.2020
4. ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಬಳ್ಳಾಪುರ, ತುಮಕೂರು, ಯುವಜನರಿಗೆ (ದತ್ತಿ ಕಾರ್ಯಕ್ರಮ) ಪ್ರಬಂಧ ಸ್ಪರ್ಧೆ, (ಆನ್‌ಲೈನ್ ಮುಖಾಂತರ) ದಿ. 27–30 ನವೆಂಬರ್ 2020



ಗಾಂಧೀಜಿ ಅವರ 'ಹಿಂದ್ ಸ್ವರಾಜ್'ನ ಶತಮಾನೋತ್ತರ ಪ್ರಸ್ತುತತೆ

ಡಾ.ಎಸ್.ಬಿ.. ಬಸೆಟ್ಟಿ

"ಈ ಭೂಮಿ ಪ್ರತಿಯೊಬ್ಬ ಮಾನವನ ಅಗತ್ಯಗಳನ್ನು ಪೂರೈಸುವಷ್ಟು ಸಂಪನ್ಮೂಲಗಳನ್ನು ಒದಗಿಸುತ್ತದೆ. ಆದರೆ ಆತನ ಆಸೆಗಳನ್ನು ಪೂರೈಸುವಷ್ಟಲ್ಲ"

- ಎಂ.ಕೆ. ಗಾಂಧೀ

ಗಾಂಧೀಜಿ ಅವರ 'ಹಿಂದ್ ಸ್ವರಾಜ್'ಗೆ ನೂರಾ ಹನ್ನೊಂದು ವರ್ಷಗಳಾದರೂ ಅದರ ಪ್ರಸ್ತುತತೆ ಕುರಿತಂತೆ ಜಿಜ್ಞಾಸೆ ಇದೆ. 1908 ರಲ್ಲಿ ಬರೆದ "ಹಿಂದ್ ಸ್ವರಾಜ್" ಮೇಲ್ನೋಟಕ್ಕೆ ಸಣ್ಣ ಪುಸ್ತಕ. ಹಿಂದ್ ಸ್ವರಾಜ್ ಕೃತಿಯನ್ನು ಅಂದಿನ ಸಂದರ್ಭಕ್ಕನುಗುಣವಾಗಿ ವಿಶ್ಲೇಷಿಸಬೇಕೆ ಅಥವಾ ಇಂದಿನ ಸಂದರ್ಭದಲ್ಲೂ ಅದು ಸುಸಂಗತವೇ ಎಂಬ ಕುರಿತು ಜಿಜ್ಞಾಸೆ ಇದೆ. ಗಾಂಧೀಜಿ ಪುಸ್ತಕ ರಚನೆ ಮಾಡಿದ ಸಂದರ್ಭ ಹಾಗೂ ಇಂದಿನ ಸಂದರ್ಭಗಳು ಬೇರೆ ಬೇರೆಯಾದರೂ ವಾಸ್ತವವಾಗಿ ವಸ್ತುಸ್ಥಿತಿಯಲ್ಲಿರುವ ಸಾಮ್ಯತೆಯನ್ನು ಅಲ್ಲಗಳೆಯಲಾಗದು. ಕಳೆದ ಹಲವಾರು ರಾಜಕೀಯ ಸಂದರ್ಭಗಳಲ್ಲಿ, ವಿಶ್ಲೇಷಣೆಗಳಲ್ಲಿ, ಸಾಮಾಜಿಕ ಚಳುವಳಿಗಳಲ್ಲಿ, ಜಾಗತೀಕರಣ ವಿರೋಧಿ ಚಳುವಳಿಗಳಲ್ಲಿ ಗಾಂಧೀಜಿ ಅವರ ಈ ಕೃತಿಯ ಉಲ್ಲೇಖ ಬರುತ್ತಿರುವುದನ್ನು ನಾವು ಗಮನಿಸಬೇಕು. ಇಲ್ಲಿ ಗಾಂಧೀ ಒಬ್ಬ ದಾರ್ಶನಿಕರಾಗಿ ಹೊರಹೊಮ್ಮುತ್ತಿರುವುದೂ ಅಷ್ಟೇ ಸತ್ಯ.

ಗಾಂಧೀ ಬರೆಯಲೇಬೇಕೆಂದು ಬರೆದ ಪುಸ್ತಕಗಳ ಸಂಖ್ಯೆ ಬಹಳ ಕಡಿಮೆ. ಗಾಂಧೀ ಬರೆದ ಮೂರು ಪುಸ್ತಕಗಳಲ್ಲಿ ಅತೀ ಹೆಚ್ಚು ಗಮನ ಸೆಳೆಯುವುದು 'ಹಿಂದ್ ಸ್ವರಾಜ್'. ಇನ್ನಿತರ ಪುಸ್ತಕಗಳೆಂದರೆ : ಅವರ ಆತ್ಮಕಥೆ 'ನನ್ನ ಸತ್ಯಾನ್ವೇಷಣೆ' ಹಾಗೂ 'ದಕ್ಷಿಣ ಆಫ್ರಿಕೆಯಲ್ಲಿ ಸತ್ಯಾಗ್ರಹ'. ಹಿಂದ್ ಸ್ವರಾಜ್ ಗಾಂಧಿಯವರ ಮಹತ್ವದ ಕೃತಿ ಹೌದೋ ಅಲ್ಲವೋ ಎಂಬುದರ ಕುರಿತೂ ಸಾಕಷ್ಟು ಜಿಜ್ಞಾಸೆ ಇದೆ. ಕೆಲ ಪಾಶ್ಚಾತ್ಯ ಚಿಂತಕರ ಪ್ರಕಾರ ಅದೊಂದು ಮಹತ್ವದ ಕೃತಿಯಲ್ಲ. ಈ ರೀತಿಯ ಆಪಾದನೆ ಮಾಡಿದವರಲ್ಲಿ ಭಾರತೀಯ ಚಿಂತಕರು ಇಲ್ಲವೆಂದಿಲ್ಲ. ಖ್ಯಾತ ಇತಿಹಾಸ ತಜ್ಞ ರಾಮಚಂದ್ರ ಗುಹ ಇದರಿಂದ ಹೊರತಾಗಿಲ್ಲ. ಗ್ರಂಥವನ್ನು ರಚಿಸಲೇಬೇಕೆಂಬ ಉದ್ದೇಶದಿಂದ ಮಹಾತ್ಮ ಗಾಂಧೀಜಿಯವರು ಪೂರ್ಣ ತೊಡಗಿಸಿಕೊಂಡು ಬರೆದ ಒಂದೇ ಒಂದು ಗ್ರಂಥವೆಂದರೆ 'ಹಿಂದ್ ಸ್ವರಾಜ್'. ಇದು ಅವರು ಬರೆದ ಅತ್ಯಂತ ಚರ್ಚೆಗೊಳಗಾದ ಗ್ರಂಥ. ಲಂಡನ್ನಿನಿಂದ ಆಫ್ರಿಕಾಗೆ ಹಿಂದಿರುಗಿ ಬರುವಾಗ ಹಡಗಿನಲ್ಲಿ ಪ್ರಯಾಣಿಸುವ ಸಂದರ್ಭದಲ್ಲಿ ಹಗಲು ರಾತ್ರಿ ಕುಳಿತು ಇದನ್ನು ಬರೆದು ಮುಗಿಸಿದರು (13 ರಿಂದ 22ರ ನವೆಂಬರ್ 1908). ಆದ ಕಾರಣ "ಹಿಂದ್ ಸ್ವರಾಜ್" ಅನ್ನು "ಸಮುದ್ರದ ಮೇಲಿನ ಸುವಾರ್ತೆ" ಎಂದು ಕರೆಯುವ ವಾಡಿಕೆಯು ಇದೆ.

ಮುಂದುವರಿಯುವುದು....

ಚರಿತ್ರೆಯಲ್ಲಿ ಮರೆಯಾದ ಮಹಾತ್ಮರ ಅಕ್ಷರ ಮಾಧ್ಯಮ ಕಾಯಕ

ಯ. ರು. ಪಾಟೀಲ

ಆತ್ಮವೊಂದು ಮಹಾತ್ಮನೆಂಬ ಬಿರುದನ್ನು ಪಡೆಯಬೇಕೆಂದರೆ ಅದೇನೂ ಸರಳ ವಿಷಯವಲ್ಲ. ಗಾಂಧೀಜಿಯವರನ್ನು ಎಂ.ಕೆ. ಗಾಂಧಿ ಎಂದೋ, ಮೋಹನದಾಸ ಗಾಂಧಿ ಎಂದೋ ಕರೆಯಬಹುದಾಗಿತ್ತು. ಆದರೆ ಮಹಾತ್ಮಾ ಎನ್ನುವ ಬಿರುದು ಬರಬೇಕಾದರೆ ಅದೇ ಗಾಂಧೀಜಿ ಅವರ ತಾಕತ್ತು. ಅದೇ ಅವರ ಮೇರು ವ್ಯಕ್ತಿತ್ವ. ಗಾಂಧೀಜಿ ಅವರು ದೇಶದ ಸ್ವಾತಂತ್ರ್ಯದ ಸಲುವಾಗಿ ತಮ್ಮ ಜೀವವನ್ನೆ ಮುಡಿಪಾಗಿಟ್ಟು ಅದರಲ್ಲಿ ಸಫಲತೆ ಸಾಧಿಸಿದರು ನಿಜ. ಆದರೆ ಇಷ್ಟೇ ಕೆಲಸ ಮಾಡಿದ್ದರೆ, ಅವರು ಕೇವಲ 'ಸ್ವಾತಂತ್ರ್ಯಯೋಧ' ಪಟ್ಟಕ್ಕೆ ಮಾತ್ರ ಸೀಮಿತರಾಗುತ್ತಿದ್ದರು. ಅವರದು ಬಹುಮುಖ ವ್ಯಕ್ತಿತ್ವ ಶಕಪುರುಷ, ಸಂತ, ಫಕೀರ, ತತ್ತ್ವಜ್ಞಾನಿ, ದಾರ್ಶನಿಕ, ಮುತ್ಸದ್ಧಿ, ಜನನಾಯಕ, ರಾಜಕಾರಣ ಮಹರ್ಷಿ, ಜೀವನ ಚರಿತ್ರಕಾರ, ಮೌಲ್ಯ-ಸಿದ್ಧಾಂತಗಳ ಪ್ರತಿಪಾದಕ, ಶ್ರೇಷ್ಠ ಬರಹಗಾರ, ಸಮಾಜ ಸುಧಾರಕ, ಮುಖ್ಯವಾಗಿ ಯಾರು ಏನೇ ಹೇಳಲಿ ನಮ್ಮ ಸಮಾಜದಲ್ಲಿ ಮಹಿಳೆಯರು ಮತ್ತು ದಲಿತರ ಪರಿಸ್ಥಿತಿ ಮಾತ್ರ ಸುಧಾರಿಸಿಲ್ಲ ಎನ್ನುವ ಹಿನ್ನೆಲೆಯಲ್ಲಿ ಸಮಾಜದ ಕಟ್ಟ ಕಡೆಯ ಧ್ವನಿ ಇಲ್ಲದವರ ಧ್ವನಿಯಾದವರು. ಹೀಗೆ ಇನ್ನೂ ಏನೇನೋ ಹೇಳುವ ಭರಾಟೆಯಲ್ಲಿ ಗಾಂಧೀಜಿಯವರು 'ಶ್ರೇಷ್ಠ ಪತ್ರಕರ್ತರಾಗಿದ್ದರು' ಎನ್ನುವ ಅಂಶವೇ ಒಮ್ಮೊಮ್ಮೆ ಮರೆಯಾದರೆ, ಇನ್ನೊಮ್ಮೆ ಪ್ರಚಾರಕ್ಕೇ ಬರಲಿಲ್ಲವೇನೋ ಎನ್ನುವ ಆತಂಕ ನಿವಾರಣೆಯ ಹಿನ್ನೆಲೆಯಲ್ಲಿ ಈ ಲೇಖನ ಸುರುಳಿ ಬಿಚ್ಚಿಕೊಂಡಿದೆ. ಉತ್ತಮ ಬರಹಗಾರರು, ಗ್ರಂಥ ರಚನೆಯಲ್ಲಿ ಮೇಲ್ಪಂಕ್ತಿಯುಳ್ಳವರು, ಬದುಕಿನ ವಿವಿಧ ಮಗ್ಗುಲುಗಳನ್ನು ಪರಿಚಯಿಸುವ ಮಹಾನುಭಾವರು, ಸಾವಿರಾರು ವೈವಿಧ್ಯಮಯ ಲೇಖನಗಳನ್ನು ಬರೆದವರು. ಇವೆಲ್ಲವುಗಳ ಫಲಶ್ರುತಿಯ ಗಟ್ಟಿ ಬರಹದ ಹಿನ್ನೆಲೆಯಲ್ಲಿ, ಈ ಬರಹಗಳ ಅನುಭವದ ಧಾರೆ ಎರೆದ ರೂಪವೇ ಮಹಾಪತ್ರಕರ್ತರಾದರು ಎನ್ನುವುದು ಮಹತ್ವದ ಸಂಗತಿಯಾಗಿದೆಯಲ್ಲದೆ, ಪತ್ರಕರ್ತರಾಗಿದ್ದರು ಎನ್ನುವ ಜೊತೆಗೆ ಪತ್ರಿಕಾ ಧರ್ಮಕ್ಕೆ ಮತ್ತು ಈ ಕ್ಷೇತ್ರಕ್ಕೆ ನೀಡಿದ ಧರ್ಮ ವ್ಯಾಖ್ಯೆಗಳು ಗಾಂಧೀಜಿಯವರನ್ನು ಆದರ್ಶ ಪತ್ರಕರ್ತರನ್ನಾಗಿ ಬಿಂಬಿಸಿದೆ. ಯಂಗ್ ಇಂಡಿಯಾ ಪತ್ರಿಕೆಗೆ ಬರೆದ ಲೇಖನಗಳು, ಹರಿಜನ, ನವಜೀವನ, ಹರಿಜನ ಸೇವಕ, ಹರಿಜನ ಬಂಧು ಹೀಗೆ ಗಾಂಧೀಜಿಯವರ ಅಕ್ಷರ ಕುಶಲತೆಯಿಂದ ಅರಳಿದ ಪತ್ರಿಕೆಗಳು. ಈ ಪತ್ರಿಕೆಗಳ ಮೂಲಕ ಗಾಂಧೀಜಿಯವರ ನಿರ್ದಿಷ್ಟ, ನಿರಂಕುಶ, ವಿಶಾಲ ಹಾಗೂ ವಾಸ್ತವಿಕ ಚಿಂತನೆಯ ಫಲಶ್ರುತಿಗಳ ಹರಿದಾಡುವಿಕೆಯ ಪರಿಣಾಮವಾಗಿ, ಇಂದಿನ ಪತ್ರಕರ್ತರಿಗೂ ವಿವಿಧ ಕಾಲಘಟ್ಟದಲ್ಲಿಯೂ ನಮ್ಮ ದೇಶ ಎದುರಿಸುತ್ತಿರುವ ಆರ್ಥಿಕ ಏರುಪೇರು, ಸಾಮಾಜಿಕ ಅಸಮಾನತೆ, ರಾಜಕೀಯ ಅವ್ಯವಸ್ಥೆ, ಸಾಂಸ್ಕೃತಿಕ ಬಿಕ್ಕಟ್ಟು ಹಾಗೂ ಇನ್ನಿತರ ಕ್ಷೇತ್ರಗಳಲ್ಲಿಯ ಸಮಸ್ಯೆಗಳನ್ನು ಆಳವಾಗಿ ಅರಿಯುವ ಮತ್ತು ಸಮಸ್ಯೆಗಳಿದ್ದಲ್ಲಿ ಪರಿಹರಿಸುವ ಉಪಾಯಗಳನ್ನು ಶೋಧಿಸುವ ಕಾರ್ಯಕ್ಕೆ ಶ್ರೀಕಾರ ಹಾಕಿದರು.

ಮುಂದುವರಿಯುವುದು....

ಹೆಮ್ಮೆಯ ಕನ್ನಡಿಗ :

ಡಾ. ಶಿವರಾಮ ಕಾರಂತ (ಅಕ್ಟೋಬರ್ 10, 1902–ಸೆಪ್ಟೆಂಬರ್ 12, 1997)


– ಡಾ. ರಾಮಲಿಂಗೇಶ್ವರ (ಸಿಸಿರಾ)

ಕನ್ನಡ ನಾಡು ನುಡಿಯನ್ನು ವಿಶ್ವವಿಖ್ಯಾತಗೊಳಿಸಿದ ದಿಗ್ಗಜರುಗಳ ಕಿರು ಪರಿಚಯವೇ ಈ ಅಂಕಣ

"ಕಡಲತೀರದ ಭಾರ್ಗವ", "ನಡೆದಾಡುವ ವಿಶ್ವಕೋಶ" ಎಂದೇ ಖ್ಯಾತರಾಗಿದ್ದ ಕಾರಂತರು ಚಿಕ್ಕಂದಿನಲ್ಲೇ ಶಾಲೆ ಬಿಟ್ಟು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡಿದ್ದರು. ಹೀಗಿದ್ದೂ ಎಲ್ಲಾ ಜ್ಞಾನಶಾಖೆಗಳಲ್ಲೂ ಆಸಕ್ತಿ ಬೆಳೆಸಿಕೊಂಡದ್ದು, ಸ್ವಂತವಾಗಿ ಕಲಿತದ್ದು, ಕಲಿತದ್ದನ್ನು ಸರಳವಾದ ಕನ್ನಡದಲ್ಲಿ ಮಾತನಾಡಿದ್ದು, ಬರೆದದ್ದು ಈಗ ದಾಖಲೆಯಾಗಿದೆ. ಕನ್ನಡಕ್ಕೆ 3ನೇ ಜ್ಞಾನಪೀಠದ ಗೌರವ ಕಾರಂತರ, "ಮೂಕಜ್ಜಿಯ ಕನಸುಗಳು" ಕೃತಿಗೆ ಬಂದಿದ್ದು, ಕನ್ನಡ ಕೀರ್ತಿ ಪತಾಕೆ ಉತ್ತುಂಗಕ್ಕೆ ಏರಲು ಕಾರಣರಾದರು.

ಕನ್ನಡ ಸಾಹಿತ್ಯ–ಸಂಸ್ಕೃತಿಯ ಹರಿಕಾರ, ಕಾದಂಬರಿಕಾರ, ನಾಟಕಕಾರ, ಅನುವಾದಕ, ವೈಜ್ಞಾನಿಕ ಬರಹಗಾರ ಕೋಟಾ ಶಿವರಾಮ ಕಾರಂತರು. ಆಡುಮುಟ್ಟದಸೊಪ್ಪಿಲ್ಲ ಎಂಬಂತೆ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲಿ ಅದ್ವಿತೀಯವಾಗಿ ಸಾಹಿತ್ಯ ಮತ್ತು ಅನುಷ್ಠಾನದಲ್ಲಿ ತೊಡಗಿ ಕೊಂಡವರಾಗಿದ್ದಾರೆ. ಡಾ. ಶಿವರಾಮ ಕಾರಂತರು ರಚಿಸಿದ ಕೃತಿಗಳಲ್ಲಿ ಕಾದಂಬರಿಗಳೇ ಹೆಚ್ಚು. ತಮ್ಮ 96ನೆಯ ವಯಸ್ಸಿನಲ್ಲಿ ಹಕ್ಕಿಗಳ ಕುರಿತು ಬರೆದ ಅನ್ವೇಷಣಾ ಕೃತಿ ವಿಶ್ವ ದಾಖಲೆಗೆ ಅರ್ಹವಾದುದಾಗಿದೆ. ಕರ್ನಾಟಕದ ಪ್ರಮುಖ ಕಲೆಯಾದ ಯಕ್ಷಗಾನದ ಉಳಿವಿಗೆ ಪ್ರಯತ್ನಿಸಿ, ಅದರಲ್ಲಿ ಹಲವು ಪ್ರಯೋಗಗಳನ್ನು ಮಾಡಿದ್ದರು. ತಾವೇ ಸ್ವತಃ ನೃತ್ಯವನ್ನು ಕಲಿತು, ಬ್ಯಾಲೆಯಲ್ಲೂ ಗಂಭೀರ ಪ್ರಯೋಗ ಮತ್ತು ಪ್ರಯತ್ನ ಮಾಡಿದ್ದರು.


ಯಕ್ಷಗಾನ ತಂಡಗಳನ್ನು ಕಟ್ಟಿಕೊಂಡು ದೇಶ ವಿದೇಶಗಳಲ್ಲಿ ಈ ಕಲೆಯನ್ನು ಪ್ರಚುರಪಡಿಸಲು ಯತ್ನಿಸಿದರು. ಮಕ್ಕಳಲ್ಲಿದ್ದ ಪ್ರತಿಭೆ ಅರಳಿಸಲು ಪುತ್ತೂರಿನಲ್ಲಿ ಬಾಲವನವೆಂಬ ಮಕ್ಕಳ ಕೇಂದ್ರವನ್ನು ತೆರೆದಿದ್ದರು. ಪುತ್ತೂರಿನಲ್ಲಿ ಒಂದು ಮುದ್ರಣಾಲಯ ತೆರೆದು, ತಮ್ಮ ಪುಸ್ತಕಗಳನ್ನು ಮುದ್ರಿಸುತ್ತಿದ್ದರಲ್ಲದೆ, ತಮ್ಮ ಹಲವು ಕಾದಂಬರಿಗಳಿಗೆ ತಾವೇ ಮುಖಪುಟ ಚಿತ್ರಗಳನ್ನೂ ರಚಿಸಿ ಮುದ್ರಿಸಿದ ಬಹುಮುಖ ಪ್ರತಿಭೆ ಇವರದ್ದು. ಮೂಕಿ ಚಿತ್ರ ಹರಿಜನರ ಬದುಕನ್ನು ಆಧರಿಸಿದ್ದ ಡೊಮಿಂಗೋ (1930) ಚಿತ್ರವನ್ನು ತಾವೇ ಚಿತ್ರೀಕರಿಸಿ, ಅಭಿನಯಿಸಿ ನಿರ್ದೇಶಿಸಿದ್ದರು. ಅನಂತರ ಭೂತರಾಜ್ಯ (1931) ಎಂಬ ಮೂಕಿ ಚಿತ್ರ ಸಹ ನಿರ್ಮಿಸಿದ್ದರು. ಕಾರಂತರ ಕಾದಂಬರಿಗಳುದ್ದಕ್ಕೂ ಪರಿಸರದ ಚಿತ್ರಣ ಗಾಢವಾಗಿದೆ. ನಿಜ ಜೀವನದಲ್ಲೂ ಪರಿಸರದ ಉಳಿವಿಗೆ ಹೋರಾಡಿದ ಕಾರಂತರು, ಕೈಗಾ ಅಣುವಿದ್ಯುತ್ ಸ್ಥಾವರದ ವಿರುದ್ಧ ಹೋರಾಟಕ್ಕೆ ನಾಯಕತ್ವ ವಹಿಸಿ ಪರಿಸರ ನ್ಯಾಯದ ತಕ್ಕಡಿ ಹಿಡಿದರು. ಮಹಾನ್ ಮಾನವತಾವಾದಿ ಕಾರಂತರು ಜ್ಞಾನ ಕ್ಷಿತಿಜವನ್ನು ಅಷ್ಟ ದಿಕ್ಕಿಗೆ ಚಾಚಿದ ಅಕ್ಷರ ಪ್ರೇಮಿಯಾಗಿದ್ದರು. ಹಾಗೆಯೇ ನೇರ, ನಿಷ್ಠುರ ವ್ಯಕ್ತಿತ್ವ ಅವರದು. ಜಾತೀಯತೆಯನ್ನು ವಿರೋಧಿಸುವ ಇವರ 'ಚೋಮನ ದುಡಿ' ಕಾದಂಬರಿ ಚಲನಚಿತ್ರವಾಗಿಯೂ ಪ್ರಸಿದ್ಧವಾಯಿತು.



ಇವರು, ಲೀಲಾ ಎಂಬುವವರನ್ನು ಅಂತರ್ಜಾತೀಯ ವಿವಾಹವಾಗಿದ್ದರು. 1997ರಲ್ಲಿ ಸ್ಥಾಪಿತವಾದ ಮಾನವ ಮಂಟಪ ಸಂಘಟನೆಯಲ್ಲಿ ಪ್ರಧಾನ ಭಾಷಣಕಾರರಾಗಿದ್ದರು.

ಡಾ. ಕಾರಂತರ ಹುಟ್ಟೂರಾದ ಸಾಲಿಗ್ರಾಮದಲ್ಲಿ (ಉಡುಪಿ ಜಿಲ್ಲೆ), ಕಾರಂತ ಸ್ಮೃತಿಚಿತ್ರ ಶಾಲೆ, ಕಾರಂತರ ಸ್ಮರಣಲೋಕವಾಗಿ ನಿರ್ಮಿಸಲಾಗಿದೆ. ಅವರ ಕಾದಂಬರಿಗಳ ಆಶಯದ ದೊಡ್ಡ ಭಿತ್ತಿಚಿತ್ರಗಳು, ಯಕ್ಷಗಾನದ ದಿರಿಸುಗಳು, ಕಾದಂಬರಿಗಳ ಪ್ರತಿಗಳು, ಕಾರಂತರು ಬರೆದ ಚಿತ್ರಗಳು, ಉಪಯೋಗಿಸುತ್ತಿದ್ದ ಲೇಖನಿ ಮತ್ತಿತರ ವಸ್ತುಗಳನ್ನೊಂಡ ಸುಂದರ ವಸ್ತು ಸಂಗ್ರಹಾಲಯ ಇದು. ಸಾಲಿಗ್ರಾಮದ ಪೇಟೆಯ ಹೆದ್ದಾರಿಯ ಬದಿಯಲ್ಲೇ ಇರುವ ಇದರ ಉಸ್ತುವಾರಿಯನ್ನು ಮಾಲಿನಿ ಮಲ್ಯ ಅವರು ನೋಡಿಕೊಳ್ಳುತ್ತಿರುವರು. ಪರಿಸರ ಪ್ರೇಮಿ ಕಾರಂತರು, ಬಾಲ್ಯದಲ್ಲಿ ಕೆರೆಏರಿ, ಸಮುದ್ರತೀರ, ಮರದ ನೆರಳಿನ ಪ್ರದೇಶಗಳಲ್ಲಿ ಸಮಯವನ್ನು ಕಳೆಯುತ್ತಿದ್ದರು. ಆಧುನಿಕ ವಿದ್ಯಾಭ್ಯಾಸ ಕೇವಲ ಹೊಟ್ಟೆಪಾಡಿಗಾಗಿ ಎಂಬುದು ಅವರ ಅಭಿಮತ. ನಿಜವಾದ ವ್ಯಕ್ತಿತ್ವದ ವಿಕಸನವಾದರೆ ಅದೇ ನಿಜವಾದ ಶಿಕ್ಷಣವೆನ್ನುವುದು ಅವರ ಅಭಿಪ್ರಾಯವಾಗಿತ್ತು. 1920ರಲ್ಲಿ ಗಾಂಧೀಜಿ ಅವರು ಸ್ವಾತಂತ್ರ ಹೋರಾಟದಲ್ಲಿ ಶಾಲಾ ಮಕ್ಕಳು ಭಾಗವಹಿಸಬೇಕೆಂದು ಕರೆಕೊಟ್ಟಾಗ ಕಾರಂತರೂ ಚಳವಳಿಯಲ್ಲಿ ಭಾಗವಹಿಸಿದ್ದರು. 'ಹುಚ್ಚು ಮನಸ್ಸಿನ ಹತ್ತು ಮುಖಗಳು' ಅವರ ಅನುಭವ ಕಥನವಾಗಿದೆ. ಮರಳಿ ಮಣ್ಣಿಗೆ ಅವರ ಮಹೋನ್ನತ ಕಾದಂಬರಿ. ಜ್ಞಾನಪೀಠ, ಪದ್ಮಭೂಷಣ, ಪಂಪ ಪ್ರಶಸ್ತಿ, ನಾಡೋಜ ಪುರಸ್ಕಾರ, ವಿವಿಧ ವಿಶ್ವವಿದ್ಯಾಲಯಗಳ ಗೌರವ ಡಾಕ್ಟರೇಟ್‌ಗಳು, ಅಸಂಖ್ಯ ಗೋಷ್ಠಿಗಳ, ಸಮ್ಮೇಳನಗಳ ಅಧ್ಯಕ್ಷ ಪಟ್ಟಗಳು, ಸನ್ಮಾನಗಳು ಕಾರಂತರಿಗೆ ಪ್ರಧಾನ ಮಾಡಲ್ಪಟ್ಟಿವೆ. ತುರ್ತುಪರಿಸ್ಥಿತಿಯಲ್ಲಿ ಇಂದಿರಾ ಗಾಂಧಿ ಅವರ ಸರ್ವಾಧಿಕಾರವನ್ನು ಧಿಕ್ಕರಿಸಿ ಕಾರಂತರು ಪದ್ಮಭೂಷಣ ಪ್ರಶಸ್ತಿಯನ್ನು ಕೇಂದ್ರ ಸರಕಾರಕ್ಕೆ ವಾಪಸು ಮಾಡಿದ್ದು ಕೂಡ ಪ್ರಜಾಪ್ರಭುತ್ವ ವಿರುದ್ಧದ ನಡೆಗೆ ಸಾಹಿತಿಗಳ ಪ್ರತಿಭಟನೆಗೆ ಮೂಲ ಪ್ರೇರಣೆಯಾಯಿತು.

ಸಾಹಿತ್ಯ, ರಂಗಭೂಮಿ, ಚಲನಚಿತ್ರ, ವಿಜ್ಞಾನ, ಚಿತ್ರಕಲೆ, ಸಂಗೀತ, ಶಿಕ್ಷಣ, ರಾಜಕೀಯ, ಪತ್ರಿಕೋದ್ಯಮ, ಭಾಷೆ, ಸಂಸ್ಕೃತಿ ಹೀಗೆ ಪಟ್ಟಿ ಬೆಳೆಯುತ್ತದೆ. ಕಾರಂತರು ' ಬಾಲ ಪ್ರಪಂಚ', 'ವಿಜ್ಞಾನ ಪ್ರಪಂಚ'ಗಳು, ಸಿರಿಗನ್ನಡ ಅರ್ಥಕೋಶ, ಯಕ್ಷಗಾನ ಕುರಿತ ಪುಸ್ತಕಗಳು, ಶಿಲ್ಪಕಲೆ, ಚಿತ್ರಕಲೆ ಕುರಿತ ಗ್ರಂಥಗಳನ್ನು ಹಾಗೂ ಐವತ್ತಕ್ಕೂ ಹೆಚ್ಚು ನಾಟಕಗಳನ್ನು ರಚಿಸಿದ್ದಾರೆ.



ಭಾರತೀಯರ ಮಾತೆ ಕಸ್ತೂರ್‌ಬಾ ಮತ್ತು ಸುಭಾಷ್ ಚಂದ್ರ ಬೋಸ್

– ಸುಭಾಷ್ ಗಟಾಡೆ

ದೇಶವು ಕಸ್ತೂರ್‌ಬಾ ಅವರ 75ನೇ ಪುಣ್ಯತಿಥಿಯನ್ನು ಹಾಗೂ 150ನೇ ಜನ್ಮದಿನವನ್ನು ಜ್ಞಾಪಿಸಿಕೊಳ್ಳುವ ಸಂದರ್ಭದಲ್ಲಿ ಅವರ 60ಕ್ಕೂ ಹೆಚ್ಚು ವರ್ಷಗಳ ಅವಧಿಯ ಸಾರ್ವಜನಿಕ ಬದುಕಿನ ಹಲವು ಮುಖಗಳು ನಮ್ಮೆದುರು ಬಂದು ನಿಲ್ಲುತ್ತವೆ. ಒಬ್ಬಳು ಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ ಹಲವಾರು ನಾಗರಿಕ ಪ್ರತಿಭಟನೆಗಳಲ್ಲಿ ಓರ್ವ ಕಾರ್ಯಕರ್ತೆಯಾಗಿ ಅವರು ಭಾಗವಹಿಸಿದ್ದರು.

ಅವರ ಮರಿ ಮೊಮ್ಮಗಳು ತನ್ನ ಅಜ್ಜಿ ಲಕ್ಷ್ಮೀ 1927ರಲ್ಲಿ ಕಸ್ತೂರ್‌ಬಾ ಜೊತೆ ತನ್ನ ತಂದೆ ಸಿರಾಜ್ ಗೋಪಾಲಚಾರಿ ಅವರಯೊಂದಿಗೆ ಸಿಲೋನ್‌ಗೆ ಹೋಗಿದ್ದಾಗ ಕಸ್ತೂರ್‌ಬಾ ತನ್ನನ್ನು ಹೇಗೆ ನೋಡಿಕೊಂಡರು ಎಂಬುದನ್ನು ಹೇಳುತ್ತಾರೆ. ಲಕ್ಷ್ಮೀ ಕಸ್ತೂರ್‌ಬಾ ಅವರ ಕಿರಿಯ ಸೊಸೆ.

ಗುಜರಾತ್‌ನ ಬೋಸಾರ್ದ್‌ನಲ್ಲಿ ಪೊಲೀಸ್ ಅತಿರೇಕಗಳ ವಿರುದ್ಧ ಪ್ರತಿಭಟಿಸುತ್ತಿದ್ದ ಮಹಿಳೆಯರನ್ನು ಕುರಿತು ಕಸ್ತೂರ್‌ಬಾ ಸ್ಫೂರ್ತಿದಾಯಕವಾದ ಭಾಷಣ ಮಾಡಿದ್ದರು. ಮಹಿಳೆಯರಿಗೆ ತನ್ನ ಬೆಂಬಲ ಘೋಷಿಸುವುದಕ್ಕಾಗಿ ಸಭೆ ಮುಗಿದ ಬಳಿಕ ಅವರು ಕೆಲವು ಹಳ್ಳಿಗಳಿಗೆ ಭೇಟಿ ನೀಡಿದರು. ಆ ಸಂದರ್ಭದಲ್ಲಿ ಅವರು ನೀಡಿದ ಪತ್ರಿಕಾ ಹೇಳಿಕೆ ಗಮನಾರ್ಹವಾಗಿದೆ. "ನಾನು ಹೋದಲ್ಲೆಲ್ಲ ಎದೆ, ತಲೆ, ಸೊಂಟ ಮತ್ತು ಕಾಲಿನ ಮೇಲೆ ಲಾಠಿ ಹೊಡೆತಗಳ ಕಲೆಗಳನ್ನು ನೋಡಿದೆ. ಪೊಲೀಸರು ಮಕ್ಕಳಿಗೆ ಹೊಡೆದರು. ಮಹಿಳೆಯರನ್ನು ಅವರ ತಲೆ ಕೂದಲು ಹಿಡಿದು ಎಳೆದರು. ಮಹಿಳೆಯರ ಸ್ತನಗಳ ಮೇಲೆ ಮುಷ್ಟಿಯಿಂದ ಗುದ್ದಿದರು. ಮತ್ತು ಅವಾಚ್ಯ ಮಾತುಗಳನ್ನಾಡಿದರು. ಎಂಬುದನ್ನು ಕೇಳಿ ನಾನು ದುಪ್ಪಟ್ಟು ಮರುಗಿದೆ. ಗುಜರಾತಿನಲ್ಲಿ ಮಹಿಳೆಯರನ್ನು ಅಷ್ಟೊಂದು ಅಮಾನವೀಯವಾಗಿ ನಡೆಸಿಕೊಂಡದ್ದನ್ನು ನಾನು ನನ್ನ ಜೀವನದಲ್ಲಿ ಮೊದಲ ಬಾರಿಗೆ ನೋಡಿದ್ದು ಆಗಲೇ. ಪೊಲೀಸರು ಮಹಿಳೆಯರ ಮೇಲೆ ಆ ರೀತಿಯಾದ ದೌರ್ಜನ್ಯ ನಡೆಸಿದ್ದನ್ನು ನಾನು ಬೇರೆ ಎಲ್ಲಿಯೂ ನೋಡಿಲ್ಲ".

ಅವರ ಸಾವಿನ ನಂತರ ಕೆಲಮಿತ್ರರು ಕೂಡಿಕೊಂಡು ಕಸ್ತೂರ್‌ಬಾ ಗಾಂಧಿ ಸ್ಮಾರಕ ನಿಧಿಯನ್ನು ಸ್ಥಾಪಿಸಿದರು. ಇದು ತುಂಬಾ ಔಚಿತ್ಯಪೂರ್ಣವಾದ ಒಂದು ಕೆಲಸವಾಗಿತ್ತು. ಸೂಕ್ತವಾದ ಒಂದು ನಿರ್ಧಾರವಾಗಿತ್ತು. ನಿಧಿಯ ಉದ್ದೇಶ ಮಹಿಳೆಯರು ಹಾಗೂ ಹೆಣ್ಣುಮಕ್ಕಳ ಕಲ್ಯಾಣವಾಗಿತ್ತು. ಈ ಉದ್ದೇಶಕ್ಕಾಗಿ ನಿಧಿ ಸಂಗ್ರಹಿಸುವ ಒಂದು ಅಭಿಯಾನವನ್ನು ಹಮ್ಮಿಕೊಳ್ಳಲಾಗಿತ್ತು. ಜೈಲಿನಿಂದ ಬಿಡುಗಡೆಯಾದ ಬಳಿಕ ಗಾಂಧೀಜಿ ಕೂಡ ನಿಧಿ ಸಂಗ್ರಹ ಕಾರ್ಯಕ್ಕೆ ನೆರವಾದರು. ಮತ್ತು ನಿಧಿಯ ಸಮರ್ಪಕ ವಿತರಣೆಗಾಗಿ ಬೇಕಾಗಿದ್ದ ಮಾರ್ಗದರ್ಶಿ ಸೂತ್ರಗಳನ್ನು ಅವರು ನಿಗದಿಪಡಿಸಿದರು. ಆಗ ಇದ್ದ ವಾತಾವರಣವನ್ನು, ಪರಿಸ್ಥಿತಿಯನ್ನು ಗಮನಿಸಿದರೆ ಭಾರತದ ವಿವಿಧ ಸ್ತರಗಳ ಜನರಿಂದ ಆ ನಿಧಿಯ ವಿಶ್ವಸ್ಥ ಮಂಡಳಿಗೆ ಧನಾತ್ಮಕವಾದ ಪ್ರತಿಕ್ರಿಯೆ ದೊರಕಿತು. ಮತ್ತು ವಿಶ್ವಸ್ಥ ನಿಧಿಗೆ ದೇಶದ ಮೂಲೆ ಮೂಲೆಗಳಿಂದ ಕಾಣಿಕೆಗಳು, ಕೊಡುಗೆಗಳು ಹರಿದು ಬಂದವು.

ಆದರೆ ಈ ಎಲ್ಲ ಬೆಳವಣಿಗೆಗಳ ಬಗ್ಗೆ ಹಿಂದೂ ಸಂಘಟನಾಕಾರರು ಸಮಾಧಾನ ಹೊಂದಿರಲಿಲ್ಲ. ಉತ್ಸಾಹದಿಂದ ಪ್ರತಿಕ್ರಿಯಿಸಲಿಲ್ಲ ಎಂಬುದು ಕೂಡ ನಿಶ್ಚಿತವಾಗಿ ಕಾಣುತ್ತದೆ. ಆ ಸಂದರ್ಭದಲ್ಲಿ ಅವರು ಗಾಂಧೀಜಿಯ ಮಹತ್ವವನ್ನು ಕುಗ್ಗಿಸುವುದಷ್ಟೇ ಅಲ್ಲದೇ ಕಸ್ತೂರ್‌ಬಾ ಅವರು ಸ್ವಾತಂತ್ರ್ಯ ಹೋರಾಟದಲ್ಲಿ ವಹಿಸಿದ ಯಾವುದೇ ಪಾತ್ರವನ್ನು ಅಲ್ಲಗಳೆಯಲು ಮತ್ತು ಆಕೆಯ ಸಮಗ್ರ ಬದುಕನ್ನು ಓರ್ವ ಸಾಮಾನ್ಯ ಗೃಹಿಣಿಯ ಮಟ್ಟಕ್ಕಷ್ಟೇ ಇಳಿಸಲು ಬಳಸಿಕೊಂಡರು.



ಹಿಂದೂ ಮಹಾಸಭಾದ ನಾಯಕ ವಿನಾಯಕ ದಾಮೋದರ ಸಾವರ್ಕರ್ ಆಗ ತನ್ನ ಅತ್ಯಂತ ವಿಷಪೂರಿತ ಸ್ವಭಾವವನ್ನು ಹೊರಗೆಡಹಿದರು. ಗಾಂಧೀಜಿ ಬಗ್ಗೆ ತನಗಿದ್ದ ಒಂದು ದಶಕದ ದ್ವೇಷಕ್ಕೆ ಪ್ರತೀಕಾರ ತೀರಿಸಲು ಅದನ್ನೊಂದು ಅವಕಾಶವಾಗಿ ಅವರು ಬಳಸಿಕೊಂಡರು. ಅವರು ಅಂಡಮಾನ್ ಜೈಲಿನಿಂದ ತನ್ನನ್ನು ಅವಧಿಗೆ ಮೊದಲೇ ಬಿಡುಗಡೆಗೊಳಿಸಬೇಕೆಂದು ಒಂದು ಸಂದರ್ಭದಲ್ಲಿ ಬ್ರಿಟಿಷರಿಗೆ ಹಲವಾರು ಮನವಿಗಳನ್ನು ಸಲ್ಲಿಸಿದ್ದರು. ಯುದ್ಧದಲ್ಲಿ ಬ್ರಿಟಿಷರ ಕೈ ಬಲಪಡಿಸುವುದಕ್ಕಾಗಿ ಭಾರತದಾದ್ಯಂತ ಪ್ರವಾಸ ಕೈಗೊಂಡು "ಹಿಂದೂಗಳನ್ನು ಮಿಲಿಟರೀಕರಿಸಿ, ರಾಷ್ಟ್ರವನ್ನು ಹಿಂದೂಕರಿಸಿ" ಎಂಬ ಕರೆ ನೀಡುತ್ತಾ ದೇಶದ ಹಿಂದೂ ಯುವಕರನ್ನು ಬ್ರಿಟಿಷ್ ಸೇವೆಗೆ ಸೇರುವಂತೆ ಪ್ರೋತ್ಸಾಹಿಸಿದ್ದರು. ಅವರು ಆಗ ನೀಡಿದ್ದ ಪತ್ರಿಕಾ ಹೇಳಿಗೆ ಹೀಗಿತ್ತು: "ಹಿಂದೂ ಸಂಘಟನಾಕಾರರು (ಸಂಘಟಿಸ್ತಾನ್) ಕಾಂಗ್ರೆಸ್‌ವಾದಿ ಕಸ್ತೂರ್‌ಬಾ ನಿಧಿಗೆ ಒಂದು ಪೈಸೆಯನ್ನು ಕೂಡ ದೇಣಿಗೆಯಾಗಿ ನೀಡಬಾರದು." ಬ್ರಿಟಿಷ್ ಆಳ್ವಿಕೆಯನ್ನು ಕೊನೆಗೊಳಿಸುವ ಉದ್ದೇಶಕ್ಕಾಗಿ ಪ್ರಾಣತೆತ್ತು ಹುತಾತ್ಮರಾದ ಪುರುಷರ ಮತ್ತು ಮಹಿಳೆಯರ ಬಗ್ಗೆ, ಅವರ ಸಾವುಗಳ ಬಗ್ಗೆ ಗಾಂಧೀಜಿ ತಾಳಿದ್ದರೆನ್ನಲಾದ ಮೌನವನ್ನು ಪ್ರಶ್ನಿಸುತ್ತಾ ಸಾವರ್ಕರ್ ಆ ಪತ್ರಿಕಾ ಹೇಳಿಕೆ ನೀಡಿದ್ದರು. ಇದು ಅವರಿಗೆ ಗಾಂಧಿ ಬಗ್ಗೆ ಇದ್ದ ಆಳವಾದ ದ್ವೇಷದ ಸೂಚನೆಯಾಗಿತ್ತು, ಸಂಕೇತವಾಗಿತ್ತು. ಭಾರತದಲ್ಲಿ ಆಗುತ್ತಿದ್ದ ಬೆಳವಣಿಗೆಗಳ ಬಗ್ಗೆ ಅವರು ಹತಾಶರಾಗಿದ್ದರು. ಅವರ ಹತಾಶೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿತ್ತು. ಅವರು ಆಗ ಬ್ರಿಟಿಷರ ಕೈಗೊಂಬೆಯಂತೆ ಕಾಣಿಸುತ್ತಿದ್ದರು. ಎಷ್ಟರ ಮಟ್ಟಿಗೆ ಎಂದರೆ ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಕಸ್ತೂರ್‌ಬಾ ವಹಿಸಿದ ಪಾತ್ರವನ್ನು ವಸ್ತುನಿಷ್ಠವಾಗಿ ಪರಿಗಣಿಸಲು ಕೂಡ ಅವರು ಅಸಮರ್ಥರಾಗಿದ್ದರು. ಆ ಪಾತ್ರವನ್ನು ಸುಭಾಷ್ ಚಂದರ ಬೋಸ್ ಸರಿಯಾಗಿ ಗುರುತಿಸಿದ್ದರು.

ಮುಂದುವರಿಯುವುದು...

ಸೌಜನ್ಯ : ವಾರ್ತಾಭಾರತಿ : ದಿ.11.03.2019
ಸಂಗ್ರಹ : ಡಾ. ವಿ. ಪ್ರಶಾಂತ್, ಸಂ : ಬೆಂ. ಗ್ರಾ. ಜಿಲ್ಲೆ

ಕರ್ನಾಟಕ ಕಟ್ಟಿದ ಕೃಷ್ಣರಾಜ

ಇಂದಿರಾ ಕೃಷ್ಣಪ್ಪ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)



ಮಿಂಟೋ – ಮಾರ್ಲೆ ಸುಧಾರಣೆಗಳನ್ನೂ, ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿಗೆ ಹಕ್ಕು ಜವಾಬ್ದಾರಿಗಳನ್ನು ಮತ್ತು ವಿಶೇಷ ಹಕ್ಕು ಹಾಗೂ ಪ್ರಾತಿನಿಧ್ಯ ವಹಿಸುವ ಮುಖಾಂತರ ಜಾರಿಗೆ ತಂದರು. ವಿಶೇಷ ಹಕ್ಕು ಹಾಗೂ ಪ್ರಾತಿನಿಧ್ಯಗಳು ಈ ಕೆಳಕಂಡಂತಿವೆ.

1. ವರ್ಷದಲ್ಲಿ ಎರಡು ಬಾರಿ ಪ್ರಜಾಪ್ರತಿನಿಧಿ ಸಭೆ ನಡೆ–ಯತಕ್ಕದ್ದು.
2. ಪ್ರತಿಯೊಬ್ಬ ಸದಸ್ಯರಿಗೂ ಅಧಿವೇಶನದ ಪೂರ್ವಭಾವಿಯಾಗಿಯೇ ಮಂಡಿಸಲಿರುವ ವಿಷಯಗಳ ಕರಡು ಪ್ರತಿಗಳನ್ನು ಕಳುಹಿಸುವುದು.
3. ಸರ್ಕಾರದ ಆಯವ್ಯಯದಲ್ಲಿ ಚರ್ಚಿಸುವ ಹಕ್ಕು
4. ಸಾರ್ವಜನಿಕ ಹಿತಾಸಕ್ತಿಯ ಅಥವ ಮಹತ್ವದ ವಿಷಯಗಳಲ್ಲಿ ಪ್ರಶ್ನೆ ಕೇಳುವುದು.
5. ಪ್ರತಿಯೊಬ್ಬರು ಇಪ್ಪತ್ತು ಪ್ರಶ್ನೆಗಳನ್ನು (ಮೊದಲು 12 ಪ್ರಶ್ನೆಗಳು) ಕೇಳುವ ಹಕ್ಕುಗಳು.
6. ಉಪ ತಾಲ್ಲೂಕುಗಳಿಗೆ ಈಗಿನ ಪ್ರಾತಿನಿಧ್ಯವನ್ನು ಹೊರತುಪಡಿಸಿ ಪ್ರತ್ಯೇಕ ಪ್ರಾತಿನಿಧ್ಯ.
7. ಆಯವ್ಯಯದಲ್ಲಿ ಮಹಾರಾಜರ ಕುಟುಂಬಕ್ಕೆ ಕೊಡಬೇಕಾದ ಹಣದ ವಿವರ ಹಾಗೂ ಅನುಮೋದನೆ.
8. ನ್ಯಾಯ ವಿಧೇಯಕ ಸಭೆಗೆ, ಪ್ರಜಾಪ್ರತಿನಿಧಿ ಸಭೆಯಿಂದ 4 ಜನ ಸದಸ್ಯರನ್ನು ಆಯ್ಕೆ ಮಾಡುವುದು (ಮೊದಲು ಇಬ್ಬರು ಸದಸ್ಯರ ಪ್ರಾತಿನಿಧ್ಯ)

ನ್ಯಾಯ ವಿಧೇಯಕ ಸಭೆ

ಈ ಸಭೆಯನ್ನು 1908ರಲ್ಲಿ ಪ್ರಾರಂಭಿಸಲಾಯಿತು. ಈ ಸಭೆಯನ್ನು ಸ್ಥಾಪಿಸುವ ಮುಖ್ಯ ಉದ್ದೇಶವೆಂದರೆ ಸಂಸ್ಥಾನದ ಶಾಸನಗಳನ್ನು ರಚಿಸುವುದು ಮತ್ತು ಅನುಷ್ಠಾನಕ್ಕೆ ಅನುವುಗೊಳಿಸುವುದಾಗಿತ್ತು. 50 ಸದಸ್ಯ ಬಲವುಳ್ಳ ಈ ಸಭೆಯ ಅವಧಿ 4 ವರ್ಷಗಳಾಗಿದ್ದು, 28 ಸದಸ್ಯರನ್ನು ಸರ್ಕಾರದಿಂದಲೂ, 22 ಸದಸ್ಯರನ್ನು ಚುನಾವಣೆಯಿಂದಲೂ ಆರಿಸಲಾಗುತ್ತಿತ್ತು. ಸರ್ಕಾರದ ಅಧಿಕಾರಿಗಳು 20 ಮಂದಿ ಉಳಿದ 8 ಜನರನ್ನು ನಾಮ ನಿರ್ದೇಶನ ಮಾಡಲಾಗುತ್ತಿತ್ತು. ಎಂಟು ಜಿಲ್ಲೆಗಳಿಂದ ಇಬ್ಬರು ಸದಸ್ಯರು, ಬೆಂಗಳೂರು – ಮೈಸೂರು ಮುನಿಸಿಪಲ್ ವಿಭಾಗದಿಂದ ತಲಾ ಒಬ್ಬರನ್ನೂ, ಕಾರ್ಮಿಕ, ವಾಣಿಜ್ಯ, ಕೃಷಿ ಮತ್ತು ಮೈಸೂರು ವಿಶ್ವವಿದ್ಯಾನಿಲಯದಿಂದ ತಲಾ ಒಬ್ಬರು ಪ್ರನಿನಿಧಿಯನ್ನು ಆರಿಸಲಾಗುತ್ತಿತ್ತು. ಈ ಸಭೆಗೆ, ಶಾಸನಗಳ ರಚನೆ, ಆಯವ್ಯಯಗಳ ಮೇಲೆ ಚರ್ಚೆ, ಸಾರ್ವಜನಿಕ ಹಿತಾಸಕ್ತಿ ವಿಷಯಗಳ ಮೇಲೆ ಚರ್ಚಿಸಲು ಅವಕಾಶ ಕೊಡುವುದರ ಮೂಲಕ, ಜನರು ಆಡಳಿತದಲ್ಲಿ ಸಕ್ರಿಯವಾಗಿ ಭಾಗವಹಿಸುವಂತಾಯಿತು. ಸರ್. ಪುಟ್ಟಣ್ಣ ಶೆಟ್ಟರೂ, ಹೊಸಕೊಪ್ಪ ಕೃಷ್ಣರಾವ್, ಎಂ. ಬಸವಯ್ಯ, ಹಾಸನದ ನಂಜುಂಡಯ್ಯ, ಶ್ರೀರಂಗಪಟ್ಟಣದ ನರಸಿಂಗರಾಯರು, ಎಂ. ಸುಬ್ಬಯ್ಯ, ವೆಂಕಟಶಾಮಣ್ಣ, ಖಾನ್ ಅಬ್ಬಾಸ್ ಖಾನ್, ಮೀರ್ ಹಂಜಾ ಹುಸೇನ್, ಗುಲಾಂ ಅಹ್ಮದ್ ಕಲಾಮಿ – ಮುಂತಾದವರು ಸಭೆಯ ಕಾರ್ಯ ಕಾಲಾಪಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದ್ದರು.

ಹಿಂದುಳಿದ ವರ್ಗದ ಜಾಗೃತಿ

ಈ ಎಲ್ಲಾ ಸುಧಾರಣೆಗಳಿಂದ ರಾಜಕೀಯ ಅಧಿಕಾರದಲ್ಲಿ ಹಾಗೂ ಆಡಳಿತದಲ್ಲಿ ಬ್ರಾಹ್ಮಣೇತರರು, ಹೆಚ್ಚಾಗಿ ಭಾಗವಹಿಸಲಾರಂಭಿಸಿದಂತೆ, ಬ್ರಾಹ್ಮಣೇತರರ ಸಂಘಟನೆಗಳು ತಲೆ ಎತ್ತಲಾರಂಭಿಸಿದವು. ಪಕ್ಕದ ಮುಂಬೈ ಪ್ರಾಂತ್ಯದ, ಕೊಲ್ಹಾಪುರ ಸಂಸ್ಥಾನದಲ್ಲಿ ಶಾಹುಮಹಾರಾಜರು, ಸಾಮಾಜಿಕ ಪರಿವರ್ತನಾ ಆಂದೋಳನದ ಪತಾಕೆಯನ್ನೇ ಹಾರಿಸಿದ್ದರು. ಅವರು ಕೈಗೊಂಡ ಶಿಕ್ಷಣ ಸುಧಾರಣೆಗಳು, ಶೂದ್ರಾತಿ ಶೂದ್ರರಿಗೆ ಶಿಕ್ಷಣದಲ್ಲಿ ಮೀಸಲಾತಿ, ಉದ್ಯೋಗದಲ್ಲಿ 50% ಮೀಸಲಾತಿ, ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ, ಹಾಸ್ಟೆಲ್ ಸೌಲಭ್ಯಗಳು, ವಿದ್ಯಾರ್ಥಿ ವೇತನ, ಅಸ್ಪೃಶ್ಯತೆ ನಿವಾರಣಾ ಕ್ರಮಗಳು ಇತ್ಯಾದಿ ವರದಿಗಳು – ಸುದ್ದಿಗಳು ಮೈಸೂರು ಸಂಸ್ಥಾನಿಗರ ಗಮನಕ್ಕೆ ಬಂದಿತ್ತು. ಇದೇ ವೇಳೆಯಲ್ಲಿ ಮದ್ರಾಸ್‌ನಲ್ಲಿ ರಾಮಸ್ವಾಮಿ ಮೊದಲಿಯಾರ್, ಟಿ.ಎಂ. ನಾಯಕ್, ಪಿಟಿ. ಚಿಟ್ಟಿಯಾರ್ ಹಾಗೂ ಪೆರಿಯಾರ್ ರಾಮಸ್ವಾಮಿ ನಾಯಕ್ ಅವರ ದ್ರಾವಿಡ ಚಳುವಳಿ ಮತ್ತು ಜಸ್ಟೀಸ್ ಪಾರ್ಟಿಯ ಪ್ರಭಾವ ಉಂಟಾಯಿತು. ಮೈಸೂರು ಸಂಸ್ಥಾನದ ಬ್ರಾಹ್ಮಣೇತರರ ಮೇಲೆ ಮೈಸೂರು ಆಡಳಿತದಲ್ಲಿ 90% ಬ್ರಾಹ್ಮಣರೇ ತುಂಬಿರುವುದೂ, ಮೈಸೂರು ಆಡಳಿತದಲ್ಲಿ ಮದ್ರಾಸ್ ಅಯ್ಯರ್ ಮತ್ತು ಆಂಧ್ರದ ಸ್ಮಾರ್ಥರು ಪ್ರಾಬಲ್ಯ ಹೆಚ್ಚಾಗಿರುವುದನ್ನು ಗಮನಿಸಿದ್ದರಿಂದಲೇ "ಮೈಸೂರು ಮೈಸೂರಿನವರಿಗೆ ಮಾತ್ರ" ಎಂಬ ಕೂಗು ಮೈಸೂರು ಬ್ರಾಹ್ಮಣರಿಂದ ಹೊರಟಿತ್ತು.

ಮುಂದುವರಿಯುವುದು...

ಸೌಜನ್ಯ : ಕ.ಆ.ಸೇ. ಸಂಘದ 2013–14ರ
'ಅನುಷ್ಠಾನ' ಸಂಚಿಕೆ



ಮಹಾತ್ಮ ಗಾಂಧಿ ಮತ್ತು ಸ್ವಚ್ಛ ಭಾರತ

ಡಾ. ವೂಡೇ ಪಿ. ಕೃಷ್ಣ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಮೇಲ್ನೋಟಕ್ಕೆ ಈ ಪದ್ಧತಿಯ ಅಸ್ತಿತ್ವಕ್ಕೆ ಕಾರಣವಾದ ಮೂಲ ಅಪರಾಧಿಗಳು ಖಾಸಗಿಯವರಲ್ಲ. ಬದಲಿಗೆ, ಸಾರ್ವಜನಿಕ ವಲಯದವರು. ಉದಾಹರಣೆಗೆ ಭಾರತೀಯ ರೈಲ್ವೆಯು ಈ ಕೆಲಸ ಮಾಡುವವರಿಗಾಗಿ ಅತಿ ದೊಡ್ಡ ಉದ್ಯೋಗವಕಾಶ ಕಲ್ಪಿಸುತ್ತಿದೆ. ಇದರ ಪ್ರಮಾಣವನ್ನು ಕಂಡುಹಿಡಿಯುವುದು ಕಷ್ಟದ ವಿಷಯ. ಏಕೆಂದರೆ ಇಂದಿಗೂ ಸಹ ಬಹುತೇಕ ರೈಲುಗಳಲ್ಲಿ ಶೌಚ ವಿಲೇವಾರಿ ಮಾಡಲು ಬಹಳಷ್ಟು ಕೆಲಸಗಾರರು ಕಾಂಟ್ರಾಕ್ಟರ್‌ಗಳ ಮುಖಾಂತರ ಬರುತ್ತಾರೆ. ಅವರ ಆದಾಯ ದಿನಕ್ಕೆ ಸುಮಾರು 200 ರೂಪಾಯಿಗಳು. ಕೈಗೆ ಧರಿಸಲು ಗ್ಲೌಸ್ ಸಿಕ್ಕರೆ ಅದೇ ಅದೃಷ್ಟ. ಅವರಿಗೆ ದೊರಕುವ ರಕ್ಷಣಾ ಸೌಲಭ್ಯಗಳೂ ಸಹ ಇಲ್ಲವೆನ್ನುವಷ್ಟು ಕಡಿಮೆ. ಇಲ್ಲಿಯವರೆಗೆ ಅಂದಾಜು 1/3ರಷ್ಟು ಬೋಗಿಗಳು ಮಾತ್ರ ಆಧುನಿಕ ಜೈವಿಕ ಶೌಚಾಲಯವನ್ನು ಹೊಂದಿವೆ. ಜಾತಿ ಆಧಾರಿತವಾದ ಹಾಗೂ ಬಲವಾಗಿ ಬೇರೂರಿದ ಕೈಯಿಂದ ಕಲ್ಮಶ ತೆಗೆಯುವ ಪದ್ಧತಿಯು ನಮ್ಮ ಸಾರ್ವಜನಿಕ ನೀತಿಯ ಒಂದು ಭಾಗವಾಗಿದೆ. ಸ್ವಚ್ಛ ಭಾರತ ಮಿಶನ್‌ನ ಯಶಸ್ಸು ಬಹುಮಟ್ಟಿಗೆ ಈ ಪದ್ಧತಿಯ ನಿವಾರಣೆಯ ಮೇಲೆಯೇ ಅವಲಂಬಿಸಿದೆ. ಆದ್ದರಿಂದ ಸ್ವಚ್ಛ ಭಾರತದ ನಾಲ್ಕು ಮುಖ್ಯ ಗುರಿಗಳು ಸ್ಪಷ್ಟವಾಗಿವೆ. "ಬಯಲು ಶೌಚ ಮುಕ್ತಗೊಳಿಸುವುದು, ಬರಿಗೈಯಿಂದ ಕಲ್ಮಶ ಸಂಗ್ರಹಣೆ ಮಾಡುವ ಪದ್ಧತಿಯ ನಿರ್ಮೂಲನೆ, ಆಧುನಿಕ ಹಾಗೂ ವೈಜ್ಞಾನಿಕ ಪದ್ಧತಿಯಿಂದ ಘನ ತ್ಯಾಜ್ಯ ನಿರ್ವಹಣೆ ಮಾಡುವುದು, ಆರೋಗ್ಯಕರ ನೈರ್ಮಲ್ಯ ಅಭ್ಯಾಸ," ಕುರಿತಂತೆ ನಡವಳಿಕೆಯಲ್ಲಿ ಬದಲಾವಣೆ ತರುವುದು. ಆದರೆ ಎಲ್ಲ ಪ್ರಯತ್ನ ಮತ್ತು ಸಂಪನ್ಮೂಲಗಳು ಮೊದಲನೆಯದರ ಮೇಲೆ ಕೇಂದ್ರೀಕೃತವಾಗಿವೆ. ಆದರೆ ಕೈಯಿಂದ ಕಲ್ಮಶ ಸ್ವಚ್ಛ ಮಾಡುವ ಪದ್ಧತಿಯ ನಿರ್ಮೂಲನೆ, ಆ ಕೆಲಸಗಾರರ ಪುರ್ನವಸತಿ ಹಾಗೂ ಇದಕ್ಕೆ ಸಂಬಂಧಿಸಿದ ಘನ ತ್ಯಾಜ್ಯ ನಿರ್ವಹಣೆ ಬಗ್ಗೆ ಯಾರೂ ಆಸಕ್ತಿಯನ್ನು ತೋರಿಸುತ್ತಿಲ್ಲ. ಈಗ ಬಹಳ ದೊಡ್ಡ ಪ್ರಮಾಣದಲ್ಲಿ ಶೌಚಾಲಯಗಳು ನಿರ್ಮಾಣವಾಗುತ್ತಿವೆ. ಆದರೆ ಅವುಗಳನ್ನು ಸ್ವಚ್ಛ ಮಾಡುವ ಬಗ್ಗೆ ಒಂದು ನಿರ್ದಿಷ್ಟ ಕಾರ್ಯತಂತ್ರದ ಕೊರತೆ ಎದ್ದು ಕಾಣುತ್ತಿದೆ. ಶೌಚವನ್ನು ವೈಜ್ಞಾನಿಕ ಪದ್ಧತಿಯಲ್ಲಿ ವಿಸರ್ಜಿಸುವ ಬಗ್ಗೆ ಹಾಗೂ ಶೌಚಾಲಯಗಳಿಗೆ ನಿರಂತರ ನೀರಿನ ಸೌಲಭ್ಯ ಒದಗಿಸುವ ಬಗ್ಗೆ ಕಾಳಜಿ ತೋರಿಸಲಾಗುತ್ತಿಲ್ಲ. ಮಾನವ ಮಲಸಂಗ್ರಹಣೆ ಪದ್ಧತಿಯ ನಿರ್ಮೂಲನೆಗೆ ತಂತ್ರಜ್ಞಾನಾಧಾರಿತ ಉಪಕರಣಗಳನ್ನು ಉಪಯೋಗಿಸಲು ಬಂಡವಾಳವೇ ಇಲ್ಲದ ಪರಿಸ್ಥಿತಿ ಇದೆ.

ಈ ಯೋಜನೆಯಿಂದಾದ ಅತ್ಯಂತ ಪ್ರಮುಖ ಲಾಭ ಮತ್ತು ಅನುಕೂಲವೆಂದರೆ ಹೆಣ್ಣು ಮಕ್ಕಳ ಶಿಕ್ಷಣದಲ್ಲಿ ಅಭಿವೃದ್ಧಿ ಆಗಿರುವುದು. ಈ ಹಿಂದೆ ಹಳ್ಳಿಗಳ ಶಾಲೆಗಳಲ್ಲಿ ಶೌಚಾಲಯ ವ್ಯವಸ್ಥೆ ಇಲ್ಲದ ಕಾರಣ, ಹೆಣ್ಣು ಮಕ್ಕಳು ಶಾಲೆಗೆ ಹೋಗಲು ಹಿಂದೇಟು ಹಾಕುತ್ತಿದ್ದರು. ಈಗ ಶಾಲೆಯ ಆವರಣದಲ್ಲಿಯೇ ಶೌಚಾಲಯಗಳು ನಿರ್ಮಾಣವಾದ ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಹೆಣ್ಣು ಮಕ್ಕಳು ಶಾಲೆಗೆ ಬರುತ್ತಿದ್ದಾರೆ. ಹಾಗೂ ಮಧ್ಯದಲ್ಲಿಯೇ ಶಾಲೆ ಬಿಡುವವರ ಸಂಖ್ಯೆಯೂ ನಿಧಾನವಾಗಿ ಇಳಿಮುಖವಾಗುತ್ತಿದೆ.

ನಾವೀಗಾಗಲೇ ಒಂದಿಷ್ಟು ಸಾಧನೆ ಮಾಡಿದ್ದರೂ ಸಹ ಮುಂದೆ ಮಾಡಬೇಕಾದ ಹಾಗೂ ಮಾಡದೇ ಉಳಿದ ಕೆಲಸಗಳು ತುಂಬಾ ಇವೆ. ಯೋಜನೆ ಮತ್ತು ಅನುಷ್ಠಾನದ ನಡುವೆ ಸಂಪರ್ಕವಿರಬೇಕು. ಮೌಲ್ಯಮಾಪನ ವರದಿಗಳು ನಿಖರವಾಗಿರಬೇಕು ಹಾಗೂ ಕ್ಷೇತ್ರ ಮಟ್ಟದ ವಸ್ತು ಸ್ಥಿತಿಗೆ ಆಧಾರವಾಗಿ ತಯಾರಾಗಬೇಕು. ಜೊತೆಗೆ ಎಲ್ಲ ಪಾಲುದಾರರನ್ನೂ ಈ ಯೋಜನೆಯ ಅನುಷ್ಠಾನದಲ್ಲಿ ಭಾಗಿಯಾಗಿಸುವುದು ಅತ್ಯಗತ್ಯ. ಅಂತೂ ಭಾರತದ ಕಾರ್ಪೋರೇಟ್ ಜಗತ್ತು ತನ್ನ ನಿದ್ರೆಯಿಂದ ಎಚ್ಚೆತ್ತುಕೊಂಡಿದ್ದು, ದೊಡ್ಡ ಸಮಾಧಾನದ ಸಂಗತಿ. ಸ್ವಚ್ಛ ಭಾರತ ನಿಧಿಗೆ ಅವರು ನೀಡುತ್ತಿರುವ ಕೊಡುಗೆಯಿಂದಾಗಿ ಸಂಪೂರ್ಣ ಕಾರ್ಯಕ್ರಮಕ್ಕೆ ಒಂದು ಚಾಲನಾ ಶಕ್ತಿ ದೊರೆತಂತಾಗಿದೆ. ಅಲ್ಲದೇ, ಸಿ.ಎಸ್.ಆರ್.ನ ಪರಿಕಲ್ಪನೆಗೆ ಹೆಚ್ಚು ಮೌಲ್ಯ ಒದಗಿಸಿದಂತಾಗಿದೆ.

ಮಹಾತ್ಮ ಗಾಂಧಿ ಅವರ ನೆನಪು ಮತ್ತು ಆದರ್ಶಗಳು ಇತರ ಸಾರ್ವಜನಿಕ ಕ್ಷೇತ್ರಗಳಲ್ಲಿಯೂ ಸಹ ಸಾಧನೆಗೆ ಪ್ರೇರಣೆಯಾದರೆ, ಅವರ 150ನೇ ಜನ್ಮದಿನಾಚರಣೆಯನ್ನು ಹೆಚ್ಚು ಅರ್ಥಪೂರ್ಣವಾಗಿ ನಾವು ಆಚರಿಸಿದಂತಾಗುತ್ತದೆ.

ವಿಶೇಷ ಸುದ್ದಿ



ಸ್ಕೈ ಡೈವಿಂಗ್ ಮಾಡಿ 103ರ ವೃದ್ಧ ದಾಖಲೆ!

ಬಾನೆತ್ತರದದಿಂದ ಭೂಮಿಗೆ ಜಿಗಿಯುವ ಸ್ಕೈ ಡೈವಿಂಗ್ ಮಾಡಲು ಯುವಕರು ಹೆದರುತ್ತಾರೆ. ಅಂಥದ್ದರಲ್ಲಿ ಅಮೇರಿಕದಲ್ಲಿ 103 ವರ್ಷದ ವೃದ್ಧ ವ್ಯಕ್ತಿಯೊಬ್ಬ 14,000 ಅಡಿ ಎತ್ತರದಿಂದ ಸ್ಕೈ ಡೈವಿಂಗ್ ಮಾಡುವ ಮೂಲಕ ಗಿನ್ನೆಸ್ ದಾಖಲೆ ನಿರ್ಮಿಸಿದ್ದಾರೆ. ಅಲ್ ಬ್ಲಾಷ್ಕೆ ತಮ್ಮ ಮೊಮ್ಮಕ್ಕಳು ಪದವಿ ಪೂರ್ಣಗೊಳಿಸಿದ ಸಂಭ್ರಮದಲ್ಲಿ ಸ್ಕೈ ಡೈವಿಂಗ್ ಮಾಡಿ ಗಮನ ಸೆಳೆದಿದ್ದಾರೆ. ಅಲ್ಲದೇ ಸ್ಕೈ ಡೈವಿಂಗ್ ಮಾಡಿದ ಅತಿ ಹಿರಿಯ ವ್ಯಕ್ತಿ ಎಂಬ ಗಿನ್ನೆಸ್ ದಾಖಲೆಗೆ ಪಾತ್ರರಾಗಿದ್ದಾರೆ. ಈ ಮುನ್ನ 2017ರಲ್ಲಿ 100ನೇ ವರ್ಷದ ಸಂಭ್ರಮಾಚರಣೆಯ ಸಂದರ್ಭದಲ್ಲೂ ಸ್ಕೈ ಡೈವಿಂಗ್ ಮಾಡುವ ಮೂಲಕ ಅಲ್ ಬ್ಲಾಷ್ಕೆ ಗಮನ ಸೆಳೆದಿದ್ದರು.

ಸೌಜನ್ಯ : ಕನ್ನಡಪ್ರಭ : 07.10.2020

ಸಂಗ್ರಹ : ಮಹಂತೇಶ ಉಜ್ಜಿನಿಕೊಪ್ಪ

ಸಮಾಧಾನ ಚಿತ್ತರಾಗಿರಿ (ನೆಮ್ಮದಿ ಮನಸ್ಸು – ಜೀವನದ ಯಶಸ್ಸು)

ಡಾ. ಸಿ.ಆರ್. ಚಂದ್ರಶೇಖರ್

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ನಿಮಗೆ ಬರುವ ಈ ಕಾಯಿಲೆಗಳು ವಾಸಿಯಾಗುತ್ತವೆ?

ಇತ್ತೀಚಿನ ವರ್ಷಗಳಲ್ಲಿ ಆಗಿರುವ ವೈಜ್ಞಾನಿಕ ಪ್ರಗತಿಯಿಂದಾಗಿ ಕಾಯಿಲೆಗಳೆಂದರೆ ನನಗೆ ಚಿಂತೆ ಭಯವಿಲ್ಲವಪ್ಪ, ಮನೋವೈದ್ಯರು ಕೊಡುವ ಔಷಧಗಳು, ಸಲಹೆ ಸಮಾಧಾನಗಳು, ವಿದ್ಯುತ್ ಕಂಪನ ಚಿಕಿತ್ಸೆಗಳು ನನ್ನ ಆರೋಗ್ಯವನ್ನು ಪುನಃ ಸ್ಥಾಪಿಸುತ್ತವೆ. ನನಗೆ ಯಾವ ಮುಕ್ಕು ಆಗುವುದಿಲ್ಲ.

ಒತ್ತಡಕ್ಕೆ ಸಿಲುಕಿದಾಗ ನೀವು ನಲುಗಿ ಹೋಗುತ್ತಿಲ್ಲ ಏಕೆ?

ಹೌದು, ಯಾವುದೇ ಒತ್ತಡ–ಅದು ಕಷ್ಟ–ನಷ್ಟ, ಸೋಲು, ನಿರಾಶೆಗಳಿಂದ ಉಂಟಾಗಿರಲಿ, ದ್ವಂದ್ವ ಯೋಚನೆ ವಿಷಯಗಳಿಂದ ಉಂಟಾಗಿರಲಿ. ನಿಭಾಯಿಸಲಾಗದ ಜವಾಬ್ದಾರಿ, ಕರ್ತವ್ಯ ಮಹತ್ವಾಕಾಂಕ್ಷೆ ಗಳಿಂದ ಉಂಟಾಗಿರಲಿ, ಅಹಿತಕರ ಪರಿಸರದಿಂದ ಉಂಟಾಗಲಿ ನನ್ನ ಸಮತೋಲನವನ್ನು ತಪ್ಪಿಸುತ್ತದೆ. ಹೆಚ್ಚು ಒತ್ತಡದಿಂದ, ದೇಹದಲ್ಲಿ ಅಡ್ರಿನಲಿನ್ ಹಾರ್ಮೋನ್ ಹೆಚ್ಚಾಗುವುದರಿಂದ ಸ್ವಾಯತ್ತ ನರವ್ಯವಸ್ಥೆ, ಅನುವಾದಕ ವಿಭಾಗವು ಹೆಚ್ಚು ಪ್ರಚೋದನೆ ಗೊಳ್ಳುತ್ತದೆ.

ತತ್ಫಲವಾಗಿ ಹೃದಯ, ಶ್ವಾಸಕೋಶಗಳು ಹೆಚ್ಚು ಕೆಲಸ ಮಾಡಬೇಕಾಗುತ್ತದೆ. ಮೆದುಳಿಗೆ ರಕ್ತ ಪೂರೈಕೆ ಕಡಿಮೆಯಾಗಿದೆ. ಜೀರ್ಣಾಂಗ ನಿಷ್ಕ್ರಿಯಗೊಳ್ಳುವ ಮಟ್ಟವನ್ನು ತಲುಪುತ್ತದೆ, ಜೊತೆಗೆ ನನ್ನನ್ನು ಭಯ, ದುಃಖ, ಸಿಟ್ಟು ಆವರಿಸುತ್ತದೆ. ಒತ್ತಡ ಬಹುಕಾಲ ಇದ್ದರೆ, ನಾನು ರೋಗಗ್ರಸ್ತ ನಾಗುತ್ತೇನೆ. ದೇಹವೂ ರೋಗಗ್ರಸ್ಥವಾಗುತ್ತದೆ.

ಒತ್ತಡದಿಂದ ನಿನಗೆ ಬರುವ ರೋಗ ಸ್ಥಿತಿ ಗಳಾವುವು?

ಖಿನ್ನತೆ ಕಾಯಿಲೆ, ಆತಂಕ ಮನೋಬೇನೆ, ಹಿಸ್ಟೀರಿಯಾ, ದೇಹದಲ್ಲಿ ರೋಗವಿಲ್ಲದಿದ್ದರೂ, ದೇಹದಲ್ಲಿ ರೋಗ ಲಕ್ಷಣ ಕಾಣಿಸಿಕೊಳ್ಳುವ ಸೋಮಾಟೋ ಫಾರಂ ಡಿಸಾರ್ಡರ್ ಕಾಣಿಸಿಕೊಳ್ಳುತ್ತದೆ. ಈ ಎಲ್ಲ ರೋಗಸ್ಥಿತಿಗಳಲ್ಲಿ ಸಾಮಾನ್ಯವಾಗಿ ಕಾಣುವ ಲಕ್ಷಣಗಳೆಂದರೆ ಸುಸ್ತು, ಆಯಾಸ, ನೋವುಗಳು ಮಾಮೂಲಿ ಕೆಲಸ ಕಾರ್ಯಗಳನ್ನು ಮಾಡಲಾಗದಷ್ಟು ನಿಶಕ್ತಿ, ನಿರಾಸಕ್ತಿ, ಹಸಿವು–ನಿದ್ರೆ ಲೈಂಗಿಕ ಕ್ರಿಯೆಯಲ್ಲಿ ಏರುಪೇರು ಇತ್ಯಾದಿ.

CHRONOLOGY OF EVENTS OF PERSONAL & PUBLIC LIFE OF MAHATMA GANDHI - (year wise - 1947)

October 1. Addressed a meeting of Delhi cities. In reply no questions he agreed that those who wished to live in India must be loyal to the nation whatever might be their faith and they must voluntarily surrender unlicensed ams. It was for the Government to secure justice for the Muslims in India is it was for the Government in Pakistan to secure justice for the minorities there.

October 2. Streams of visitors, including Lord and Lady Mountbatten and persons from foreign embassies, greeted him on his birthday. He said that he could not live with hatred and killing murder the atmosphere.

October 4. In his after-prayer speech he drew the attention of his hearers to the approaching cold weather and appealed to all who could afford it to donate warm blankets and quilts for the refugees, Criticising Churchill's remarks again asked the audience to falsify Churchill's forebodings

October 6. Expressed hope that Dr Rajendra Prasad's efforts for a solution of the food crisis would succeed.

October 9. Urged donation of blankets.

October 14. Announced that he had been receiving more blankets from day to day. The Charge d'Affaires of Iran and his wife brought a large number of blankets to him.

October 16. During his prayer speech at Birla House asked the East Bengal minorities to stay in their homes and face death rather than dishonour or loss of self-respect.

October 18. Speaking on satyagraha in South Africa said that a handful of satyagraha was enough to vindicate the honour of India.

After October 19. At the prayer meetings held daily at Birla House, gave expression to his views about the situation both in India and Pakistan.

October 26: Remarked that if reports in newspapers were correct, the happenings in Kashmir were certainly bad The charge was that the Government of Pakistan was coercing Kashmir to join Pakistan. Nobody could coerce Kashmiris to do it. Similar was the case of Hyderabad people and little Junagadh

October 27. Referring to complaints that Muslims were being forced to leave their ancestral homes in the Indian Union and migrate to Pakistan, he said he was sure that was not the policy of the Central Cabinet and the public should refrain from taking the law into their hands

October 29. Referring to the Kashmir situation after prayers said that when the Maharaja in his distress wished to accede to the Indian Union, the Governor General could not reject it. He praised the Maharaja for appointing Sheikh Abdullah us his minister.

o be continued...

Courtesy : Mahatma Gandhi A Chronology
Published by : Ministry of Information & Broadcasting, Govt. of India
Collection by : Dr. Poornima Jogi, N.S.S.



ಮಳೆಗಾಲದ ಆರೈಕೆ

ಡಾ. ವಸುಂಧರಾ ಭೂಪತಿ

(ಹಿಂದಿನ ಸಂಚಿಕೆಯಿಂದ ಮುಂದುವರಿದಿದೆ)

ಜ್ವರ : ಎರಡು ಚಮಚೆ ತುಳಸಿ ಎಲೆ ರಸಕ್ಕೆ ಎರಡು ಚಿಟಿಕೆ ಕಾಳು ಮೆಣಸಿನ ಪುಡಿ ಜೇನುತುಪ್ಪ ಬೆರೆಸಿ ಸೇವಿಸಬೇಕು. 3 ಗಂಟೆಗೊಮ್ಮೆ ತೆಗೆದುಕೊಳ್ಳಬೇಕು. ಅಮೃತ ಬಳ್ಳಿ ರಸವನ್ನು ಜೇನಿನೊಂದಿಗೆ ಬೆರೆಸಿ ದಿನಕ್ಕೆ ನಾಲ್ಕೈದು ಬಾರಿ ಕುಡಿಯಬೇಕು.

ನೆಗಡಿ : ಒಂದು ಲವಂಗವನ್ನು ಬಾಯಲ್ಲಿರಿಸಿ ಅದರ ರಸ ನುಂಗುತ್ತಿರಬೇಕು. ಅರಿಶಿನಪುಡಿಯನ್ನು ಕೆಂಡದ ಮೇಲೆ ಹಾಕಿ ಇಲ್ಲವೇ ಅರಿಶಿನಕೊಂಬಿನ ತುದಿಯನ್ನು ಕೆಂಡದಲ್ಲಿ ಸುಟ್ಟು ಅದರ ಹೊಗೆಯನ್ನು ಮೂಗಿನಿಂದ ಎಳೆದುಕೊಳ್ಳಬೇಕು. ಬೆಳಿಗ್ಗೆ ಖಾಲಿ ಹೊಟ್ಟೆಗೆ ಒಂದು ಲೋಟ ಬಿಸಿನೀರು ಇಲ್ಲವೇ ಬಿಸಿಹಾಲಿಗೆ ಅರ್ಧ ಚಮಚೆ ಶುದ್ಧವಾದ ಅರಿಶಿನ ಪುಡಿ ಬೆರೆಸಿ, ಸ್ವಲ್ಪ ಬೆಲ್ಲ ಹಾಕಿ ಕುಡಿಯಬೇಕು. ಅರಿಶಿನಪುಡಿಯನ್ನು ಅಂಗಡಿಯಲ್ಲಿ ಸಿದ್ದ ಪ್ಯಾಕೇಟ್ ಖರೀದಿಸದೆ ಅರಿಶಿನ ಕೊಂಬು ತಂದು ಪುಡಿಮಾಡಿಟ್ಟುಕೊಳ್ಳುವುದು ಉತ್ತಮ.

ಕೆಮ್ಮು : ಶುಂಠಿ, ಹಿಪ್ಪಲಿ, ಮೆಣಸು ಪ್ರತಿಯೊಂದು 10 ಗ್ರಾಂ, ಜೇಷ್ಠಮಧು 30 ಗ್ರಾಂ ಎಲ್ಲವನ್ನೂ ಕುಟ್ಟಿ ನುಣ್ಣಗೆ ಪುಡಿಮಾಡಿಕೊಂಡು ಒಂದು ಚಮಚೆ ಪುಡಿಯನ್ನು ಜೇನುತುಪ್ಪದಲ್ಲಿ ಬೆರೆಸಿ ದಿನಕ್ಕೆ ಮೂರು ಬಾರಿ ಸೇವಿಸಬೇಕು. ಐದು ಚಮಚೆ ಆಡುಸೋಗೆ ಎಲೆಯ ರಸಕ್ಕೆ ಒಂದು ಚಮಚೆ ಜೇನುತುಪ್ಪ ಬೆರೆಸಿ ಬೆಳಗ್ಗೆ ಹಾಗೂ ರಾತ್ರಿ ಊಟಕ್ಕೆ ಮುಂಚೆ ಸೇವಿಸಬೇಕು.

ಗಂಟಲು ನೋವು : 10 ಗ್ರಾಂ ಜೇಷ್ಠಮಧು ಕುಟ್ಟಿ ಪುಡಿಮಾಡಿ ಅದನ್ನು ಒಂದು ಲೋಟ ನೀರಿನಲ್ಲಿ ಕಷಾಯಕ್ಕಿಟ್ಟು ಅರ್ಧಲೋಟಕ್ಕಿಳಿಸಿ, ಆರಿಸಿ, ಶೋಧಿಸಿ, ಜೇನುತುಪ್ಪ ಬೆರೆಸಿ ದಿನಕ್ಕೆ ಮೂರು ಬಾರಿ ಕುಡಿಯಬೇಕು. ದ್ರಾಕ್ಷಿ, ಕಾಳುಮೆಣಸು, ಜೇಷ್ಠಮಧು ಸಮಪ್ರಮಾಣದಲ್ಲಿ ಕುಟ್ಟಿ ಮಾತ್ರೆ ತಯಾರಿಸಿಟ್ಟುಕೊಂಡು ಎರಡು ಮಾತ್ರೆಯನ್ನು ದಿನಕ್ಕೆ ಮೂರು ಬಾರಿ ಸೇವಿಸಬೇಕು. ಆಡುಸೋಗೆ ಎಲೆಗೆ ಸ್ವಲ್ಪ ಬಿಸಿನೀರು ಹಾಕಿ ಐದು ಚಮಚ ರಸ ತೆಗೆದು 3–4 ಚಿಟಿಕಿ ಹಿಪ್ಪಲಿ ಪುಡಿ ಮತ್ತು ಜೇನುತುಪ್ಪ ಬೆರೆಸಿ 3–4 ಬಾರಿ ಸೇವಿಸಬೇಕು.

ಉಬ್ಬಸ : ಅರಿಶಿನ, ಕಾಳುಮೆಣಸು, ಹಿಪ್ಪಲಿ, ದ್ರಾಕ್ಷಿ, ಬೆಲ್ಲ, ಕಚೋರ, ಶುಂಠಿ ಇವುಗಳನ್ನು ಸಮಭಾಗ ಮಾಡಿ 5 ಗ್ರಾಂನಷ್ಟು ಪುಡಿಯನ್ನು ಜೇನುತುಪ್ಪದೊಂದಿಗೆ ಬೆರೆಸಿ ದಿನಕ್ಕೆ 2 ಇಲ್ಲವೇ 3 ಬಾರಿ ಸೇವಿಸಬೇಕು. ಆಡುಸೋಗೆ ಎಲೆ, ಬೆಳ್ಳುಳ್ಳಿ, ಮೆಣಸು, ಹಿಪ್ಪಲಿ, ಕಟುಕರೋಹಿಣಿ ಈ ಎಲ್ಲವುಗಳನ್ನು ಸೇರಿಸಿ ಅರೆದು ಒಂದು ಚಮಚೆಯಷ್ಟನ್ನು ಬಿಸಿನೀರು ಸೇರಿಸಿ ದಿನಕ್ಕೆ 3 ಬಾರಿ ಸೇವಿಸುವುದರಿಂದ ಉಬ್ಬಸ ಕಡಿಮೆಯಾಗುತ್ತದೆ.

ಸ್ವರ ಒಡೆದಿದ್ದರೆ : ಒಂದೆಲಗ, ಬಜೆ, ಶುಂಠಿ, ಹಿಪ್ಪಲಿ ಸಮಭಾಗ ಕುಟ್ಟಿ ಪುಡಿ ಮಾಡಿಟ್ಟುಕೊಂಡು ದಿನಕ್ಕೆರಡು ಬಾರಿ ಜೇನುತುಪ್ಪದೊಂದಿಗೆ ಸೇವಿಸಬೇಕು.

ಸಂಧಿವಾತ : ಧನಿಯ, ಒಣಶುಂಠಿ ಎರಡನ್ನೂ 10 ಗ್ರಾಂ ತೆಗೆದು ಕೊಂಡು ಕುಟ್ಟಿ ಪುಡಿಮಾಡಿ 4 ಲೋಟ ನೀರಿಗೆ ಹಾಕಿ ಕಷಾಯಕ್ಕಿಟ್ಟು ಒಂದು ಲೋಟಕ್ಕಿಳಿಸಿ, ಶೋಧಿಸಿ ದಿನಕ್ಕೆರಡು ಬಾರಿ ಕುಡಿಯಬೇಕು. ನೋವಿರುವ ಜಾಗಕ್ಕೆ ಎಳ್ಳೆಣ್ಣೆ, ಸಾಸಿವೆ ಎಣ್ಣೆಯನ್ನು ಬಿಸಿಮಾಡಿ ಹಚ್ಚಿ ಮಸಾಜ್ ಮಾಡಿ ನಂತರ ಶಾಖ ತೆಗೆದುಕೊಳ್ಳಬೇಕು. ಒಣಶುಂಠಿಯನ್ನು ನೀರಿನಲ್ಲಿ ತೇಯ್ದು ತೆಳುವಾಗಿ ನೋವಿರುವ ಜಾಗಕ್ಕೆ ಲೇಪಿಸಬೇಕು. ಹೊಂಗೆಯ ಎಲೆಯನ್ನು ಹಾಕಿ ಕುದಿಸಿದ ನೀರಿನಿಂದ ಶಾಖ ತೆಗೆದುಕೊಳ್ಳಬೇಕು.

ಮಾಯಿಶ್ಚರೈಸರ್ : ಮನೆಯಲ್ಲಿಯೇ ಮಾಯಿಶ್ಚರೈಸರ್ ತಯಾರಿಸಿಕೊಂಡು ಪ್ರತಿದಿನ ಮಲಗುವ ಮುಂಚೆ ಮುಖಕ್ಕೆ ಹಚ್ಚಿಕೊಂಡಲ್ಲಿ ಹಗಲು ಹೊತ್ತಿನಲ್ಲಿ ಯಾವುದೇ ಕ್ರೀಂ ಬಳಸುವ ಅವಶ್ಯಕತೆಯಿರುವುದಿಲ್ಲ.

ಲೋಳೆರಸ (ಅಲೋವೆರಾ) ತಿರುಳು ಅಥವಾ ಜೆಲ್ 2 ಚಮಚೆ, ಬಾದಾಮಿ ಎಣ್ಣೆ 1 ಚಮಚೆ, ಬೆಣ್ಣೆ ಅರ್ಧ ಚಮಚೆ, ಗುಲಾಬಿ ಜಲ 1 ಚಮಚೆ ಈ ಎಲ್ಲವನ್ನು ಬೆರೆಸಿಟ್ಟುಕೊಂಡು ರಾತ್ರಿ ಹೊತ್ತು ಮುಖಕ್ಕೆ ಹಚ್ಚಿಕೊಳ್ಳುವುದರಿಂದ ಮುಖದ ಕಾಂತಿ ಹೆಚ್ಚಾಗುತ್ತದೆ.

ಮುಂದುವರಿಯುವುದು...

ಪ್ರಥಮ ಚಿತ್ರ ಸಾಹಿತಿ ಬೆಳ್ಳಾವೆ ನರಹರಿ ಶಾಸ್ತ್ರಿ

ಕನ್ನಡದ ಮೊದಲ ಚಿತ್ರಸಾಹಿತಿ ಬೆಳ್ಳಾವೆ ನರಹರಿ ಶಾಸ್ತ್ರಿಗಳು. ದಿ. 20.09.2020ರಂದು ಅವರ 138ನೇ ಜನ್ಮದಿನ. ತುಮಕೂರು ಬಳಿಯ ಬೆಳ್ಳಾವೆಯಲ್ಲಿ ಜನಿಸಿದ ಶಾಸ್ತ್ರಿ ಅವರಿಗೆ ಎಳವೆಯಲ್ಲೇ ನಾಟಕದ ಗೀಳು. ಮುಂದೆ ಶಿಕ್ಷಕರಾದಾಗ ನಾಟಕ ರಚಿಸುವ, ಅಭಿನಯ ಮಾಡುವ ಜೊತೆಗೆ ಗೀತ ರಚನಕಾರರಾಗಿಯೂ ಗುರುತಿಸಿಕೊಂಡರು. ಪಿಟೀಲು ನುಡಿಸುವ ಹವ್ಯಾಸವೂ ಇತ್ತು. ಆ ಹೊತ್ತಿಗೆ ಗುಬ್ಬಿ ಕಂಪನಿಯಲ್ಲಿ ನಾಟಕಗಳಿಗೆ ಕೊರತೆ ಇತ್ತು. ಶಾಸ್ತ್ರಿಗಳು ಅತ್ಯುತ್ತಮ ನಾಟಕ ರಚಿಸಿ ರಂಗಭೂಮಿಯ ಎಲ್ಲೆ ವಿಸ್ತರಿಸಿದರು. ನಟ, ನಟಿಯರಿಗೆ ಹಾಡಿನ ತರಬೇತಿಯನ್ನು ನೀಡುತ್ತಿದ್ದರು. ಸಾಂಪ್ರದಾಯಿಕ ಶೈಲಿಯ ಕಂದ ಪದ್ಯ, ಹಾಡುಗಳನ್ನು ನಾಟಕಗಳಲ್ಲಿ ಸೇರಿಸಿ ರಂಗು ಹೆಚ್ಚಿಸಿದರು. 1950ರ ಸುಮಾರಿಗೆ ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಶಾಸ್ತ್ರಿ ಅವರ 'ರಾಜಭಕ್ತಿ ಕಾವ್ಯಂ' ಕಾವ್ಯವನ್ನು ಮೆಚ್ಚಿ ಆಸ್ಥಾನ ವಿದ್ವಾನ್ ಬಿರುದು ನೀಡಿ ಗೌರವಿಸಿದರು. ಮುಂದೆ ಇವರ ಪ್ರತಿಭೆ ಚಿತ್ರರಂಗಕ್ಕೂ ವಿಸ್ತರಿಸಿತು. ಮೊದಲ ಕನ್ನಡ ಚಿತ್ರ 'ಸತಿ ಸುಲೋಚನ'ಕ್ಕೆ ಸಾಹಿತ್ಯ, ಕಥೆ, ಗೀತೆಗಳನ್ನು ಬರೆಯುವ ಮೂಲಕ ಕನ್ನಡದ ಮೊದಲ ಚಿತ್ರ ಸಾಹಿತಿಯಾಧ ಹೆಗ್ಗಳಿಕೆ ಇವರದು.

ಸೌಜನ್ಯ : ಕನ್ನಡಪ್ರಭ – **20.09.2020**

ಸಂಗ್ರಹ : ಎಸ್.ಎಂ. ಶ್ಯಾಮಲ, ಅಧ್ಯಾಪಕರು (ನಿ)



ಸ್ವಾಮಿ ಅಗ್ನಿವೇಶ್ : (21.09.1939 - 11.9.2020)

ಆಂಧ್ರಪ್ರದೇಶದ ಶ್ರೀಕಾಕುಲಂನಲ್ಲಿ ಸಾಂಪ್ರದಾಯಿಕ ಹಿಂದೂ ಕುಟುಂಬದಲ್ಲಿ ಜನನ. ಕಾನೂನು ಮತ್ತು ವಾಣಿಜ್ಯ ಕ್ಷೇತ್ರದಲ್ಲಿ ಪದವಿ ಪಡೆದರು, ಅವರು ಕೋಲ್ಕತ್ತಾದಲ್ಲಿನ ಪ್ರಖ್ಯಾತ ಸೇಂಟ್ ಕ್ಸೇವಿಯರ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ, ಭಾರತದ ಮುಖ್ಯ ನ್ಯಾಯಾಧೀಶರಾಗಿ ನಂತರ ಅವರು ರಾಜ್ಯಸಭೆಯ ಸದಸ್ಯರಾಗಿಯೂ ಸೇವೆಸಲ್ಲಿಸಿದವರಾಗಿದ್ದಾರೆ. 1981ರಲ್ಲಿ ಸ್ಥಾಪನೆಯಾದ ಬಾಂಡ್ ಲೇಬರ್ ಆಬರೇಷನ್ ಫ್ರಂಟ್‌ನ ಮೂಲಕ 'ನಿರ್ಭಂಧಿತ ಕಾರ್ಮಿಕರ' ವಿರುದ್ಧದ ಹೋರಾಟಕ್ಕೆ ಹೆಸರುವಾಸಿಯಾಗಿದ್ದಾರೆ. ಅಗ್ನಿವೇಶ್ ಆರ್ಯ ಸಮಾಜ ಚಳವಳಿಯ ಅತ್ಯುನ್ನತ ಅಂತಾರಾಷ್ಟ್ರೀಯ ಸಂಸ್ಥೆಯಾಗಿರುವ ಆರ್ಯ ಸಮಾಜದ ವಿಶ್ವ ಕೌನ್ಸಿಲ್ಸ್‌ನ ಅಧ್ಯಕ್ಷರಾಗಿ ಸೇವೆಸಲ್ಲಿಸಿದರು. ಅದನ್ನು ಮೂಲತಃ ಸ್ವಾಮಿ ದಯಾನಂದ ಸರಸ್ವತಿಯವರು 1875ರಲ್ಲಿ ಸ್ಥಾಪಿಸಿದ್ದರು. 1994 ರಿಂದ 2004 ರವರೆಗಿನ ಗುಲಾಮಗಿರಿಯ ಸಮಕಾಲೀನ ಸ್ವರೂಪಗಳ ಮೇಲೆ ಯುನೈಟೆಡ್ ನೇಶನ್ಸ್ ವಾಲಂಟರಿ ಟ್ರಸ್ಟ್ ನಿಧಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದರು.



ರಾಮ್‌ವಿಲಾಸ್ ಪಾಸ್ವಾನ್ : (05.07.1946 - 08.10.2020)

ಜನಚಳವಳಿ ಹೋರಾಟಗಳಿಂದಲೇ ರೂಪುಗೊಂಡ ಜನನಾಯಕರಾಗಿದ್ದ, ರಾಮ್‌ವಿಲಾಸ್ ಪಾಸ್ವಾನ್ ಅವರು, 7 ದಶಕಗಳ ರಾಜಕೀಯ ಜೀವನ ಅಂತ್ಯಗೊಳಿಸಿ, ಬಾರದ ಲೋಕಕ್ಕೆ ಇದೇ ಅಕ್ಟೋಬರ್ 8 ರಂದು ಕ್ರಮಿಸಿದ್ದಾರೆ. ಬಿಹಾರದಲ್ಲಿ 1946ರಲ್ಲಿ ಜನಿಸಿದ ಪಾಸ್ವಾನ್ ಅವರು ಕಾನೂನು ಪದವೀಧರರು. 1969ರಲ್ಲಿ ಬಿಹಾರ ವಿಧಾನಸಭೆಗೆ ಆಯ್ಕೆಯಾದ ಇವರು, ಸತತವಾಗಿ 2020ರ ವರೆಗೆ, ಪಾರ್ಲಿಮೆಂಟಿನಲ್ಲಿ ವಿವಿಧ ಇಲಾಖೆಗಳ ಸಚಿವರಾಗಿ ಕಾರ್ಯನಿರ್ವಹಿಸಿದ್ದಾರೆ. 1974ರಲ್ಲಿ ಲೋಕದಳ ಪಕ್ಷ ಮತ್ತು 2000ರಲ್ಲಿ ಲೋಕಜನ ಶಕ್ತಿ ಪಕ್ಷ ಸ್ಥಾಪಿಸಿದರು. 2010 ರಿಂದ 2014ರವರೆಗೆ ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾಗಿದ್ದು, ಕೇಂದ್ರದಲ್ಲಿ ಕ್ಯಾಬಿನೆಟ್ ಹಾಗೂ ಗ್ರಾಹಕ ವ್ಯವಹಾರ, ಆಹಾರ ಮತ್ತು ನಾಗರಿಕ ಪೂರೈಕೆ, ಗ್ರಾಹಕ ವ್ಯವಹಾರ ಇಲಾಖೆ ಸಚಿವರಾಗಿದ್ದರು. ತುರ್ತು ಪರಿಸ್ಥಿತಿ ಸಮಯದಲ್ಲಿ ಜೈಲುವಾಸ ಅನುಭವಿಸಿದ್ದ ಪಾಸ್ವಾನ್ ಅವರು, 1977ರಲ್ಲಿ ಲೋಕಸಭೆಗೆ ಅತಿ ಹೆಚ್ಚು ಮತಗಳಿಂದ ಆಯ್ಕೆಯಾಗಿದ್ದರು. ಕೇಂದ್ರ ಸಂಪುಟದಲ್ಲಿ ಅವರು ಇದುವರೆಗೂ ಕ್ಯಾಬಿನೆಟ್ ಸಚಿವ, ಕಾರ್ಮಿಕ ಕಲ್ಯಾಣ, ರೈಲ್ವೆ ಇಲಾಖೆ, ಸಂಹವನ, ಕಲ್ಲಿದ್ದಲು ಮತ್ತು ಗಣಿಗಾರಿಕೆ, ರಾಸಾಯನಿಕ, ರಸಗೊಬ್ಬರ ಮತ್ತು ಉಕ್ಕು, ಗ್ರಾಹಕ ವ್ಯವಹಾರ, ಆಹಾರ ನಾಗರಿಕ ಪೂರೈಕೆ ಇಲಾಖೆಯಲ್ಲಿ ಸಚಿವರಾಗಿ ಜನಪರ ಆಶೋತ್ತರಗಳ ಕಾರ್ಯಯೋಜನೆಗಳನ್ನು ರೂಪಿಸಿದ್ದರು. ಜನಪರ ಯೋಜನೆಗಳ ಜನನಾಯಕನ ಅಗಲಿಕೆ ಸಮಾಜಕ್ಕೆ ಅಪಾರ ನೋವುಂಟು ಮಾಡಿದೆ.



ಸುರೇಶ್ ಅಂಗಡಿ : (01.06.1955 - 23.09.2020)

ಬೆಳಗಾವಿ ಕ್ಷೇತ್ರದಿಂದ ಸತತವಾಗಿ 4 ಬಾರಿ ಲೋಕಸಭಾ ಕ್ಷೇತ್ರದಿಂದ ಆಯ್ಕೆಯಾದ ಸುರೇಶ್ ಅಂಗಡಿ ಅವರು ರೈಲ್ವೆ ಸಹಾಯಕ ಸಚಿವರಾಗಿ ಕಾರ್ಯ ನಿರ್ವಹಿಸಿದವರಾಗಿದ್ದಾರೆ. ಕರ್ನಾಟಕದ ಬೆಳಗಾವಿಯ ಕೆರೆ ಕೊಪ್ಪದಲ್ಲಿ 1955ರಲ್ಲಿ ಜನಿಸಿದ ಸುರೇಶ್ ಅಂಗಡಿಯವರು ಕಾನೂನು ಪದವೀಧರರಾಗಿದ್ದರು. ಬಿಜೆಪಿ ಪಕ್ಷದಲ್ಲಿ, ಜಿಲ್ಲಾ ಉಪಾಧ್ಯಕ್ಷ ಸ್ಥಾನದಿಂದ ಹಿಡಿದು ಕ್ಷೇತ್ರದ ಜನಪ್ರಿಯ ನಾಯಕನಾಗಿ ಸೇವೆ ಸಲ್ಲಿಸಿದ್ದಾರೆ. ಕರೋನಾ ಕಾರಣದಿಂದ ದೆಹಲಿಯಲ್ಲಿಯೇ ಅಂತಿಮ ಸಂಸ್ಕಾರಗೊಂಡ ಪ್ರಥಮ ಸಂಸದರಾಗಿರುವುದೂ ಕೂಡ, ಅವರ ಅಗಲಿಕೆಯ ನೋವು ಕನ್ನಡಿಗರಿಗೆ ಅತಿ ಭಾರವಾಗಿದೆ.



ಜಸ್ವಂತ್ ಸಿಂಗ್ : (03.01.1938-27.09.2020)

ರಾಜಸ್ಥಾನದಲ್ಲಿ ಜನಿಸಿ ಬಂದ ಜನನಾಯಕ ಜಸ್ವಂತ್ ಸಿಂಗ್. ಜನಪ್ರಿಯ ಪ್ರಧಾನಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರ ಪರಮಾಪ್ತರಾಗಿದ್ದರು. ಇವರು 1950-60ರ ದಶಕದಲ್ಲಿ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸಿ ನಿವೃತ್ತಿಯಾಗಿದ್ದು, ಬಿಜೆಪಿ ಸಂಸ್ಥಾಪಕ ಸದಸ್ಯರಾಗಿ, ಲೋಕಸಭೆ ಮತ್ತು ರಾಜ್ಯಸಭೆ ಸದಸ್ಯರಾಗಿ ಸೇವೆಸಲ್ಲಿಸಿದ್ದಾರೆ. ಇವರ ಅಧಿಕಾರಾವಧಿಯಲ್ಲಿ ನಡೆದ ಕಂದಹಾರ್ ಪ್ರಕರಣ, ಇಂಡಿಯನ್ ಏರ್‌ಲೈನ್ಸ್ ಪ್ರಕರಣ ಮತ್ತು ಉಗ್ರಗಾಮಿ ಮೌಲಾನ ಮಸೂದ್ ಅಜರ್, ಶೇಕ್ ಒಮರ್ ಮತ್ತು ಮಸ್ತಾಕ್ ಜರ್ಗಾರ್ ಬಿಡುಗಡೆಯ ಷರತ್ತು - ಸವಾಲನ್ನು ಸ್ಥೈರ್ಯವಾಗಿ ಎದುರಿಸಿದ ರೀತಿ ಇಂದಿಗೂ ಜನರಲ್ಲಿ ಹಸಿರಾಗಿದೆ. 1996 ರಿಂದ 1998 ಮತ್ತು 2004ರಲ್ಲಿ ವಿದೇಶಾಂಗ, ರಕ್ಷಣೆ ಮತ್ತು ಅರ್ಥ ಖಾತೆ ಸೇರಿ 6 ಸಚಿವಾಲಯ ಹೊಣೆಯನ್ನು ನಿರ್ವಹಿಸಿದ್ದಾರೆ. 1998ರ ಪೋಖ್ರಾನ್ ಪರಮಾಣು ಪರೀಕ್ಷೆಯ ಸವಾಲಿನ ಪ್ರಶ್ನೆಯನ್ನು ಸಮರ್ಪಕ ಉತ್ತರದೊಂದಿಗೆ ಎದುರಿಸಿದ್ದರು. ಹಾಗೆಯೇ ಇವರು ರಚಿಸಿದ 'ಜಿನ್ನಾ - ಇಂಡಿಯಾ ಪಾರ್ಟಿಷನ್ ಇಂಡಿಪೆಂಡೆನ್ಸ್' ಪುಸ್ತಕವು ಬಾರಿ ವಿವಾದಕ್ಕೆ ಎಡೆ ಮಾಡಿಕೊಟ್ಟಿತ್ತು. ಹಾಗೆಯೇ 1996ರ ಲಾಹೋರ್ - ದೆಹಲಿ ಬಸ್ ಓಡಿಸುವ ಯೋಜನೆಯೂ ಇವರದೆ ಸವಾಲಿನ ಸಂಪರ್ಕವಾಗಿತ್ತು. ಅರ್ಥ ಸಚಿವರಾಗಿದ್ದಾಗ ದೇಶದ ಜಿಡಿಪಿ ಪ್ರತಿಶತ 8.5ರವರೆಗೆ ಏರಿಕೆ, ಸರಳೀಕರಣ ತೆರಿಗೆ, ಸೈನಿಕರ ಆರೋಗ್ಯ ರಕ್ಷಣೆ, ಹೀಗೆ ಹತ್ತು ಹಲವು ಸುಧಾರಣ ಕ್ರಮಗಳಿಗೆ ಜಸ್ವಂತ್ ಸಿಂಗ್ ಅವರು ಸ್ಮರಣೀಯರಾಗಿದ್ದಾರೆ.



ಎಸ್.ಪಿ. ಬಾಲಸುಬ್ರಹ್ಮಣ್ಯಂ : (04.06.1946 - 25.09.2020)

ಗಾನಗಾರುಡಿಗ, ವಿಶ್ವವಿಖ್ಯಾತ ಗಾಯಕ, 40,000 ಹಾಡುಗಳ ಗಾನಕೋಗಿಲೆ, 16 ಭಾಷೆಗಳ ಸಂಗೀತ ಸಾರ್ವಭೌಮ, ಪದ್ಮಶ್ರೀ, ಪದ್ಮವಿಭೂಷಣ ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ ಜನಸಾಗರವನ್ನು ಬಿಟ್ಟು ಅಗಲಿ ಕಾಣದ ಲೋಕದ ಕಡೆಗೆ ಸಾಗಿದ್ದಾರೆ. ಗಾಯನಕ್ಕಾಗಿ 6 ಬಾರಿ ರಾಷ್ಟ್ರ ಪ್ರಶಸ್ತಿ ಪಡೆದ, ಟಿ.ವಿ. ರಿಯಾಲಿಟಿ ಶೋಗಳ ನಿರೂಪಕನಾಗಿ, ತೀರ್ಪುಗಾರರಾಗಿ, ಹಿಮ್ಮೇಳಗಳ ಗಾರುಡಿಗನಾಗಿ, ಕ್ಯಾಸೆಟ್ ಲೋಕದ ಮಾಂತ್ರಿಕನಾಗಿ, ಚಿತ್ರರಂಗದ ಅಭಿನಯ ಚತುರನಾಗಿ, ಸಮಾಜ ಸೇವಕನಾಗಿ ಭಾರತೀಯರ ಮನದಲ್ಲಿ ಅಚಂದ್ರಾರ್ಕವಾಗಿ ನೆಲೆಸಿದ ಸಂಗೀತ ಪರ್ವತವೇ ಆಗಿದ್ದಾರೆ ಎಸ್.ಪಿ.ಬಿ.




ನಾರಾಯಣಾಚಾರ್ ಬಿ.

ಕೊರೋನಾ ಪೀಡಿತರಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಬೀದರ್ ಜಿಲ್ಲೆ ಬಸವಕಲ್ಯಾಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ನಾರಾಯಣರಾವ್ ಅವರು ತಮ್ಮ 65ನೇ ವಯಸ್ಸಿನಲ್ಲಿ ನಿಧನರಾಗಿದ್ದಾರೆ. ಬಹು ಅಂಗಾಂಗ ವೈಫಲ್ಯಕ್ಕೆ ತುತ್ತಾಗಿದ್ದ ರಾವ್ ಅವರು ಗ್ರಾಮ ಭಾಷೆಯ ಭಾಷಣಕಾರ, ಸಜ್ಜನ ರಾಜಕಾರಣಿ ಆಗಿದ್ದ ಅವರು ಜನಾನುರಾಗಿಯೂ ಆಗಿದ್ದರು. ಎಂ.ಎ. ಪದವೀಧರರಾಗಿದ್ದ ಶ್ರೀಯುತರು ದೇಶದಲ್ಲಿ ತುರ್ತು ಪರಿಸ್ಥಿತಿ ಹೇರಿದ್ದ ವೇಳೆ ಜೆ.ಪಿ. ಚಳವಳಿಯಲ್ಲಿ ಭಾಗಿಯಾಗುವ ಮೂಲಕ ಹೋರಾಟದ ಹಾದಿ ತುಳಿದವರು. ದೇವರಾಜ ಅರಸು ಅವರ ಜೊತೆ ನಿಕಟ ಸಂಬಂಧ ಬೆಳೆಸಿ ಹಿಂದುಳಿದ ವರ್ಗದ ನಾಯಕನಾಗಿ ಹೊರಹೊಮ್ಮಿದರು. ಅಲೆಮಾರಿ ಜನರಿಗೆ ವಸತಿ ಶಾಲೆ ಹಾಗೂ ವೃದ್ಧಾಶ್ರಮ ಸ್ಥಾಪಿಸಿ ಅಶಕ್ತರಿಗಾಗಿ ಜೀವನವನ್ನೇ ಮುಡುಪಾಗಿಟ್ಟು ದುಡಿದವರು. ಬಸವಕಲ್ಯಾಣದಲ್ಲಿ ನೂತನ ಅನುಭವ ಮಂಟಪದ ಕೆಲಸದಲ್ಲಿ ತೊಡಗಿಸಿಕೊಂಡಿದ್ದು, ಅದರ ಶಂಕುಸ್ಥಾಪನೆಗೆ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರನ್ನು ಕರೆಸಬೇಕೆಂದುಕೊಂಡಿದ್ದ ಬಿ. ನಾರಾಯಣ ರಾವ್ ಅವರ ಆಶಯ ಅವರ ಅನುಯಾಯಿಗಳು ಈಡೇರಿಸಬೇಕಾಗಿದೆ.



ಜಿ.ಎಸ್. ಅಮೂರ

ಗುರುರಾಜ ಶ್ಯಾಮಾಚಾರ ಅಮೂರರು ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ದಿಗ್ಗಜರಾಗಿದ್ದರು. ಧಾರವಾಡದಲ್ಲಿ ಶಿಕ್ಷಣ ಪಡೆದ ಅವರು ಔರಂಗಾಬಾದನ ಮರಾಠವಾಡಾ ವಿಶ್ವವಿದ್ಯಾಲಯದಲ್ಲಿ ಇಂಗ್ಲೀಷ್ ಅಧ್ಯಾಪಕರಾಗಿ ವೃತ್ತಿಜೀವನ ಪ್ರಾರಂಭಿಸಿ, ಆಗಲೇ 'ಕಾಮಿಡಿಯ ಪರಿಕಲ್ಪನೆ'ಎಂಬ ಮಹಾಪ್ರಬಂಧ ಬರೆದು ಗೌರವ ಡಾಕ್ಟರೇಟ್ ಪಡೆದಿದ್ದರು. ಕನ್ನಡ ಮತ್ತು ಆಂಗ್ಲ ಭಾಷೆಯ ಮೇಲೆ ಪಾಂಡಿತ್ಯ ಹೊಂದಿದ್ದರು. ಸೀಮೋಲ್ಲಂಘನ, ಭುವನದ ಭಾಗ್ಯ, ಅರ್ಥಲೋಕ ಸೇರಿದಂತೆ 50ಕ್ಕೂ ಹೆಚ್ಚು ವಿವಿಧ ವಿಮರ್ಶಾ ಬರಹಗಳು, ಸಣ್ಣ ಕಥೆಗಳ ವಿಮರ್ಶಾ ಬರಹಗಳು ಅವರ ಸಾಹಿತ್ಯ ಶ್ರೇಷ್ಠತೆಯ ಕೊಡುಗೆಗಳಾಗಿವೆ. ಅವರ ಕೊರಡು ಕೊನರಿದಾಗ ಕೃತಿ ವಿಶಿಷ್ಟವಾದದ್ದು. ಇನ್ನುಳಿದಂತೆ ಬೇಂದ್ರೆ ಅವರ ಸಾಹಿತ್ಯವನ್ನು ವಿಭಿನ್ನ ನೆಲೆಯಲ್ಲಿ ಕಟ್ಟಿಕೊಟ್ಟಿರುವ ಅಮೂರರು ಗಿರೀಶ್ ಕಾರ್ನಾಡ್‌ರ ರಂಗಭೂಮಿ ವಿಚಾರಗಳನ್ನು ರಂಗ ವಿಮರ್ಶಾ ವಿಧಾನಗಳಲ್ಲಿ ಕಟ್ಟಿ ಕೊಟ್ಟಿದ್ದಾರೆ. ಸಾಹಿತಿ ಅನಂತಮೂರ್ತಿ ಅವರು ಅಮೂರರನ್ನು ಕನ್ನಡ ಸಾಹಿತ್ಯ ಲೋಕದ ಭೀಷ್ಮ ಎಂದೇ ಸದಾ ಕರೆಯುತ್ತಿದ್ದರು ಆಧುನಿಕ ಕನ್ನಡ ಸಾಹಿತ್ಯ ವಿಮರ್ಶಕರಲ್ಲಿ ಅಗ್ರಮಾನ್ಯರೆಂದು ಪರಿಗಣಿಸಲ್ಪಟ್ಟಿರುವ ಡಾ: ಅಮೂರ ಅವರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ನೃಪತುಂಗ ಪ್ರಶಸ್ತಿ, ಪಂಪ ಪ್ರಶಸ್ತಿ ಸೇರಿದಂತೆ 40 ಕ್ಕೂ ಹೆಚ್ಚು ಪ್ರಶಸ್ತಿ ಪುರಸ್ಕಾರಗಳು ಸಂದಿವೆ. ಇತ್ತೀಚೆಗಷ್ಟೆ ಅವರಿಗೆ ನೃಪತುಂಗ ಪ್ರಶಸ್ತಿಯನ್ನು ಘೋಷಿಸಲಾಗಿತ್ತು. ಪ್ರಶಸ್ತಿಯನ್ನು ಸ್ವೀಕರಿಸುವ ಮುನ್ನವೇ ಅವರು ಇಹಲೋಕ ತ್ಯಜಿಸಿದ್ದಾರೆ.



ಹೀ.ಚಿ. ಶಾಂತವೀರಯ್ಯ

ಹಿರಿಯ ಸಾಹಿತಿ, ವಾಗ್ಮಿ ಹೀ.ಚಿ. ಶಾಂತವೀರಯ್ಯ ತಮ್ಮ 87ನೇ ವಯಸ್ಸಿನಲ್ಲಿ ನಿಧನರಾದರು. ಬೆಂಗಳೂರಿನ ವಿಜಯನಗರದಲ್ಲಿ ವಾಸವಿದ್ದ ಶ್ರೀಯುತರು ಸಾಹಿತ್ಯ ಚರಿತ್ರೆಯ ಸಂಪುಟ ಸೇರಿ ಹತ್ತಾರು ಗ್ರಂಥಗಳನ್ನು ಕನ್ನಡ ಸಾಹಿತ್ಯ ಲೋಕಕ್ಕೆ ನೀಡಿದ್ದು, ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟಿನ ಸಹ ಸಂಪಾದಕರಾಗಿ ಸುದೀರ್ಘ ಸೇವೆ ಸಲ್ಲಿಸಿದ್ದರು. ಕನ್ನಡೇತರರಿಗೆ ಕನ್ನಡ ಕಲಿಕಾ ತರಗತಿಗಳನ್ನು ನಡೆಸಿ ಚಿರಪರಿಚಿತರಾಗಿದ್ದಾರೆ.




ಸಂಗೀತ ನಿರ್ದೇಶಕ ರಾಜನ್

ಹೆಸರಾಂತ ಸಂಗೀತ ನಿರ್ದೇಶಕ ರಾಜನ್ (87) ಅವರು 11.10.2020ರಂದು ನಿಧನರಾದರು. ಕನ್ನಡ ಚಿತ್ರರಂಗದಲ್ಲಿ ಮಾಧುರ್ಯದ ಸಂಗೀತದ ಮೂಲಕ ಜನಪ್ರಿಯರಾಗಿದ್ದ 'ರಾಜನ್ - ನಾಗೇಂದ್ರ' ಜೋಡಿ, 1970ರಿಂದ ನಾಲ್ಕು ದಶಕಗಳ ಕಾಲ ಕನ್ನಡ, ತೆಲುಗು, ತಮಿಳು, ಮಲಯಾಳಂ, ತುಳು, ಹಿಂದಿ ಹೀಗೆ ಅನೇಕ ಭಾಷೆಗಳಲ್ಲಿ 375 ಚಿತ್ರಗಳಿಗೆ ದಿಗ್ಗಜ ನಟರ ಸಿನಿಮಾಗಳಿಗೆ ಸುಮಧುರ ಸಂಗೀತ ನೀಡುವ ಮೂಲಕ ಜನಸಮುದಾಯಕ್ಕೆ ಬಹಳ ಹತ್ತಿರವಾಗಿದ್ದರು.



ಕಾರ್ಟೂನ್ ಸೃಷ್ಟಿಕರ್ತ ಶಂಕರ್

ಮಕ್ಕಳ ಕಥೆ ಪುಸ್ತಕದಲ್ಲಿ ಪ್ರಸಿದ್ಧ ಕಥಾ ಪ್ರಕಾರಗಳಾಗಿದ್ದ 'ವಿಕ್ರಮ್ ಬೇತಾಳ್' ವ್ಯಂಗ್ಯ ಚಿತ್ರಗಳನ್ನು ಸೃಷ್ಟಿಸಿದ್ದ ಖ್ಯಾತ ಕಲಾವಿದ ಕೆ.ಸಿ. ಶಿವಶಂಕರ್ ಅವರು ಚೆನ್ನೈನಲ್ಲಿ ತಮ್ಮ 97ನೇ ವಯಸ್ಸಿನಲ್ಲಿ ನಿಧನರಾದರು. 12 ಭಾಷೆಗಳಲ್ಲಿ ಪ್ರಕಟವಾಗುತ್ತಿದ್ದ 'ಚಂದಮಾಮ' ಪತ್ರಿಕೆಯಲ್ಲಿ 60 ವರ್ಷ ಕೆಲಸ ಮಾಡಿದ ಅವರು, ವಿಕ್ರಮನ ಕೈಯಲ್ಲಿ ಖಡ್ಗ ಹಿಡಿದುಕೊಂಡು, ಬೇತಾಳನ ಶವವನ್ನು ಹೆಗಲಮೇಲೆ ಹೊತ್ತುಕೊಂಡು ಹೋಗುವ ಚಿತ್ರ ಮೆಚ್ಚುಗೆ ಪಡೆದಿತ್ತು.



ರಾಕ್‌ಲೈನ್ ಸುಧಾಕರ್

ಬೆಂಗಳೂರಿನಲ್ಲಿ ಹಿರಿಯ ಹಾಸ್ಯನಟ ರಾಕ್‌ಲೈನ್ ಸುಧಾಕರ್ (60) ಹೃದಯಾಘಾತದಿಂದ ನಿಧನರಾಗಿದ್ದಾರೆ. ಸುಧಾಕರ್ ಬೆಳ್ಳಿತೆರೆ ಪ್ರವೇಶಿಸಿದ್ದು ಯೋಗರಾಜ ಭಟ್ ನಿರ್ದೇಶನದ ಪಂಚರಂಗಿ ಸಿನಿಮಾದ ಮೂಲಕ. ಇದು ತೆರೆಕಂಡಿದ್ದು 2010ರಲ್ಲಿ. ಇದಾದ ಬಳಿಕ ಅವರು ಪರಮಾತ್ಮ, ಟೋಪಿವಾಲ, ಅಜಿತ್, ಅಧ್ಯಕ್ಷ, ಕರ್ವ ಸೇರಿದಂತೆ ಹಲವು ಸಿನಿಮಾಗಳಲ್ಲಿ ನಟಿಸಿದ್ದಾರೆ.


ಕರೋನಾ ವಾರಿಯರ್ಸ್‌ಗಳ ಕಿರು ಪರಿಚಯ

ಡಾ. ಪೂರ್ಣಿಮಾ ಜೋಗಿ, ಕಾರ್ಯಕ್ರಮ ಅನುಷ್ಠಾನಾಧಿಕಾರಿ, ರಾ.ಸೇ.ಯೋ.



ಹೆಸರು : ಹರಿಕೃಷ್ಣ .ಆರ್

ಜಿಲ್ಲಾ ಸಶಸ್ತ್ರ ಮೀಸಲು ಪಡೆ ಪೊಲೀಸ್ ಕಾನ್ಸ್ಟೇಬಲ್ ಚಿಕ್ಕಬಳ್ಳಾಪುರ ಕೋವಿಡ್ 19ರ ಲಾಕ್ಡೌನ್ ಹಿನ್ನೆಲೆಯಲ್ಲಿ ಮಕ್ಕಳು ಮನೆಯಲ್ಲಿಯೇ ಸುರಕ್ಷಿತವಾಗಿದ್ದು ಸೃಜನಾತ್ಮಕತೆ ಮತ್ತು ಕ್ರಿಯಾತ್ಮಕವಾಗಿರಲು ಪುಟಾಣಿ ಮರಿ, ಮನೆಯಲ್ಲಿಯೇ ಇರಿ, ಚಿತ್ರ ಬರಿ ಶೀರ್ಷಿಕೆಯಡಿಯಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯಿಂದ ಚಿತ್ರ ಕಲಾ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಹಾಗೂ ಗಾಂಧಿ ಭವನ ಪ್ರಕಟಿತ ಗಾಂಧೀಜಿ ಅವರ ಪುಸ್ತಕಗಳನು ಶಿಕ್ಷಕರಿಗೆ ಅಧ್ಯಯನಕ್ಕಾಗಿ ಮತ್ತು ಮಹಾತ್ಮ ಗಾಂಧೀಜಿ ಅವರ ಶೈಕ್ಷಣಿಕ ಸಿದ್ಧಾಂತಗಳು ಪುಸ್ತಕಗಳನ್ನು ಚಿಕ್ಕಬಳ್ಳಾಪುರ ಜಿಲ್ಲೆಯ ವಿವಿದ ತಾಲೂಕಿನ ಗ್ರಾಮಗಳಲ್ಲಿ ಮನೆ ಮನೆಗಳಿಗೆ ತೆರಳಿ ವಿತರಿಸಿದರು.



ಹೆಸರು : ಎಂ. ಹೇಮಂತ್ ಕುಮಾರ್ .

ಕೆ.ಎಸ್.ಡಿ.ಕಾನ್ಸ್‌ಟೆಬಲ್, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಬೆಂಗಳೂರು ಕೇಂದ್ರೀಯ ವಿಭಾಗ, ವಿಭಾಗೀಯ ಕಚೇರಿ ಶಾಂತಿನಗರ ಬೆಂಗಳೂರು

ಕೋವಿಡ್ 19ರ ಲಾಕ್ ಡೌನ್ ಸಮಯದಲ್ಲಿ ಇವರು 150 ಮಂದಿಗೆ ತರಕಾರಿ, ದವಸ ಧಾನ್ಯಗಳ ಕಿಟ್, ಸಿದ್ಧಪಡಿಸಿದ ಆಹಾರ ಪದಾರ್ಥಗಳು, ನೀರಿನ ಬಾಟಲುಗಳನ್ನು, ಔಷಧಿಗಳನ್ನು ಸ್ಯಾನಿಟೈಸರ್ ಮತ್ತು ಪ್ರಥಮ ಚಿಕಿತ್ಸೆ ಅಗತ್ಯ ವಸ್ತುಗಳ ಕಿಟ್‌ಗಳನ್ನು ಅಗತ್ಯ ಇರುವವರಿಗೆ ವಿತರಿಸಿದ್ದಾರೆ. 05/06/2020 ರಂದು ವಿಶ್ವ ಪರಿಸರ ದಿನಾಚರಣೆ ಕಾರ್ಯಕ್ರಮಕ್ಕೆ 5001 ಸಸಿ ನೆಡುವ ಕಾರ್ಯಕ್ರಮ ಹಾಗೂ ಕರೋನಾ ವೈರಸ್ ರೋಗ ಲಕ್ಷಣಗಳ ಕುರಿತು ಜನಜಾಗೃತಿ ಮೂಡಿಸುವ ಕರ ಪತ್ರಗಳನ್ನು ವಿತರಣೆ ಮಾಡಿದ್ದರು.

FEVER!

Condensed form of 'Fever Book" - 1974 & Published by Hart Davis Macgibbos, P.O. - 9 St Albans, England : by John Fuller

continued from the previous edition...

Today the threat of plague seems unreal. Yet In January 1969 an unknown killer struck in Nigeria virus of such overwhelming power that in this age of jet travel it could trigger global calamity, In a dangerous race against time, a team of researchers risked their lives to track the virus to its source and find a vaccine that would be able to conquer it. This is the story of that quest, one of the most fascinating and Inspiring medical revelations of our time

When she had finished, nearly 200 cultures sat in rows of tubes and bottles, like a regiment of soldiers. The cells would be allowed to grow in their new environment for several days.

The task facing Downs and Casals was different. They were going to inject the blood and fluid specimens directly into the brains of a colony of mice. No racehorses had been bred with more care. The mice all had to be identical, or the tests would vary. And obviously they had to be free of other diseases.

The animals were individually housed in metal containers which resembled large bread bins. To reduce the danger of spreading infection tion should a mouse kick up disease-laden dust, each of the boxes had its own ventilating system which drew the air out into an incinerator. Realizing that one slip of a hypodermic needle could be fatal to themselves, Downs and Casals put their first batch of mice under deep either anaesthesia so that they couldn't wriggle unpredictably. Then Downs took a syringe with 2/100 millilitres of the suspect, straw-coloured serum, picked up a mouse, and plunged the needle into its cranium. Casala did the same.

When they finished their first injections, Downs and, "It might be a good idea, Jordi, not to tell your wife about this project." Jordi Casala nodded.

Ar Columbia Presbyterian Hospital, Penny Pinico's temperature word to 417 degrees centigrade (107). A lever as high as that in an adult is usually the threshold of death few can survive such an inner furnace, The doctors and nurses packed her in ice and placed her in an oxygen tent. They gave her aspirin and continued intravenous fluids. There was little else that could be done.

Slowly, her temperature fell, but in the wake of fever came pneumonia, bringing with it a flooding of the lungs and a barking cough. This was followed by inflammation of the brain. An incessant ringing in her ears developed, along with deafness and dizziness. There was internal bleeding. Her heart, kidney and other organs were affected. But she was still alive, and she had now survived longer than either of her stricken colleagues,


At Yale, on March 10, Sonja Buckley went to her laboratory to begin the assault on the tissue culturcs. She sucked out the old nutri en fluid from each bottle, using a glass pipette as she would a straw. The pipettes were plugged with cotton to prevent the fluid from coming up into her mouth, but at this point there was nothing to worry about because there was no serum containing 161 viruses in the bottles.

Then she added a new solution which would maintain the tissue cultures in good health, but not cause them to grow. Finally came the critical step. Sucking up the infected blood serum into pipette, she dropped 1/10 of one millilitre into each of a series of bottles. For a matching control group of bottles, she added only a nutrient broth without the diseased serum; then she put the bottles aside to incubate Meanwhile, Downs and Casals were looking for results. But their mice still appeared normal and healthy. If they stayed that way; it would be very doubtful that the blood sample contained a deadly virus. However, it was too soon to tell; some laboratory mice survived virus injection for nine or ten days. But by Tuesday morning, Jordi Casals was pessimistic about the outlook.

Disgruntled, he came into Sonja Buckley's lab and asked how she was daing. But she had nothing to report; apparently it was still too soon.

That afternoon, as Buckley was working with her cultures, Dr. Max Theiler, a Nobel laureate who had been given the award in 1951 for his work in developing the yellow fever vaccine, paid an informal visit and asked how the research was going.

To be continued...



ಪತ್ರ ವಿಭಾಗ : ಓದುಗರ ಪ್ರತಿಸ್ಪಂದನ

ಹಿರಿಯ ಲೇಖಕಿ ಡಾ. ವಸುಂಧರಾ ಭೂಪತಿ ಅವರ 'ಮಳೆಗಾಲದ ಆರೈಕೆ' ಲೇಖನವು ಕಷಾಯ, ಬಿಸಿನೀರಿನ ಮಹತ್ವ, ಕೆಂಡದ ರೊಟ್ಟಿ ಗುಗ್ಗರಿ ಮಾಡಿಕೊಂಡು ಬಳಸುವುದು, ಪರಿಸರದ ಸ್ವಚ್ಛತೆಯ ಬಗ್ಗೆ ಸೋದಾಹರಣವಾಗಿ ತಮ್ಮ ಬರಹದಲ್ಲಿ ಬಾಪು ಪ್ರಪಂಚ ಪತ್ರಿಕೆಯಲ್ಲಿ ತಿಳಿಸಿಕೊಟ್ಟಿದ್ದಾರೆ. ಅವರಿಗೆ ಧನ್ಯವಾದಗಳು.

ಸಿ. ಹೇಮಾವತಿ, ಖಜಾನೆ ಇಲಾಖೆ

ಇಮ್ಯುನಿಟಿ ಎಂದರೇನು? ಎಂಬ ಬಗೆಗಿನ ಲೇಖನದಲ್ಲಿ ಆರೋಗ್ಯಧಾಮದ ಡಾ. ಸಂದೀಪ್ ಅವರು ಜೀವಶಕ್ತಿ, ಪ್ರಾಣಶಕ್ತಿ, ವೈಟಾಲಿಟಿ, ರೋಗ ನಿರೋಧಕಶಕ್ತಿ ಎಂಬ ವಿವಿಧ ಪದಕೋಶಗಳ ಮೂಲಕ ಸರಳ ಸುಂದರವಾಗಿ ಮಾಹಿತಿ ನೀಡಿರುತ್ತಾರೆ. ಪ್ರತಿನಿತ್ಯ ಆರೋಗ್ಯಕ್ಕೆ ಬೇಕಾದ ಯೋಗಾಸನ, ಪ್ರಾಣಾಯಾಮ, ಒಂದು ಲೋಟ ನೀರು ಕುಡಿಯುವುದರಿಂದಾಗುವ ಆರೋಗ್ಯ ಸಿದ್ಧಿ, 'ಸಿ' ವಿಟಮಿನ್ ಇರುವ ಲಿಂಬೆ, ನೆಲ್ಲಿಕಾಯಿ, ಕಿತ್ತಳೆ, ಮೂಸಂಬಿ, ಹಸಿಶುಂಠಿ, ಕಾಳು ಮೆಣಸು ಮುಂತಾದವನ್ನು ಸೇವಿಸುವುದರಿಂದ ಈ ಕಾಲದಲ್ಲಿ ಹರಡುತ್ತಿರುವ ಸಾಂಕ್ರಮಿಕ ರೋಗಗಳನ್ನು ತಡೆಗಟ್ಟಬಹುದೆಂಬುದನ್ನು ಮನವರಿಕೆ ಮಾಡಿಕೊಟ್ಟಿದ್ದಾರೆ. ಇಂಥಹ ಲೇಖನಗಳನ್ನು ಪ್ರಕಟಿಸಿರುವ ಗಾಂಧಿ ಭವನಕ್ಕೆ, ಸಂಪಾದಕರಿಗೆ ಹಾಗೂ ವೈದ್ಯರಿಗೆ ಧನ್ಯವಾದಗಳು.

ಶಿವಣ್ಣ, ತುಮಕೂರು

ಪ್ರಾಧ್ಯಾಪಕರಾದ ಡಾ. ಶಿವಾನಂದ ಶೆಟ್ಟರ್ ಅವರು ವಿನೋಭಾ ಭಾವೆ ಅವರ ವ್ಯಕ್ತಿತ್ವ ಮತ್ತು ಚಿಂತನೆ ಯುವಕರಿಗೆ ತಲುಪಿಸುವಲ್ಲಿ ಅರ್ಥಪೂರ್ಣವಾಗಿ ಹೊರಹೊಮ್ಮಿದೆ. ಎಂದಿನಂತೆ 'ನವಭಾರತ ನಿರ್ಮಾಪಕರು' ಮಾಲಿಕೆಯಲ್ಲಿ ಲೋಕಮಾನ್ಯ ತಿಲಕರ ಇಂಗ್ಲೀಷ್ ಶಿಕ್ಷಣದ ಮಹತ್ವ, ಅಂದಿನ ಬ್ರಿಟಿಷರ ಆಡಳಿತಾತ್ಮಕ ಶಿಕ್ಷಣ ನೀತಿ ನಿರೂಪಣೆಗಳ ಬಗ್ಗೆ ಬಾಪು ಪ್ರಪಂಚ ಸಂಪಾದಕರಾದ ಇಂದಿರಾ ಕೃಷ್ಣಪ್ಪ ಅವರ ಬರಹ ಹಾಗೂ ಸಾಮಾಜಿಕ ವಿಜ್ಞಾನಿ ಶ್ರೀ ನಾರಾಯಣ ಗುರುವಿನ ಮುಖಪುಟ ಚಿತ್ರ ಹಾಗೂ ಅದರ ಬಗೆಗಿನ ಒಳಪುಟ 8ರಲ್ಲಿ ಪ್ರಕಟಗೊಂಡ ಉಪಯುಕ್ತ ಮಾಹಿತಿಯನ್ನು, ಡಾ. ಆದಿನಾರಾಯಣಪ್ಪ ಮತ್ತು ಡಾ. ಮೀನಾರಾಣಿ ಪಿ ಅವರ ಲೇಖನ ಪ್ರಸ್ತುತವೆನಿಸಿದೆ. ಲೇಖಕರಿಗೆ, ಸಂಪಾದಕರಿಗೆ ವಂದನೆಗಳು.

ಎಸ್. ಸಿದ್ದರಾಜು, ಚನ್ನಪಟ್ಟಣ

ಸಾಹಿತಿಗಳ ಪರಿಚಯ, ಕವನಗಳು, ಪುಸ್ತಕ ಪರಿಚಯ, ಗಾಂಧಿ ಮಾರ್ಗಿಗಳ ಲೇಖನಗಳು, ಗಾಂಧಿ ತತ್ವಗಳ ಪ್ರಬಂಧಗಳಿಂದ ಬಾಪು ಪ್ರಪಂಚ ವೈವಿಧ್ಯಮಯವಾದ ಪತ್ರಿಕೆಯಾಗಿ ಹೊರಹೊಮ್ಮುತ್ತಿದೆ. ಸಂಪಾದಕರಿಗೆ, ಪ್ರಕಾಶಕರಿಗೆ ಧನ್ಯವಾದಗಳು.

ನಳಿನಾ ಡಿ., ಪತ್ರಕರ್ತೆ, ಚಿಕ್ಕಮಗಳೂರು

ಬಾಪು ಸಂಚಿಕೆ ನೋಡಿದೆ. ಅಗದಿ ಸಂತೋಷ ಆಯ್ತು. ಸಂಪಾದಕರಾದ ಇಂದಿರಾ ಕೃಷ್ಣಪ್ಪ ಅವರ ಪ್ರಬುದ್ಧ ಲೇಖನಗಳು, ಕರೋನಾದಂಥಹ ಭೀಕರ ರೋಗ, ಪ್ಲೇಗ್ ಬಗ್ಗೆ ಇಂಗ್ಲೀಷ್‌ನ ಫೀವರ್ ಲೇಖನ ಹೊಸಹೊಸ ಸುದ್ದಿ ವಿಶೇಷಗಳೊಂದಿಗೆ ನಿಲುಗಡೆ ಇಲ್ಲದೆ ಓದಿಸಿಕೊಳ್ಳುವುದು ಬಾಪು ಪ್ರಪಂಚ.

ವಿ. ತಿಪ್ಪನಗೌಡ, ಉಪಾಧ್ಯಕ್ಷರು, ಗಾಂಧಿ ಭವನ

ಶಿಕ್ಷಕರ ದಿನಾಚರಣೆಯ ಮಹತ್ವ ಮತ್ತು ಶಿಕ್ಷಕರ ದಿನಾಚರಣೆಯನ್ನು ದೇಶದ ರಾಷ್ಟ್ರಾಧ್ಯಕ್ಷರಾಗಿದ್ದ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಪರಿಚಯವನ್ನು ಗಾಂಧಿ ಭವನದ ಅಧ್ಯಕ್ಷರು ತುಂಬಾ ಸುಂದರವಾಗಿ ಚಿತ್ರಿಸಿದ್ದಾರೆ. ಮೈಸೂರಿನಲ್ಲಿ ಪ್ರಾಧ್ಯಾಪಕರಾಗಿದ್ದನ್ನು, ಮೌಲ್ಯಯುತ ವಿಚಾರಧಾರೆಗಳು ಹಾಗೂ ಭಾರತೀಯ ಧರ್ಮ, ಸತ್ಸಂಗ, ರಾಜ್ಯಸಭೆಯಲ್ಲಿ ಸಂಸ್ಕೃತ ಶ್ಲೋಕಗಳನ್ನು ಹೇಳುತ್ತಿದ್ದುದು, ಉಪರಾಷ್ಟ್ರಪತಿ ಹಾಗೂ ರಾಷ್ಟ್ರಪತಿಗಳಾದ ಸಂದರ್ಭಗಳಲ್ಲಿ ಪರಿಚಯಿಸಿರುವ ಡಾ. ವೂಡೇ ಪಿ. ಕೃಷ್ಣ ಅವರಿಗೆ ವಂದನೆಗಳು.

ವೀಣಾ ಸಸುನ, ಗೋಕರ್ಣ

ಬಾಪು ಪ್ರಪಂಚ ಬಂದಾಕ್ಷಣ, ಮೊದಲಿಂದ, ಕಡೆಯ ಪುಟದವರೆಗೆ ಓದಿ ಮುಗಿಸುವವರೆಗೆ ನನಗೆ ಸಮಾಧಾನವಾಗುವುದಿಲ್ಲ. ಅಷ್ಟೊಂದು ಉತ್ತಮ ಲೇಖನಗಳು, ಸಂಪಾದಕರ ನುಡಿಗಳು, ಹೊಸ ಚಿಂತನೆಗೆ ಹಚ್ಚುತ್ತವೆ.

ಕೆ. ವನಜಾಕ್ಷಿ, ಬೆಂಗಳೂರು

ಪುಸ್ತಕ ಪರಿಚಯ : ಗಾಂಧಿ ಬಳಗದ ವಿದೇಶಿಯರು

– ಡಾ. ಎಸ್.ರಾಮಲಿಂಗೇಶ್ವರ (ಸಿಸಿರಾ), ಕೃತಿಕಾರರು : ವೇಮಗಲ್ ಸೋಮಶೇಖರ್

ವೇಮಗಲ್ ಸೋಮಶೇಖರ್ ಅವರು ವೃತ್ತಿಯಲ್ಲಿ ಭಾರತೀಯ ದೂರವಾಣಿ ಕಾರ್ಖಾನೆಯಲ್ಲಿ ಕರ್ತವ್ಯ ನಿರ್ವಹಿಸಿ ವಿಶ್ರಾಂತ ಜೀವನ ನಡೆಸುತ್ತಿದ್ದು, ಪ್ರವೃತ್ತಿಯಲ್ಲಿ ಸಂಶೋಧಕರೂ, ಸಾಹಿತಿಗಳೂ ಆಗಿದ್ದಾರೆ. ಕರ್ನಾಟಕದ ಬೆಂಗಳೂರಿನಲ್ಲಿ ಗಾಂಧೀಜಿ, ಅವರ ಪ್ರವಾಸ ಮತ್ತು ಅವರ ಚಿಂತನೆಗಳು, ಮೈಸೂರು ಅರಸರು, ವಸ್ತು ಸಂಗ್ರಹಾಲಯಗಳ ಕುರಿತಾಗಿ ಅಧ್ಯಯನ, ಸಂಶೋಧನೆಯ ಮೂಲಕ ಅನೇಕ ಕೃತಿಗಳನ್ನು ರಚಿಸಿದ್ದಾರೆ. ಸರಳರೂ, ಸಜ್ಜನರೂ ಆದ ಸೋಮಶೇಖರ್ ಅವರು ಬರೆದ, ಮಂಡ್ಯದ ಮಹಾತ್ಮ ಗಾಂಧೀ ಸ್ಮಾರಕ ಟ್ರಸ್ಟ್ (ರಿ) ಪ್ರಕಟಿಸಿರುವ 'ಮಹಾತ್ಮರ ಬಾಳು' ಕೃತಿಯು 2020ರ ಸಾಲಿನ, ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಹಿಂದಿನ ಅಧ್ಯಕ್ಷರಾದ ಡಾ. ಹೊ. ಶ್ರೀನಿವಾಸಯ್ಯ ಅವರು ತಮ್ಮ ಪತ್ನಿ ಶ್ರೀಮತಿ ಜಯಶ್ರೀ ಅವರ ಹೆಸರಿನಲ್ಲಿ ಸ್ಥಾಪಿಸಿರುವ 'ಜಯಶ್ರೀ ಸ್ಮಾರಕ ದತ್ತಿ ಪ್ರಶಸ್ತಿ'ಗೆ ಭಾಜನವಾಗಿದೆ. ಬಾಪೂಜಿ ಅವರ ಬದುಕಿಗೆ ಸಂಬಂಧಿಸಿದಂತೆ, ಗಾಂಧೀಜಿ ಅವರೇ ಬರೆದಿರುವ ಆತ್ಮಕಥೆ, ಪತ್ರ ವ್ಯವಹಾರ, ಸಮಕಾಲೀನ ಪತ್ರಿಕಾ ವರದಿಗಳು, ಗಾಂಧೀಜಿ ಅವರ ಕುರಿತು ಲಭ್ಯವಿರುವ ಹತ್ತಾರು ಸಾಹಿತ್ಯ ಕೃತಿಗಳ ಪೂರಕ ಅಧ್ಯಯನದಿಂದ ಸಂಗ್ರಹಿಸಿ ಕೃತಿಯೂ ಒಡಮೂಡಿ ಬಂದಿದೆ. ಈ ಸಂಕಲನದಲ್ಲಿರುವ 45 ಬಿಡಿ ಲೇಖನಗಳಲ್ಲಿ ಒಂದೊಂದು ಲೇಖನಗಳೂ ಮಹಾತ್ಮರ ವಿಭಿನ್ನ ದೃಷ್ಟಿಕೋನದಿಂದ ಅವರ ವ್ಯಕ್ತಿತ್ವವನ್ನು ಪ್ರತಿಬಿಂಬಿಸುವುದೇ ಆಗಿದೆ. ಶ್ರೀಸಾಮಾನ್ಯರೊಂದಿಗೆ ಗಾಂಧೀಜಿ ಅವರ ಗುಣಸ್ವಭಾವಗಳ ಚಿತ್ರಣಗಳು, ಸರಳತೆ, ಸಹನೆ, ಸತ್ಯಶೀಲತ್ವ, ನ್ಯಾಯ ನಿಷ್ಠುರತೆ, ಪ್ರಯೋಗಶೀಲ ಮನಸ್ಥಿತಿ, ಸೌಜನ್ಯಯುತ ಮಾನವ ಸಂಬಂಧಗಳು ಹರಳುಗಟ್ಟಿರುವುದನ್ನು ಸೂಕ್ಷ್ಮ ನೆಲೆಗಳಲ್ಲಿ ಗಾಂಧೀಜಿ ಅವರ ಧೀಮಂತ ವ್ಯಕ್ತಿತ್ವ ಈ ಎಲ್ಲಾ ಲೇಖನಗಳಲ್ಲಿ ಸಾಕಾರಗೊಂಡಿರುವುದನ್ನು ಸಹೃದಯರು ಗಮನಿಸಬಹುದು. 20ನೇ ಶತಮಾನದ ವಿಶ್ವವಿಖ್ಯಾತ ಸಂತ ಗಾಂಧೀಜಿ ಎಂಬ ಫಕೀರ, ಜೀವಚೈತನ್ಯವನ್ನು ಪ್ರತಿಯೊಂದು ಜೀವರಾಶಿಗಳ ಕಂಡ ಬಗೆಯನ್ನು ಇಲ್ಲಿ ಚಿತ್ರಿಸಲಾಗಿದೆ. ಗಾಂಧೀಜಿ ಅವರು ಹಾಕಿಕೊಟ್ಟ ಮಾರ್ಗ ನಮ್ಮೆಲ್ಲರಿಗೂ ಸಾರ್ವಕಾಲಿಕ ಸತ್ಯಮಾರ್ಗ ಆಗಿರುವುದನ್ನು 'ಮಹಾತ್ಮರ ಬಾಳು' ಕೃತಿಯ ಮೂಲಕ ಅರ್ಥಪೂರ್ಣವಾಗಿ ವೇಮಗಲ್ ಸೋಮಶೇಖರ್ ಅವರು ಕಟ್ಟಿಕೊಟ್ಟಿದ್ದಾರೆ. ಇವರಿಗೆ ಅನಂತ ಧನ್ಯವಾದಗಳು.

ಗಾಂಧಿ ಭವನದ ಕಾರ್ಯಕ್ರಮಗಳು



ಗಾಂಧಿ ಭವನದಲ್ಲಿ ದಿ.12.09.2020ರಂದು ನಡೆದ ಎಂ.ವಿ. ರಾಜಶೇಖರನ್ ದತ್ತಿ ಉಪನ್ಯಾಸದಲ್ಲಿ ಡಾ. ಗಣನಾಥಶೆಟ್ಟಿ, ಎಕ್ಕಾರು, ಜಂಟಿ ಕಾರ್ಯದರ್ಶಿ, ಎನ್.ಎಸ್.ಎಸ್., ಡಾ. ಹೆಚ್ ಹನುಮಂತಪ್ಪ, ಮಾಜಿ ರಾಜ್ಯಸಭಾ ಸದಸ್ಯರು, ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಗಾಂಧಿ ಭವನ, ಪಿ.ಜಿ.ಆರ್. ಸಿಂಧ್ಯಾ, ಮಾಜಿ ಸಚಿವರು, ಶ್ರೀಮತಿ ಗಿರಿಜಾ ರಾಜಶೇಖರನ್, ಶ್ರೀಮತಿ ಇಂದಿರಾ ಕೃಷ್ಣಪ್ಪ, ಕಾರ್ಯದರ್ಶಿ, ಗಾಂಧಿ ಭವನ.




ದಿ. 23.09.2020 ಬಯಲು ಬಂದಿಖಾನೆ, ದೇವನಹಳ್ಳಿಯಲ್ಲಿ ಕರ್ನಾಟಕ ಗಾಂಧೀ ಸ್ಮಾರಕ ನಿಧಿ, ಸುಮಂಗಲಿ ಸೇವಾಶ್ರಮ, ಕರ್ನಾಟಕ ಅಂಚೆ ನೌಕರರ ಸಾಹಿತ್ಯ ಬಳಗ, ಜೈ ಭಾರತ್ ಸಂಸ್ಥೆ, ಡಿ.ಸಿ.ಐ.ಸಿ. ವತಿಯಿಂದ ಕೋಟಿ ಸಸಿ ನೆಟ್ಟು ಪೋಷಿಸುವ ವೃಕ್ಷ ದಾಸೋಹ ಭಾಗವಾಗಿ ಐದು ಸಾವಿರ ಸಸಿ ನೆಡಲಾಯಿತು. ಚಿತ್ರದಲ್ಲಿ ಶ್ರೀ ಮಹದೇವ ಸ್ವಾಮಿಗಳು, ಬಸವ ಮಠ, ಗಾಂಧೀ ಭವನದ ಅಧ್ಯಕ್ಷರಾದ ಡಾ. ವೂಡೇ ಪಿ. ಕೃಷ್ಣ, ಶ್ರೀಮತಿ ಸುಶೀಲಮ್ಮ ಮತ್ತೆಲ್ಲರೂ ಇದ್ದಾರೆ.










ಗಾಂಧಿ ಭವನದಲ್ಲಿ ದಿ.02.10.2020ರಂದು ನಡೆದ ಬಾ ಬಾಪು ದಿನಾಚರಣೆಯಲ್ಲಿ ಜಯಶ್ರೀ ಟ್ರಸ್ಟ್ ಪುರಸ್ಕಾರ ವೇಮಗಲ್ ಸೋಮಶೇಖರ್ ಅವರ "ಮಹಾತ್ಮರ ಬಾಳು" ಕೃತಿಗೆ ಪ್ರಧಾನ ಹಾಗೂ ಶ್ರೀ ಯಾಕೂಬ್ ಕೊಯ್ಯಾರ್, ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ಪುರಸ್ಕೃತರು, ಡಾ. ಗಣನಾಥಶೆಟ್ಟಿ ಎಕ್ಕಾರು, ಜಂಟಿ ಕಾರ್ಯದರ್ಶಿ, ರಾ.ಸೇ.ಯೋ. ಗೌರವ ಪುರಸ್ಕಾರ ಪ್ರಧಾನ ಕಾರ್ಯಕ್ರಮದಲ್ಲಿ ಡಾ. ಎಸ್.ಎನ್. ಸುಬ್ಬರಾವ್ ನಿರ್ದೇಶಕರು, ರಾಷ್ಟ್ರೀಯ ಯುವ ಯೋಜನೆ, ಡಾ. ವೂಡೇ ಪಿ. ಕೃಷ್ಣ ಅಧ್ಯಕ್ಷರು, ಕ.ಗಾಂ.ಸ್ಮಾ. ನಿಧಿ, ಡಾ. ಎಲ್. ಹನುಮಂತಯ್ಯ ರಾಜ್ಯಸಭಾ ಸದಸ್ಯರು, ಶ್ರೀ ಹೆಚ್. ಹನುಮಂತಪ್ಪ, ರಾಜ್ಯಸಭಾ ಮಾಜಿ ಸದಸ್ಯರು, ಶ್ರೀ ಪ್ರಸನ್ನ ಹಿರಿಯ ರಂಗಕರ್ಮಿ, ಸಾಹಿತಿ, ಗ್ರಾಮಸೇವಾ ಸಂಘ, ಶ್ರೀ ಜೇರಿಗೆ ಲೋಕೇಶ್, ಎನ್.ಆರ್. ವಿಶುಕುಮಾರ್, ಶ್ರೀ ದಿನೇಶ್ ಇವರು ಭಾಗವಹಿಸಿದ್ದರು. ಮಹಾತ್ಮರ ಬಾಳು ಕೃತಿಗೆ ವೇಮಗಲ್ ಸೋಮಶೇಖರ್ ಅವರಿಗೆ ಜಯಶ್ರೀ ಪ್ರಶಸ್ತಿ ಪ್ರಧಾನ ಮತ್ತು ಕರೋನಾ ವಾರಿಯರ್ಸ್‌ಗೆ ಸನ್ಮಾನ





ದಿನಾಂಕ 06.10.2020ರಂದು ಗಾಂಧಿ ಅಂಗಳದಲ್ಲಿ ಹಾಥರಾಸ್ ಸಂತ್ರಸ್ಥೆ ಮನೀಷಾಳ ದುರ್ಮರಣಕ್ಕೆ ಮೌನ ಪ್ರತಿಭಟನೆ ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ, ಇಂದಿರಾ ಕೃಷ್ಣಪ್ಪ, ಗೌ. ಕಾರ್ಯದರ್ಶಿ, ಗಾಂಧಿ ಭವನದ ಸಿಬ್ಬಂದಿ ವರ್ಗ, ಡಾ. ವಸುಂಧರಾ ಭೂಪತಿ, ಡಾ. ರಾಮಲಿಂಗೇಶ್ವರ (ಸಿಸಿರಾ), ಡಾ. ಪ್ರಶಾಂತ್ ಎ., ಮಂಜುಳಾ ಶಿವಾನಂದ್, ಸುಮಾ, ಗುರುರಾಜ ಪೋಶೆಟ್ಟಿ, ವಿ. ಶ್ರೀಧರ್, ಕಲಾವಿದರ ಸಂಘ, ಗಿರಿಜಮ್ಮ, ವಲ್ಲಭ ನಿಕೇತನ ಹಾಗೂ ಗಾಂಧಿ ಪ್ರಣೀತ ಸಂಸ್ಥೆಗಳ ಪದಾಧಿಕಾರಿಗಳು ಭಾಗವಹಿಸಿದ್ದರು.



ಕೆಂಗೇರಿ ಉಪನಗರದ ಶೇಷಾದ್ರಿಪುರಂ ಅಕಾಡೆಮಿ ಆಫ್ ಬಿಸಿನೆಸ್ ಅಡ್ವಾನ್ಸ್ ಸ್ಟಡೀಸ್ ಕಾಲೇಜಿನಲ್ಲಿ ಗಾಂಧಿ ಜನ್ಮ ದಿನಾಚರಣೆ ದಿ.03.10.2020ರಂದು ನಡೆದಿದ್ದು ಕಾಲೇಜಿನ ಪ್ರಾಂಶುಪಾಲರು, ಪ್ರೊ. ಜಯರಾಂ, ಡಾ. ಪೂರ್ಣಿಮಾ ಜೋಗಿ, ಇಂದಿರಾ ಕೃಷ್ಣಪ್ಪ, ಡಾ. ಜ್ಯೋತಿ, ಡಬ್ಲ್ಯೂ.ಡಿ. ಅಶೋಕ, ಆಡಳಿತ ಮಂಡಳಿ ಸದಸ್ಯರು ಚಿತ್ರದಲ್ಲಿದ್ದಾರೆ. ನಿಂತಿರುವವರು, ಕಾಲೇಜಿನ ಅಧ್ಯಾಪಕ ಬಳಗ ಮತ್ತು ಪ್ರಶಸ್ತಿ ಪುರಸ್ಕೃತ ವಿದ್ಯಾರ್ಥಿಗಳು



ಶೇಷಾದ್ರಿಪುರಂ ಕಾಲೇಜಿನಲ್ಲಿ ಮಾದಕ ಪೇಯಗಳ ದುಷ್ಪಟಗಳ ಪರಿಣಾಮ ಕುರಿತು ಜಾಗೃತಿ ಸಭೆಯನ್ನು ಬೆಂಗಳೂರು ವಿವಿ ಉಪ ಕುಲಪತಿ ಎಸ್.ಜಾಫೆಟ್ ಉದ್ಘಾಟಿಸಿದರು, ಡಾ. ಗಣನಾಥಶೆಟ್ಟಿ ಎಕ್ಕಾರು, ಡಾ. ವೂಡೇ ಪಿ. ಕೃಷ್ಣ, ಅಧ್ಯಕ್ಷರು, ಗಾಂಧಿ ಭವನ, ಎಂ.ಎಸ್. ನಟರಾಜ್, ಕೃಷ್ಣಸ್ವಾಮಿ, ಡಾ. ಸತೀಶ್‌ಗೌಡ, ಡಾ. ಪ್ರತಿಮಾ ಮೂರ್ತಿ, ಪ್ರತಾಪ್ ನಿಂಗಯ್ಯ, ಪ್ರಾಂಶುಪಾಲರಾದ ಡಾ. ಎಚ್.ಎನ್. ಮೋರೆ ಮತ್ತಿತರರು ಉಪಸ್ಥಿತರಿದ್ದರು.





ಗಾಂಧಿ ಭವನದಲ್ಲಿ ದಿ.02.10.2020ರಂದು ಗಾಂಧಿ ವಿಶೇಷ ಚಿತ್ರಪ್ರದರ್ಶನ ಮತ್ತು ಪುಸ್ತಕ ಪ್ರದರ್ಶನಗಳನ್ನು ಶ್ರೀಮತಿ ಇಂದಿರಾ ಕೃಷ್ಣಪ್ಪ ಉದ್ಘಾಟಿಸಿದ ಸಂದರ್ಭದಲ್ಲಿ, ಚಿತ್ರದಲ್ಲಿ ಡಾ. ಜಯಶ್ರೀ, ಉಪ ನಿರ್ದೇಶಕರು, ಶ್ರೀಮತಿ ಕಿರಣ್ಮಯಿ, ಸಹಾಯಕ ನಿರ್ದೇಶಕರು, ಸಿ.ವಿ. ಪಾಟೀಲ್, ಸಿಬ್ಬಂದಿವರ್ಗ, ಕೇಂದ್ರ ವಾರ್ತಾ ಪ್ರಸಾರ ಸಚಿವಾಲಯದವರು ಇದ್ದಾರೆ.

'ಇಲ್ಲ' 'ಸಾಧ್ಯವಿಲ್ಲ' ಎಂದು ಎಂದೂ ಹೇಳಬೇಡಿ. ಏಕೆಂದರೆ ನೀವು ಅನಾದಿ, ಅನಂತ. ನಿಮ್ಮ ಸಹಜಭಾವದೊಂದಿಗೆ ಹೋಲಿಸಿದರೆ ಕಾಲದೇಶಗಳ ಗಣನೆಗೆ ಜಯವಿಲ್ಲ. ಏನಾದರೂ, ಯಾವುದನ್ನಾದರೂ ನೀವು ಮಾಡಬಲ್ಲಿರಿ. ನೀವು ಸರ್ವಶಕ್ತರು.

– ಸ್ವಾಮಿ ವಿವೇಕಾನಂದ

ನಾಳೆಯಿಂದ ಗ್ರಾಮೋದ್ಯೋಗ ಉತ್ಪನ್ನ ಪ್ರದರ್ಶನ, ಮಾರಾಟ

ಬೆಂಗಳೂರಿನ ಗಾಂಧಿ ಭವನದಲ್ಲಿ ಸಮಾವೇಶ: ಪ್ರಸನ್ನ



ಹೊಸದಿಗಂತ ಶನಿವಾರ, 3 ಅಕ್ಟೋಬರ್ 2020

ಮಹಾತ್ಮರ ಬಾಳು ಕೃತಿಗೆ ಪುರಸ್ಕಾರ



ಗಾಂಧಿ ತತ್ವಸಿದ್ಧಾಂತ ಅಳವಡಿಸಿಕೊಳ್ಳಿ



ಕೆಂಗೇರಿ ಉಪನಗರದ ಶೇಷಾದ್ರಿಪುರಂ ಕಾಲೇಜಿನ ಆವರಣದಲ್ಲಿ ಆಯೋಜಿಸಿದ್ದ 'ಬಾ-ಬಾಪು 150ರ ಸಂಭ್ರಮ'ದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಡಾ. ಇಂದಿರಾ ಕೃಷ್ಣಪ್ಪ, ಶೇಷಾದ್ರಿಪುರಂ ಶಿಕ್ಷಣದತ್ತಿಯ ಧರ್ಮದರ್ಶಿ ಡಬ್ಲ್ಯೂ... ಪ್ರಾಂಶುಪಾಲ ಪ್ರೊ. ಜಯರಾಮ್ ಇದ್ದರು.

ಸಂಯುಕ್ತ ಕರ್ನಾಟಕ Sat, 03 Octob



ಸಸಿ ನೆಡುವುದಕ್ಕಿಂತ ಸಂರಕ್ಷಣೆ ಮುಖ್ಯ



ಸಿದ್ದಾರೂಢರಿಗೆ ಖಾದಿ ತೊಡಿಸಿದ್ದ ಬಾಪೂಜಿ


ಸೇವಾ ಮನೋಭಾವದ ಸಂಸ್ಥೆಗಳಿಗೆ ಮಾತ್ರ ರಕ್ತ ಕೊಡುವ ವ್ಯವಸ್ಥೆಯಾಗಲಿ



ಕರ್ನಾಟಕ ರಾಜ್ಯ ರೆಡ್ ಕ್ರಾಸ್ ಸಂಸ್ಥೆಯಲ್ಲಿ ನಡೆದ ರಕ್ತದಾನ ದಿನಾಚರಣೆಯಲ್ಲಿ ಸಭಾಪತಿ ಎಸ್...

ಬೆಂಗಳೂರು

ಕೊರೊನಾ ತಡೆಗೆ ಸಾರ್ವಜನಿಕರ ಸಹಕಾರ ಅಗತ್ಯ




ಕೊರೊನಾ ವಾರಿಯರ್ಸ್ ಪ್ರಶಸ್ತಿ

ಡಾ. ನಿರಂಜನ ವಾನಳ್ಳಿ ಕೃತಿ ಗಾಂಧಿಯೊಳಗಿನ ಪತ್ರಕರ್ತ ಬಿಡುಗಡೆ ಇಂದು

ಅಸಾಮಾನ್ಯ ಪತ್ರಕರ್ತ ಗಾಂಧಿ





ಡಾ. ನಿರಂಜನ ವಾನಳ್ಳಿ ಅವರ 36ನೇ ಕೃತಿ 'ಗಾಂಧಿಯೊಳಗಿನ ಪತ್ರಕರ್ತ'

Movement launched to promote handspun

Save Gramodyog Movement, launched on Tuesday, urges p... the cities to buy khadi and sustain rural industries

ANILA KURIAN
TEAM METROLIFE

A campaign launched on Tuesday is aimed at connecting handloom weavers, fashion designers and urban consumers. Gram Seva Sangh, Bengaluru, is collaborating with Participatory Guarantee System and Karnataka Gandhi Smaraka Nidhi, for its Save Gramodyog Movement.

The main objective of the movement is to create awareness among urban consumers about their role in protecting the rural economy, especially those producing fabrics and handicrafts.

Well-known theatre director and activist Prasanna told *Metrolife* ...



From left: Indira Krishnappa, secretary, Gandhi Bhavan, Abhilash CA, convenor, Gram Seva Sangh, Pavithra Muddaya, designer, and freedom fighter H S Doreswamy at the launch of Save Gramodyog Movement on Tuesday. DH PHOTO BY PUSHKAR V

KHADI FOR GANDHI JAYANTI

Fashion designer Prasad Bidapa is asking everyone to wear and promote khadi to mark Gandhi Jayanti. "Weavers have done a lot and it will be great to show them some support."



ಪುಸ್ತಕ ವಿಭಾಗ

(ಪ್ರಸಿದ್ಧ ಕೃತಿಗಳ ಸಂಕ್ಷಿಪ್ತ ಭಾಗ ನಿಯತವಾಗಿ ಬರಲಿವೆ)

ROOTS : Sold Into Slavery

Condensed form of the story by Alex Harley

Continued from previous edition...

More than a decade ago, Alex Haley began a long and arduous attempt to discover his ancestral roots. Like most black Americans, he had little to go on at first-only a few meagre clues, given to him in childhood. But as he pursued his search, the pieces of his ancient family puzzle began to fall into place. The story that finally emerged portrays not merely the agony of one man but, in a very real sense, the epic journey of the American Negro. In "By Slave Ship to America,' the first part of 'Roots, which appeared last month, Haley re-created the boyhood of his African ancestor, Kunta Kinte, Kunta's capture in 1767 by slavers and the ordeal of his passage across the Atlantic on a slave ship. 'Sold into Slavery' brings the young Kunta to the alien and cruel world of colonial America.

Kunta reflected on all that he saw. and heard, and could neither understand nor accept it. And each night before sleep, he swore to his forefathers that he would escape; that he would die before he became like these black ones here.

CRUEL CHOICE

KUNTA's left ankle finally became so infected from the chafing of the iron that the overseer had the iron
burrowed into the cotton and rode undetected. But when dawn touched the sky he left the wagon and disappeared into the undergrowth. With his bonds gone and unable to abide waiting, Kunta stoleawaythatnight, butSamsoncaughthimonlyashort distance from his hut. Kunta was pummelled and kicked, but not whipped or shackled. Soon he fled again after what the blacks called "snow" had fallen from the sky. The overseer caught up with him on one of the big farm horses by following the marks he made in the filmy whiteness. This time he was whipped and chained down. Yet he knew that as soon as the opportunity came, he would try again. The moons went by, the fields were ploughed, and spring planting began with seeds of various kinds, mostly of maize and something called "cotton." Kunta was un shackled, and he did what he was ordered to do, biding his time, chopping away weeds from the plants. As the harvesting began, Kunta noticed that wagons appeared more and more frequently on the distant roads, carrying the cotton to market. It came to him: the way to escape was to hide in a wagon which would carry him far away. His head burst with planning the details of the escape. He ruled out the cotton wagons of the farm on which he worked; someone was always watching. It must be one of the wagons which he had seen far off, moving along the main road, One night, on the pretext of going to the outhouse, he studied the 3 DIGEST road. The flickering light of lanterns moving along told him the wagon travelled in darkness as well as daylight. Another night he was able to kill a rabbit with a rock; he dried it as he had learnt to do in Juffure Then he honed to sharpness an old, rusty knife blade he had found and carved a wooden handle for it. He who made â safo charm. It had a cock's feather to attract the spirits, a horse's hair for strength and a bird's wishbone for success, all wrapped and sewn inside a square of burlap One evening he pushed the dried pieces of rabbit into a pocket and tied the safo tightly about his upper right arm. Listening tensely through his hut door, he heard the familiar night routine of the other blacks. Finally their mournful singing ended. When he was sure they were asleep, Kunta grasped his home made knife and slipPed out. Seeing and sensing no one about, he bent low and began running Where the farm road met the big road he huddled down into a thick growth of bushes. Soon he heard a wagon. It seemed for ever before its flickering light even came into view, but finally it was directly opposite Kunta. Two figures sat in front, but there was no rear look out. Teeth drenched, muscles quivering, Kunta burat from the undergrowth, squatsted behind the squeaking wagon and it bumped over rough paddled over the tailboard. The night was his friend, and he burrowed into the cotton and rode undetected. But when dawn touched the sky he left the wagon and disappeared into the undergrowth. The dew that sprinkled him felt good, and he swung his knife as if it were weightless, working deep into what he assured himself was a large area of forest.

To be continued...

ಕರ್ನಾಟಕ ಗಾಂಧೀ ಸ್ಮಾರಕ ನಿಧಿ ಪ್ರಕಟಣೆಗಳು



Tariff rates for Advertisement in Bapu Prapancha Kannada English Monthly Magzine

Sl.no.	Particulars	Rates (Rs)
1	Half Page (Black & White)	1,000.00
2	Full Page (Black & White)	2,000.00
3	Half Page (Extra)	2,000.00
4	Full Page (Colour)	4,000.00
5	2nd Cover Page	5,000.00
6	3rd Back Cover Page	5,000.00
7	Back Cover Page	10,000.00

RNI NO : KARBIL/2019/77950


If undelivered please return to: Hon. Secretary, Karnataka Gandhi Smaraka Nidhi, Gandhi Bhavana, Kumara Park Post, Bengaluru - 560001,Ph: 080 22261967, Email : gandhibhavanabengaluru@gmail.com

ಬಾಪು ಪ್ರಪಂಚ ಕನ್ನಡ-ಇಂಗ್ಲಿಷ್ ಮಾಸ ಪತ್ರಿಕೆ
RNI NO : KARBIL/2019/77950
Registered No. : KA/BGGPO/2589/2020-2022
published 15th of every month and posted on 20th of every month at Patrikachannel, Bengaluru - 560026



ಆ್ಯನಿ ಬೆಸೆಂಟ್ (01.10.1847 – 20.09.1933)

ಥಿಯೊಸೊಫಿಸ್ಟ್, ಮಹಿಳಾ ಹಕ್ಕುಗಳ ಹೋರಾಟಗಾರ್ತಿ, ಬರಹಗಾರ್ತಿ ಮತ್ತು ವಾಗ್ಮಿ, ಭಾರತದ ಸ್ವಾತಂತ್ರ್ಯ, ತತ್ವಜ್ಞಾನ, ಯೋಗದಲ್ಲಿನ ಅವರ ಆಸಕ್ತಿ, ಅವರು ಭಾರತಕ್ಕೆ ಬರಲು ಪ್ರೇರಣೆಯಾಯಿತು. ಕೇಂದ್ರಿಯ ಹಿಂದೂ ಕಾಲೇಜನ್ನು ಭಾರತದಲ್ಲಿ ಸ್ಥಾಪಿಸಲು ಸಹಾಯಮಾಡಿದರು. ಅವರು ಭಾರತದ ರಾಷ್ಟ್ರೀಯ ಕಾಗ್ರೆಂಸ್‌ನ್ನು ಸೇರುವ ಮೂಲಕ ಭಾರತದ ರಾಜಕೀಯದಲ್ಲಿ ತೊಡಗಿಸಿಕೊಂಡರು. 1914ರಲ್ಲಿ ಯುರೋಪಿನಲ್ಲಿ ಯುದ್ಧ ಅರಂಭವಾದಾಗ, ಭಾರತದ ಪ್ರಜಾಪ್ರಭುತ್ವಕ್ಕಾಗಿ ಹೋಂ ರೂಲ್ ಲೀಗ್‌ನ್ನು ಸ್ಥಾಪಿಸಿದರು. 1917ರ ಕೊನೆಯಲ್ಲಿ ಭಾರತದ ರಾಷ್ಟ್ರೀಯ ಕಾಂಗ್ರೆಸ್‌ನ ಚುನಾವಣೆಯಲ್ಲಿ ಯಶಸ್ವಿಯಾಗಿ ಅಧ್ಯಕ್ಷೆ ಆಗಿ ಆಯ್ಕೆಯಾದರು. 'ಕಾಮನ್ ವೀಲ್' ಮತ್ತು 'ದಿ ನ್ಯೂ ಇಂಡಿಯಾ' ಎಂಬ ಎರಡು ಇಂಗ್ಲಿಷ್ ನಿಯತಕಾಲಿಕಗಳನ್ನು ಆರಂಭಿಸಿದವರು. ಥಿಯಾಸೋಫಿಕಲ್ ಸೊಸೈಟಿ ಆಫ್ ಇಂಡಿಯಾದ ಶಾಖೆಗಳನ್ನು ದೇಶದ ಅನೇಕ ಕಡೆಗಳಲ್ಲಿ ಸ್ಥಾಪಿಸಿದರು. ಮಹಿಳೆಯರ ಹಕ್ಕುಗಳು, ಜನನ ನಿಯಂತ್ರಣ, ಫ್ಯಾಬಿಯನ್ ಸಮಾಜವಾದ ಮತ್ತು ಕಾರ್ಮಿಕರ ಹಕ್ಕುಗಳಿಗಾಗಿ ಹೋರಾಡಿದರು. ಅವರ ಅಂತಿಮ ದಿನಗಳ ವರೆಗೂ ಭಾರತದ ಸ್ವಾತಂತ್ರ ಚಳುವಳಿಯಲ್ಲಿ ಭಾಗಿಯಾಗಿದ್ದರು. ಮದ್ರಾಸ್‌ನ ಥಿಯಾಸೊಫಿಕಲ್ ಸೊಸೈಟಿಯ, ಆಡ್ಯಾರ್ ಶಾಖೆಯಲ್ಲಿ ಕೊನೆಯ ದಿನಗಳನ್ನು ಕಳೆದು, 1933ರಲ್ಲಿ ನಿಧನರಾದರು. ಗಾಂಧಿ ಅವರು "ಮಹಾಜ್ಯೋತಿಯೊಂದು ಆರಿಹೋಯಿತು" ಎಂದು ಶೋಕಿಸಿದರು.



ಎಂ.ವಿ. ಸೀತಾರಾಮಯ್ಯ (09.09.1910–12.03.1990)

'ರಾಘವ ಎಂಬ ಕಾವ್ಯನಾಮದಿಂದ ಖ್ಯಾತರಾಗಿದ್ದ ಪ್ರೊ. ಎಂ.ವಿ. ಸೀತಾರಾಮಯ್ಯ ಅವರು ಕನ್ನಡ ಸಾಹಿತ್ಯದ ವಿಶಿಷ್ಟ ಚೇತನ. ತಮ್ಮ ಸಾಹಿತ್ಯಿಕ ಬದುಕಿನಲ್ಲಿ ಕವನ, ಕಥೆ ಕಾದಂಬರಿ, ಮಕ್ಕಳ ಸಾಹಿತ್ಯ, ಕಾವ್ಯ ಸಂಪಾದನೆ, ವ್ಯಾಕರಣ, ಛಂದಸ್ಸು, ಕಾವ್ಯ ಮೀಮಾಂಸೆ, ಸಂಶೋಧನೆಗಳಿಂದ ಐದು ದಶಕಗಳ ಕಾಲ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ ಹಿರಿಯ ಸಾಹಿತಿಗಳಾಗಿದ್ದಾರೆ. ಕನ್ನಡ ನವೋದಯ ಕಾಲದಲ್ಲಿ ಹಳೆಗನ್ನಡ ಪರಂಪರೆ ಆಧುನಿಕ ಕನ್ನಡ ಹಾಗೂ ಇಂಗ್ಲಿಷ್ ಸಾಹಿತ್ಯವನ್ನುಬೆಸೆದು, ಸಾಹಿತ್ಯ ನಿರ್ಮಿತಿಗೆ ಭದ್ರ ಸೇತುವಾದವರು ಪ್ರೊ. ಎಂ.ವಿ. ಸೀತಾರಾಮಯ್ಯ ಅವರಾಗಿದ್ದಾರೆ. ಇವರು. ಕವಿರಾಜಮಾರ್ಗ ಆದಿಗ್ರಂಥದ ಕುರಿತಾದ ಇವರ ವಿದ್ವತ್‌ಪೂರ್ಣ ಬರಹ ಕಾವ್ಯಮೀಮಾಂಸೆಗೆ ಸಂಬಂಧಿಸಿದ ಚಿಂತನೆಗಳೆಲ್ಲಕ್ಕೂ ತಳಹದಿಯ ರೂಪದಲ್ಲಿವೆ. ಎಂ.ವಿ.ಸೀ. ಅವರು "ಕಾವ್ಯವನ್ನು ಮತಧರ್ಮದ ಸಹಚರಿಯನ್ನಾಗಿಸಿ ಕಾವ್ಯ ಧರ್ಮಕ್ಕೆ ಸತ್ಸಂಗದ ಭವ್ಯತೆಯನ್ನು ತಂದರು. ಈ ಸಂಪ್ರದಾಯಕ್ಕೆ ಮೊದಲಿಗನಾದ ಕೀರ್ತಿ ಪಂಪನದು" ಎಂದು ಸರಿಯಾಗಿಯೇ ಗುರುತಿಸಿದ್ದಾರೆ. ಪಗರಣದ (ಪಗರಣ ಎಂದರೆ ಹಾಸ್ಯ ಪ್ರಧಾನ, ವೇಷಪ್ರಧಾನ ನಡುವೆ ಕುಣಿತ ಹಾಡುಗಳ ವಸ್ತು ಸಂವಿಧಾನ ನಿಬದ್ಧವಲ್ಲದ ಒಂದು ರೂಪಕದ ಪ್ರಕಾರ) ಪ್ರಾಚೀನತೆ, ವಿವಿಧ ಕಾಲಘಟ್ಟದಲ್ಲಿ ಅದು ತಾಳಿದ ಸ್ವರೂಪಗಳಿಗೆ ಸಂಬಂಧಿಸಿದಂತೆ, ಎಂ.ವಿ.ಸೀ. ಅವರ ಸಂಶೋಧನೆ ಅತ್ಯಂತ ಪ್ರಶಂಸಾರ್ಹವಾದವು. ಕನ್ನಡ ಸಾಹಿತ್ಯದಲ್ಲಿ 'ಶಾಂತರಸ'ಕ್ಕೆ ಸಂಬಂಧಿಸಿದಂತೆ ಸುಧೀರ್ಘ ಚರ್ಚೆಯನ್ನು ಆರಂಭಿಸಿ ವೀ.ಸೀ. ಅವರು ಜೈನ ಕವಿಗಳು ನೀಡಿರುವ ಕೊಡುಗೆಯನ್ನು ವಿಸ್ತಾರವಾಗಿ ತಿಳಿಸಿದ್ದಾರೆ. ಇವರು ಬಿ.ಎಂ.ಶ್ರೀ ಸ್ಮಾರಕ ಪ್ರತಿಷ್ಠಾನ ಸಂಸ್ಥೆಯನ್ನು ಸ್ಥಾಪಿಸಿದರು. ಹಸ್ತಪ್ರತಿಶಾಸ್ತ್ರ ಎಂಬ ಸಂಶೋಧನೆ ಪ್ರಕಾರವನ್ನು ಆರಂಭಿಸಿ ಅಳಿಸಿ ಹೋಗುತ್ತಿದ್ದ ಪ್ರಾಚೀನ ಸಾಹಿತ್ಯದ ಸಂಗ್ರಹ, ಸಂರಕ್ಷಣೆಯನ್ನು ಮಾಡಿದ ಕೀರ್ತಿ ಇವರಿಗೆ ಸಲ್ಲುತ್ತದೆ.



ಲೂಯಿಸ್ ಪಾಶ್ಚರ್ (27.12.1822–28.09.1895

ಇವರು ಫ್ರೆಂಚ್ ರಾಸಾಯನಿಕ ಶಾಸ್ತ್ರಜ್ಞ ಮತ್ತು ಸೂಕ್ಷ್ಮಜೀವಿ ಸಂಶೋಧಕ. ಅವರ ಸಂಶೋಧನೆಗಳು ಮಕ್ಕಳ ಮಾರಕ ಜ್ವರದ ಪತ್ತೆ ಮತ್ತು ಚಿಕ್ಕಮಕ್ಕಳ ಸಾವು ಕಡಿಮೆಯಾಗಲು ಕಾರಣವಾಗಿದೆ. ಅಲ್ಲದೇ ರೇಬೀಸ್ ರೋಗಕ್ಕೆ ಮೊದಲ ಬಾರಿಗೆ ಲಸಿಕೆಯನ್ನು ಕಂಡು ಹಿಡಿದವರಾಗಿದ್ದಾರೆ. ಆತನ ಪ್ರಯೋಗಗಳು ಕ್ರಿಮಿಗಳ ಮೂಲಕ ರೋಗ ಹರಡುವ ವಿಧಾನವನ್ನು ಕಂಡು ಹಿಡಿದವು. ಹಾಲು ಮತ್ತು ವೈನ್ (ಮದ್ಯಸಾರ)ಗಳಿಂದ ಉಂಟಾಗುವ ಸಾವು ನೋವುಗಳನ್ನು ಪಾಶ್ಚರೈಸೇಶನ್ ಮೂಲಕ ಕಡಿಮೆ ಮಾಡುವ ಸೂಕ್ಷ್ಮ ಜೀವಿ ವಿಜ್ಞಾನದ ಮೂವರಲ್ಲಿ ಈತನೂ ಒಬ್ಬನಾಗಿದ್ದಾನೆ. ಈತನನ್ನು "ಬ್ಯಾಕ್ಟೀರಿಯೊಲಾಜಿಗಳ ಜನಕ" ಎಂದು ಕರೆಯಲಾಗುತ್ತದೆ. ಹಾಲನ್ನು ಚೆನ್ನಾಗಿ ಕಾಯಿಸುವುದರಿಂದ ಅದರೊಳಗಿನ ಸೂಕ್ಷ್ಮಾಣುಗಳನ್ನು ಸಾಕಷ್ಟು ಮಟ್ಟಿಗೆ ನಿವಾರಿಸಿ ಹಾಲನ್ನು ಸಂರಕ್ಷಿಸಬಹುದು. ಇದರಿಂದಾಗಿ ಅದರಲ್ಲಿರುವ ಬ್ಯಾಕ್ಟೀರಿಯಾಗಳನ್ನು ನಾಶಪಡಿಸಬಹುದಾಗಿದೆ ಎಂದು, ಇದರ ಮೊದಲ ಪರೀಕ್ಷೆಯನ್ನು ಏಪ್ರಿಲ್ 20, 1862ರಲ್ಲಿ ಮಾಡಿದ ನಂತರ ಈ ಸಂಸ್ಕರಣೆಯನ್ನು ಪಾಸ್ಚೈರೈಸೇಶನ್ ಎಂದು ಕರೆಯಲಾಯಿತು. ಹೀಗೆ ಪಾನೀಯಗಳಲ್ಲಿನ ಇಂಥಹ ಸೂಕ್ಷ್ಮ ಜೀವಾಣುಗಳಿಂದ ಉಂಟಾಗುವ ದೋಷವು ಪ್ರಾಣಿ ಮತ್ತು ಮನುಷ್ಯರಲ್ಲಿ ಕಾಯಿಲೆಗೆ ಕಾರಣವಾಗುತ್ತದೆ ಎಂದು ಮನುಷ್ಯನ ದೇಹದಲ್ಲಿ ಸೂಕ್ಷ್ಮ ಜೀವಾಣುಗಳ ಸೇರುವಿಕೆಯನ್ನು ತಡೆದರೆ ಅದರಿಂದ ನಂಜಾಗುವುದನ್ನು, ಪ್ರತಿವಿಷ ತಡೆಯುವ ವಿಧಾನವನ್ನು ಕಂಡು ಹಿಡಿಯಲಾಯಿತು.

ಇವರಿಗೆ,

____

____

Print and Published by Secretary, Karnataka Gandhi Smaraka Nidhi on behalf of Gandhi Bhavana, Kumarapark East, Bengaluru - 560001, Ph : 080 22261967, Printed at CreativeGeekZ, #58, Yadhava College Road, Madhavanagara Bengaluru - 560001, Ph : 080 40927049